ಅಚಲ

ಸಂಪುಟ 11 | ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ | ನವೆಂಬರ್ 1996
ಸಂಚಿಕೆ 5 | ದ್ವೈಮಾಸಿಕ | ಬೆಂಗಳೂರು

ಸಂಪಾದಕ ಮಂಡಲಿ
ಎನ್. ಗಾಯತ್ರಿ
ನೇಮಿಚಂದ್ರ, ದೇವಿ
ಡಾ|| ಬಿ.ಎನ್. ಸುಮಿತ್ರಾಬಾಯಿ
ಶಾಂತಾ ನಾಗರಾಜ್

ಪ್ರಕಾಶಕರು
ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ
ಬೆಂಗಳೂರು

ಬೆಲೆ (ರೂಗಳಲ್ಲಿ)
ಬಿಡಿ ಪ್ರತಿ - 4 ರೂ.
ವಾರ್ಷಿಕ ಚಂದಾ - 25 ರೂ.
ಅಜೀವ ಚಂದಾ - 200 ರೂ.
(ಸಂಸ್ಥೆಗಳಿಗೆ) - 250 ರೂ.

ಚಂದಾ ಮತ್ತು ಲೇಖನಗಳನ್ನು
ಕಳುಹಿಸುವ ವಿಳಾಸ

ಸಂಪಾದಕರು
ಅಚಲ
ಬಿ-30, ರಿಸರ್ವ್ ಬ್ಯಾಂಕ್ ಸ್ಟಾಫ್ ಕ್ವಾರ್ಟರ್ಸ್
1ನೇ ಮುಖ್ಯರಸ್ತೆ, 9ನೇ ಕ್ರಾಸ್
ವಿಜಯನಗರ ಎರಡನೇ ಹಂತ,
ಬೆಂಗಳೂರು - 40

ಅಂತರಂಗ

ಹುಡುಕಾಟ

ಉತ್ತರಗಳ ಒಡಲೊಳಗಿಟ್ಟು
ಗೂಡುಕಟ್ಟಿ
ನಿಗೂಢವಾದವರು;
ಬೋನಸ್ ಇನ್‌ಕ್ರೀಮೆಂಟಿಲ್ಲದೆ
ಬದುಕೇ ಲಾಟರಿಯೆಂದು
ಚಪ್ಪಾಳೆ ತಟ್ಟುತ್ತ
ಚಿತ್ತದೊಳಗಿನ
ಪ್ರಶ್ನೆಗಳಿಗೆ ಉತ್ತರವ
ಹುಡುಕುತ್ತಾ...
ಕಾದುಕುಳಿತವರು.

ಅಳತೆ

ಶೂನ್ಯದಾಗಸದಡಿ
ಒಬ್ಬಳೇ ಕುಳಿತು
ಕತ್ತಲೆಯ ಕರಾಳತೆ
ಅಳೆಯಲು ಯತ್ನಿಸುತ್ತಿದ್ದೆ!
ಅಳೆದಷ್ಟು ಅಳತೆಗೇ ಸಿಕ್ಕದೆ
ಸಿಕ್ಕಿದ್ದೂ ದಕ್ಕದೆ
''ದರಿದ್ರದವಳ'' ಎಂಬ ಭಯದಿ
ಭವಲೋಕದ
ಈ ಮಾಯೆಗೆ ಮೌನವಾಗೆ
ನಾ- ಬಿಕ್ಕುತ್ತಿದ್ದೆ.

ಆಳುಕರು

ನಮ್ಮ ಕಾಲುಗಳ ಕಚ್ಚಿ
ಗೆಲ್ಲಬಯಸದಿರಿ
ವ್ಯವಸ್ಥೆಯಡಿ ಹೂಮಾಲೆಯಾಕಿ
ಪರಿಮಿತಿಯಲ್ಲಿ ಉಳಿಸಿದರೆ
ಸಂಕೋಲೆಯಾದೀತು;
ಅಭದ್ರತೆಯಲ್ಲಿ ಅರ್ಥವಾಗದೆ
ನಲುಗಿ ದರ್ಪ ತೋರುವ ನೀವು :
ಒಳಗಿರದ ಸ್ವತಂತ್ರ ಪ್ರಿಯತೆ
ಹೊರಗೆ ತೋರಿಸಲು
ಪ್ರಯಾಸ ಪಡುವ ಆಳುಕರೇ?

ಸ್ಥಗಿತ

ಪೇಟಿಯೊಳಗಿನ
ವಸ್ತುವಂತೆ
ಕೊಳ್ಳಲೇನಿದೆ ಅಲ್ಲಿ?
ಎಲ್ಲಾ ಕಳಕೊಂಡೆವು
ಇಲ್ಲಿ;
ಇಲ್ಲಿ ಇರದೇ
ಅಲ್ಲಿ ಉಳಿಯದೆ
ಉರುಳುವೆವು
ಗಾಣಕ್ಕೆ
ಸಿಕ್ಕು ಸಿಕ್ಕಾಗಿ

ರಜಿಯಾ ಡಿ.ಬಿ
ಸುರತ್ಕಲ್ (ದ.ಕ.)

ಕವಿತೆ ಹುಟ್ಟುವುದು ತಂಗಾಳಿಗಳ ಸುಂದರ ಸಂಜೆಗಳಲ್ಲಿಗಿಂತ ಹೆಚ್ಚಾಗಿ ಸುಡುಬಿಸಿಲ ಸ್ವರ್ಗಗಳಲ್ಲಿ, ಕಟ್ಟೆಚ್ಚರದ ಕಸುಬುಗಾರಿಕೆಯಲ್ಲಿ ಸಿಹಿನೀರ ಕೊಳಗದಲ್ಲಿ ಕೆಮ್ಮಣ್ಣುತುಂಬಿ ಹೊರುವಾಗ ''ಉಸ್ಸಪ್ಪಾ'' ಎಂದು ಇಳಿಸುವಾಗ ಒಲೆಯ ಮುಂದಿನ ಅಗ್ನಿಪರೀಕ್ಷೆಗೆ ಗುರಿಮಾಡಿ ಆರಾಮ ಕುರ್ಚಿಯ ಪೇಪರಿನ ಸುಖಕ್ಕೆ ಸಂದ 'ರಾಮ'ನನ್ನೇ ನೆನೆಯುವುದು ಸೀತೆಯರ ಕಲೆ. ಅವಳ ಮನೆಯಂಗಳದ ಮಹಾಪ್ರಸ್ಥಾನ ನೆನೆಯುವುದು ''ಕರುಣಾಳು ರಾಘವ'ನನ್ನು. ಆದ್ದರಿಂದಲೆ ಅಜ್ಜಿಯ ಕವಿತೆ 'ನಿಗಳದಲ್ಲಿ ಹುಟ್ಟಿದ ನಿರಾಳ'.

-ಸ. ಉಷಾ

ಸೌಂದರ್ಯಕ್ಕೆ ಸ್ಪರ್ಧೆಯೇ?

ಸರ್ಕಾರದ ಬೆಂಬಲದೊಂದಿಗೆ ಎ.ಬಿ.ಸಿ.ಎಲ್. ಸಂಸ್ಥೆ ಗುತ್ತಿಗೆಗೆ ತೆಗೆದುಕೊಂಡಿರುವ ''ವಿಶ್ವಸುಂದರಿ ಸ್ಪರ್ಧೆ'' ಎಂಬ ವರ್ತಕರ ಹಿತಾಸಕ್ತಿಯ ಕಾರ್ಯಕ್ರಮಕ್ಕೆ ಬೆಂಗಳೂರು ತಲೆಯೊಡ್ಡಿದೆ. ಅನೇಕ ಮಹಿಳಾ ಸಂಘಟನೆಗಳು, ನಾಗರಿಕ ಪ್ರಗತಿಪರ ಸಂಘ, ಸಂಸ್ಥೆಗಳು, ರಾಜಕೀಯ ಪಕ್ಷಗಳೂ ಕಳೆದ ಒಂದು ತಿಂಗಳಿನಿಂದ ವಿವಿಧ ರೀತಿಗಳಲ್ಲಿ ನಾಡಿನಾದ್ಯಂತ ಪ್ರತಿಭಟನೆಗಳನ್ನು ತೋರುತ್ತಿವೆ. ಆದರೆ ಬಹುಸಂಖ್ಯಾತ ನಾಗರಿಕರು ಈ ಬಗ್ಗೆ ನಿರ್ಲಿಪ್ತರೇ ಆಗಿ ಉಳಿದಿದ್ದಾರೆ. ಪ್ರತಿಭಟನೆ ಸರಿಯಿದ್ದರೂ ಅದಕ್ಕಾಗಿ ಎತ್ತಿಕೊಂಡಿರುವ ಕಾರಣಗಳು ಎಲ್ಲವೂ ಸಮರ್ಪಕವಲ್ಲ. ಭಾರತೀಯ ಸಂಸ್ಕೃತಿಗೆ ಇಂಥ ಪ್ರದರ್ಶನದಿಂದ ಅಪಚಾರವಾಗುತ್ತದೆ ಎನ್ನುವುದು ಹುರುಳಿಲ್ಲದ ವಾದ ಹೇಗೋ ಅದೇ ರೀತಿಯಲ್ಲಿ ಸರ್ಕಾರ ಮತ್ತು ಅದರ ಪ್ರತಿನಿಧಿಯಾದ ಮುಖ್ಯಮಂತ್ರಿಗಳು, ಹಲವು ರೀತಿಯ ಸ್ವಾರ್ಥಯುತ ಆಸಕ್ತಿಗಳಿಗಾಗಿ ಅವರ ಭಟ್ಟಂಗಿಗಳಾಗಿರುವ ರಾಜಕಾರಣಿಗಳು, ಲೇಖಕರು, ಲೇಖಕಿಯರೂ ವಿಚಿತ್ರ ರೀತಿಗಳಲ್ಲಿ ಸಂಸ್ಕೃತಿಯ ವ್ಯಾಖ್ಯಾನ ಮಾಡುತ್ತಿದ್ದು ಈ ಪೆದ್ದು ದೇಹ ಪ್ರದರ್ಶನದ ವಿಕೃತಿಯನ್ನು ಬೆಂಬಲಿಸುತ್ತಿರುವುದೂ ಹಾಸ್ಯಾಸ್ಪದವೇ. ಕನ್ನಡದ ಹಲವು 'ಖ್ಯಾತ' ಪತ್ರಿಕೆಗಳು ಪ್ರತಿಭಟನೆಗಳ ಬಗೆಗಿನ ವರದಿಗೆ ಎರಡುಮೂರು ಸಾಲು ಸ್ಥಳ ನೀಡಿ, ಅದನ್ನು ಗೇಲಿಮಾಡುವವರಿಗಾಗಿ ಎರಡುಮೂರು ಕಾಲಂಗಳನ್ನೇ ಮೀಸಲಿಟ್ಟು ಉದ್ದಿಮೆ ಸಂಸ್ಕೃತಿಯ ಲಾಭಕೋರತನಕ್ಕೆ ವಕಾಲತ್ತು ವಹಿಸುತ್ತಿವೆ. ಇದಕ್ಕಿಂತ ಅಪಾಯಕರವೆಂದರೆ ಪ್ರಗತಿಪರತೆಯ ಸೋಗಿನಲ್ಲಿ ಕೆಲವು ಬುದ್ಧಿಜೀವಿಗಳು ಹೂಡುತ್ತಿರುವ ವಾದಗಳು.

ಭಾರತದ ಪತ್ರಿಕೆಗಳಲ್ಲಿ, ಚಲನಚಿತ್ರಗಳಲ್ಲಿ, ಬ್ಲೂ ಫಿಲಂಗಳಲ್ಲಿ, ಟಿ.ವಿ. ಛಾನೆಲ್‌ಗಳಲ್ಲಿ ನೂರಾರು ಬಗೆಯ ಹಿಂಸೆ, ಅತ್ಯಾಚಾರ, ಅಶ್ಲೀಲತೆಗಳು ಜನರ ಮನಸ್ಸನ್ನು ಕೆಡಿಸುತ್ತಿರುವಾಗ ಅವೆಲ್ಲವನ್ನೂ ಬಿಟ್ಟು ಕೇವಲ ಸೌಂದರ್ಯಸ್ಪರ್ಧೆಯನ್ನೇಕೆ ವಿರೋಧಿಸಬೇಕು? ಎಂದು ಕೆಲವರ ವಾದ. ಸೌಂದರ್ಯ ಸ್ಪರ್ಧೆಯು ಹೇಗೋ ಹಾಗೇ ಈ ಎಲ್ಲ ಅಶ್ಲೀಲಕರ ಅಂಶಗಳೂ ಜನತೆಯನ್ನು ಅವನತಿಗೆ ಕೊಂಡೊಯ್ಯುವ ವಿಕೃತ ಅಭಿವ್ಯಕ್ತಿಗಳೇ. ಇವೆಲ್ಲದಕ್ಕೂ ಸಮಾನ ತಳಹದಿಯಾಗಿ ಲಾಭಬಡುಕತನ ಹಾಗೂ ಸರಕು ಸಂಸ್ಕೃತಿಯಿದೆ. ಸೌಂದರ್ಯಸ್ಪರ್ಧೆಯ ವಿರೋಧವೆನ್ನುವುದು ಈ ಎಲ್ಲ ಅಸಹ್ಯಕರ ವಿಕೃತಿಗಳ ಒತ್ತಡಗಳ ವಿರೋಧವೇ ಆಗಿರುತ್ತದೆ. ಇಂಥ ಪ್ರತಿಭಟನೆಗಳನ್ನು ಕೇವಲ ತರ್ಕಕ್ಕಾಗಿ ಪ್ರಶ್ನಿಸುವವರು ಯಥಾಸ್ಥಿತಿಯನ್ನು ಬೆಂಬಲಿಸುತ್ತಿರುತ್ತಾರೆ ಅಷ್ಟೆ.

ಜಗತ್ತಿನ ಎಷ್ಟೋ ಕಡೆಗಳಲ್ಲಿ ಇಂಥ ಸ್ಪರ್ಧೆಗಳು ನಡೆಯುತ್ತಾ ಬಂದಿರುವಾಗ ಅದಕ್ಕೆಲ್ಲ ಸುಮ್ಮನಿರುವವರು ಈಗ ನಮ್ಮ ನಾಡಿನಲ್ಲಿ ನಡೆಯಲಿರುವ ಸ್ಪರ್ಧೆಯ ಬಗ್ಗೆ ಮಾತ್ರ ಏಕೆ ಪ್ರತಿಭಟಿಸಬೇಕು ಎನ್ನುವುದೂ ಇಂಥದೆ ಇನ್ನೊಂದು ವಾದ. ಜಗತ್ತಿನ ಇತರೆಡೆಗಳಲ್ಲೂ ಮಹಿಳೆಯರು ಸಾಕಷ್ಟು ಪ್ರತಿಭಟಿಸಿದ್ದಾರೆಂಬ ವಾಸ್ತವ ಇಂಥವರ ಅರಿವಿಗೆ ಬಂದಿರುವುದಿಲ್ಲ. ಏಕೆಂದರೆ ವಿಶ್ವಸುಂದರಿ ಸ್ಪರ್ಧೆ ನಡೆದ ಸ್ಥಳಕ್ಕೆ ಹೋಗಿ ಮಹಿಳಾ ಪ್ರತಿಭಟನಾಕಾರರು ಆ ಸುಂದರಿಯರು ತೊಟ್ಟಿರುವ ದವಾಲಿಪಟ್ಟಿಯಂಥದೇ ಪಟ್ಟಿತೊಟ್ಟು 'ಮಿಸ್ ನಿರುದ್ಯೋಗಿ' 'ಮಿಸ್ ಸವಲತ್ತು ಹೀನೆ' 'ಮಿಸ್ ರಾಜಕೀಯ ಖೈದಿ' ಮುಂತಾದ ಬಿರುದಾವಳಿಗಳನ್ನು ಪ್ರದರ್ಶಿಸಿದಾಗ ನಮ್ಮ ದೇಶದ ಪತ್ರಿಕೆಗಳು ತೀರಾ ನಿರ್ಲಕ್ಷ್ಯದಿಂದ ಅಂಥದನ್ನು ಪ್ರಕಟಿಸಲಿಲ್ಲ. ಅಂದ ಮಾತ್ರಕ್ಕೆ ಪ್ರತಿಭಟನೆ ನಡೆಯಲಿಲ್ಲ ಎನ್ನಲು ಬರುತ್ತದೆಯೆ?

ಇನ್ನು ಕೆಲವು ಜನ ಸ್ತ್ರೀಸ್ವಾತಂತ್ರ್ಯ, ಸಂಪ್ರದಾಯ ವಿರೋಧ, ಬಿಡುಗಡೆ, ಸ್ವಾಭಿವ್ಯಕ್ತಿಗೆ ಅವಕಾಶ ಮುಂತಾದ ಪದಗಳನ್ನು ಬಳಸಿ ಸುಂದರಿಯರಿಗಲ್ಲದೆ ಕುರೂಪಿಗಳಿಗೆ ಸ್ಪರ್ಧೆ ನಡೆಸಬೇಕೆ ಎಂಬಂಥ ರಸಿಕತೆಯನ್ನೂ ಪ್ರಕಟಿಸುತ್ತಾರೆ. ವಾಸ್ತವದಲ್ಲಿ ಸೌಂದರ್ಯ ಎನ್ನುವುದು ಪ್ರಾದೇಶಿಕ ಹಾಗೂ ಸಾಂಸ್ಕೃತಿಕ ವಿಶಿಷ್ಟತೆಗಳೊಂದಿಗೆ ಜಗತ್ತಿನಾದ್ಯಂತ ತುಂಬ ವೈವಿಧ್ಯಮಯವಾದ ವ್ಯಾಖ್ಯಾನ ಪಡೆದುಕೊಳ್ಳುವ ಪರಿಕಲ್ಪನೆ. ಆದರೆ ವ್ಯಾಪಾರಿ ಜನರು ಈ ಎಲ್ಲ ವೈವಿಧ್ಯಗಳನ್ನು ಅಳಿಸಿಹಾಕಿ ಎಲ್ಲ ಬಗೆಯ ಮಾಲುಗಳನ್ನು ಸಮಾನ ಅಚ್ಚುಗಳಲ್ಲಿ, ಬಾಟಲುಗಳಲ್ಲಿ ಪ್ಯಾಕೆಟ್ಟುಗಳಲ್ಲಿ ತುಂಬಿಸಿಡುವ ತಮ್ಮ ವೃತ್ತಿಗೆ ತಕ್ಕಂತೆ ಸ್ತ್ರೀಸೌಂದರ್ಯ ಎನ್ನುವುದನ್ನೂ ಪ್ಯಾಕ್ ಮಾಡುತ್ತಾರೆ. ಯೂರೋಪಿನ ಪುರುಷ ವರ್ತಕರು ಸ್ತ್ರೀಸೌಂದರ್ಯದ ಬಗ್ಗೆ ಹೊಂದಿರುವ ಪರಿಕಲ್ಪನೆಗಳು ಜಗತ್ತಿನ ಎಲ್ಲ ದೇಶ, ಜನಾಂಗ, ಬಣ್ಣಗಳ ಸ್ತ್ರೀಯರ ಸೌಂದರ್ಯದ ಮಾಪಕವೆಂಬಂತೆ ಏಕರೂಪ ಸಂಹಿತೆಯಾಗಿ ಬೆಳೆದಿದೆ. 5 7'' ಎತ್ತರವೇ ಸೌಂದರ್ಯದ ಮೊದಲ ಮಾನದಂಡವಾದರೆ, ಈ ಜನ ನಿರ್ಧರಿಸಿದ ಪ್ರಮಾಣದ ಎದೆ, ನಡು, ಟೊಂಕಗಳನ್ನು ಪಡೆಯಲು ಹೆರೆಯುವ, ಕೆರೆಯುವ ಪ್ಲಾಸ್ಟಿಕ್ ಸರ್ಜರಿ ಉದ್ಯಮಗಳು ಲಾಭಕರ ಉದ್ದಿಮೆಗಳಾಗದೆ ಮತ್ತೇನು? ಮಾನವಶಾಸ್ತ್ರ, ಜನಾಂಗ ಶಾಸ್ತ್ರಗಳನ್ನೇ ಧಿಕ್ಕರಿಸುವಂಥ ಅತ್ಯಂತ ಅವೈಜ್ಞಾನಿಕ ನಿಯಮಾವಳಿಗಳಲ್ಲಿ ಜಗತ್ತಿನ ಬಹುಪಾಲು ಹೆಣ್ಣುಮಕ್ಕಳು ಕುರೂಪಿಗಳೇ ಆಗಬೇಕಾಗುತ್ತದೆ. ವಿವಿಧ ಕಂಪನಿಗಳ ಜಾಹಿರಾತುಗಳಿಗೆ ಮಾಡೆಲ್ಲುಗಳಾಗಿ ಆಯಾ ಕಂಪನಿಗಳ ಮೂಲಕವೇ ಸೌಂದರ್ಯಸ್ಪರ್ಧೆಯ

ಕಣಕ್ಕೆ ಕರೆತರಲ್ಪಡುವ ಯುವತಿಯರು ಮೊದಲು ಕಳೆದುಕೊಳ್ಳುವುದು ತಲೆಯೊಳಗಿನ ಬುದ್ಧಿಯನ್ನು ನಂತರ ಮೈಯಿನ ಮಾಂಸವನ್ನು. ತಿಂಗಳಿಡೀ ವಿವಿಧ ರೀತಿಯ ದೇಹ ಪ್ರದರ್ಶನದ ಪರೀಕ್ಷೆಗಳಾದ ಬಳಿಕ. ಕೊನೆಗೆ "ವ್ಯಕ್ತಿತ್ವ ಪರೀಕ್ಷೆ"ಯ ನಾಟಕ ನಡೆಯುತ್ತದೆ. ಆ ಪರೀಕ್ಷೆಗಾಗಿ ಗಟ್ಟಿ ಮಾಡಿಕೊಂಡಿರುವ "ವಿಶ್ವಶಾಂತಿ" "ವಿಶ್ವಭ್ರಾತೃತ್ವ" "ಬಡಜನರ ಸೇವೆ" ಮುಂತಾದ ಮುಕ್ತಾಫಲಗಳನ್ನು ಹಲ್ಲಿನ ಹೊಳಪೂ ಮಾಸದ ಹಾಗೆ ಉದುರಿಸಿದರೆ ಈ ನಟಿಯರು "ಸುಂದರಿ"ಯರಾಗಲು ಸಾಧ್ಯ. ಅಪ್ಪಿತಪ್ಪಿ ಅವರೇನಾದರೂ ಬುದ್ಧಿಯನ್ನು ಬಳಸಿ ಉತ್ತರಿಸಿದರೋ, "ರಾಜಕೀಯ ಪ್ರೇರಿತ" ಎಂಬ ಗುಮಾನಿಗೆ ಒಳಗಾಗಿ ಸೋಲೊಪ್ಪುವುದು ಅನಿವಾರ್ಯ. ಇದು ವಿಶ್ವಸುಂದರಿಯರ 'ದಿವ್ಯ ವ್ಯಕ್ತಿತ್ವದ' ಒಳತಿರುಳು.

ಇಂಥ ಆಯ್ಕೆಗಳೂ ಸದಾ ಆರ್ಥಿಕ ಜಗತ್ತಿನ ಪ್ರಭುಗಳ ಪಟ್ಟಭದ್ರ ಹಿತಾಸಕ್ತಿಯಿಂದ ನಿಯಂತ್ರಿತವಾಗಿರುತ್ತವೆ. ಇಂದಿರಾಗಾಂಧಿ ವಿಶ್ವದ ಹಣದ ಶಕ್ತಿಗಳು ಹೇರಿದ ಒತ್ತಡಕ್ಕೆ ಮಣಿದು 1966ರಲ್ಲಿ ರೂಪಾಯಿಯನ್ನು ಅಪಮೌಲ್ಯಗೊಳಿಸಿದರೆ, ಅದೇ ವರ್ಷ ರೀಟಾಫಾರಿಯಾ ಎಂಬ ಭಾರತೀಯ ಯುವತಿ ಭುವನ ಸುಂದರಿಯಾಗಬಹುದು. 1994ರಲ್ಲಿ ವಿಶ್ವದ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಭಾರತದಲ್ಲಿ ಬಂಡವಾಳ ಹೂಡಲು ಮನಮೋಹನಸಿಂಗ್ - ನರಸಿಂಹರಾವ್ ಮುಂದಾದ ಕೂಡಲೇ ಸುಶ್ಮಿತಾಸೇನ್ ಐಶ್ವರ್ಯರೈಗಳು ಉದಯಿಸಿ ಬಿಡುತ್ತಾರೆ. ಇದೇ ವಿಧಿ ವಿಧಾನಗಳು ದಕ್ಷಿಣ ಆಫ್ರಿಕಾ, ಕ್ರೊವೇಷಿಯಾ ಹಾಗೂ ಜಿಂಬಾಬ್ವೆಗಳ ಸುಂದರಿಯರ ಆಯ್ಕೆಗೂ ಅನ್ವಯವಾಗುತ್ತವೆ. ಅಭಿವೃದ್ಧಿಶೀಲ ದೇಶಗಳಲ್ಲಿ ವಿದೇಶಿ ಬಂಡವಾಳ ಹೂಡಿಕೆಗೆ ವಿದೇಶೀ ಉತ್ಪಾದನೆಗಳಿಗೆ ಮಾರುಕಟ್ಟೆ ದೊರೆತ ಕೂಡಲೆ ಅಲ್ಲಿನ ಮಹಿಳೆಯೊಬ್ಬಳು ವಿಶ್ವದ ಸೌಂದರ್ಯದ ನೆಲೆಗೆ ಏರಿಸಲ್ಪಡುವ ಈ ಚಮತ್ಕಾರ ಏನು? ಆ ದೇಶಗಳ ಬಿಳಿಯೇತರ ತರುಣಿಯರಿಗೆ ಸಿಕ್ಕಿದ ಅವಕಾಶ ಎನ್ನಬೇಕೆ ಅಥವಾ ರಾಜಕೀಯ ಆರ್ಥಿಕ ಹಿತಾಸಕ್ತಿಯ ಚದುರಂಗದಲ್ಲಿ ಈ ಸ್ತ್ರೀಯರು ಪಾನುಗಳಾಗಿದ್ದಾರೆ ಎನ್ನಬೇಕೆ?

ಕೆಲವರು ಅತಿ ಬುದ್ಧಿವಂತರು ಮತ್ತೊಂದು ವಾದ ಮುಂದಿಡುತ್ತಿದ್ದಾರೆ. ತೃತೀಯ ಜಗತ್ತಿನ ಹೆಣ್ಣುಗಳು ಮೊದಲ ಜಗತ್ತಿನ ಹೆಣ್ಣುಗಳೊಂದಿಗೆ ಹೀಗೆ ಸ್ಪರ್ಧಿಸುವ ಮೂಲಕ ತಮ್ಮಲ್ಲಿನ ಕೀಳರಿಮೆಯನ್ನು ನಿವಾರಿಸಿಕೊಂಡು ಆತ್ಮವಿಶ್ವಾಸವನ್ನು ಗಳಿಸಿಕೊಳ್ಳುವುದಾದರೆ ಈ ಸ್ಪರ್ಧೆಗೆ ವಿರೋಧ ಏಕೆ ಬೇಕು?" ಎಂದವರು ವಾದಿಸುತ್ತಾರೆ. ಆದರೆ ವಿಶ್ವಮಾನ್ಯತೆಯಿಂದಾಗಿ ಒಂದೇ ದಿನದಲ್ಲಿ ಜಗತ್ತಿನ ಝಗಝಗಿಸುವ ಬೆಳಕಿಗೆ ಒಡ್ಡಿಕೊಳ್ಳುವ ಈ ಸುಂದರಿಯರ ಸ್ವಾತಂತ್ರ್ಯವೆಷ್ಟೆಂದು ನೋಡಬೇಕು. "ಸುಂದರಿ" ಎಂಬ ಕಿರೀಟ ತಲೆಯ ಮೇಲೆ ಇರುವವರೆಗೂ ಇವರು ಉಬ್ಬುವಂತಿಲ್ಲ. ಆಗ ಅವಿವಾಹಿತರಾಗಿ ಉಳಿದಿದ್ದು ಮೈತೂಕ ಮತ್ತಿತರ ಪ್ರಮಾಣಗಳನ್ನು ಆಯ್ಕೆಯಾದಾಗ ಇದ್ದಂತೆಯೇ ಉಳಿಸಿಕೊಂಡಿರಬೇಕು. ತನ್ನ ಪ್ರಾಯೋಜಕ ಕಂಪನಿಗೆ ತಾನು ಪಡೆದ ಬಹುಮಾನದ ಮುಕ್ಕಾಲು ಭಾಗ ಸಲ್ಲಿಸಬೇಕು. ಸಭೆ ಸಮಾರಂಭಗಳಿಗೆ ಹೋಗಬೇಕಿದ್ದಲ್ಲಿ ಆ ಸಂಸ್ಥೆಗೆ ಕಪ್ಪ ತೆರಬೇಕು. ಹೀಗೆ ಸೌಂದರ್ಯದ ಬಿರುದಿಗಾಗಿ ನೂರಾರು ಅಸಹಜ ಕಾನೂನುಗಳ ಬಂಧಿತರಾದವರ ಆತ್ಮವಿಶ್ವಾಸ ಅನುಕರಣೀಯವೆ? ಭಾರತದಂಥ ತೃತೀಯ ಜಗತ್ತಿನ ಹೆಂಗಸರಲ್ಲಿ ಇದ್ದಿರಬಹುದಾದ ಕೀಳರಿಮೆಗಳಿಗೆಲ್ಲ ಈ ಸ್ಪರ್ಧೆ ಮದ್ದು ನೀಡುತ್ತದೆಯೆ? ಅಥವಾ ಈ ಸ್ಪರ್ಧೆಗಳು ಎಂದೂ ವಾಸಿಯಾಗಲಾರದ, ಯಾವ ಸೌಂದರ್ಯ ಪ್ರಸಾಧನದಿಂದಲೂ ತೊಡೆಯಲಾಗದಂಥ ಆತ್ಮಾವಹೇಳನಕ್ಕೆ ಅವರನ್ನು ತಳ್ಳುತ್ತದೆಯೋ ಎಂಬುದನ್ನು ವಿಚಾರಮಾಡಬೇಕು.

ಈ ಶತಮಾನದ ಆರಂಭದಲ್ಲಿ ಪಶ್ಚಿಮದಲ್ಲಿ ಬಟ್ಟೆಗಿರಣಿಗಳ ಮತ್ತು ಉಡುಪುಗಳ ಉತ್ಪಾದಕರು ತಮ್ಮ ಉತ್ಪಾದನೆಗಳಿಗೆ ಹೆಚ್ಚಿನ ಮಾರುಕಟ್ಟೆ ದೊರಕಿಸಿಕೊಳ್ಳಲು ಆರಂಭಿಸಿದ 'ಫ್ಯಾಷನ್ ಷೋ' ಮುಂದೆ ಸೌಂದರ್ಯ ಸ್ಪರ್ಧೆಯಾಗಿ, ವಿಶ್ವವ್ಯಾಪಿ ಉದ್ಯಮವಾಗಿ ಬೆಳೆದಿದೆ. ಆ ದೇಶಗಳಲ್ಲಿ ಇವೆಲ್ಲ ಯಾವುದೋ ಮೂಲೆಯಲ್ಲಿ "ವಿಚಿತ್ರ ಆಸಕ್ತಿಯ ಜನರು" ನಡೆಸಿಕೊಳ್ಳುವ ಸಡಗರಗಳೆಂದು ಮಾತ್ರ ಪರಿಗಣಿತವಾಗುತ್ತವೆ. ದೇಶವಿಡೀ ಕಣ್ಣಾಗಿ, ಮೈಯಾಗಿ ಸಂಭ್ರಮಿಸಬೇಕಾದ ಕುತೂಹಲವಾಗಲಿ ಹೆಮ್ಮೆಯಾಗಲಿ ಅಲ್ಲಿ ವ್ಯಕ್ತವಾಗುವುದಿಲ್ಲ. ಆದರೆ ಶರೀರದ ಬಗ್ಗೆ ಲೈಂಗಿಕ ಅಭಿವ್ಯಕ್ತಿಯ ಬಗ್ಗೆ ನೂರಾರು ಕಟ್ಟಲೆ, ಕಾನೂನುಗಳಲ್ಲಿ ಬಿಗಿದುಕೊಂಡಿರುವ ಭಾರತದಲ್ಲಿ ನಿಷ್ಠುರ ಸಂಪ್ರದಾಯಪರತೆ, ಮಡಿವಂತಿಕೆಗಳ ಒಡಲಿನಲ್ಲೇ ಹೇಗಾದರೂ ಇವುಗಳಿಂದ ಪಾರಾಗುವ ಹಪಾಹಪಿ, ಹತ್ತಿಕ್ಕಲ್ಪಟ್ಟಿದ್ದರ ವಿಕೃತ ಬಿಡುಗಡೆಯ ತಹತಹ ವಿಪರೀತ. ಈ ದೇಶದ ಜನರ ಇಂಥ ಮನಶ್ಶಾಸ್ತ್ರವರಿತ ಚತುರ ಉದ್ದಿಮೆದಾರರು, ಚಲನಚಿತ್ರ ನಿರ್ಮಾಪಕರು, ಪತ್ರಿಕೆಗಳು, ಟಿ.ವಿ. ಛಾನೆಲ್‌ಗಳ ಮಾಲಿಕರು ಇಂಥ ವಿಕೃತ ಆಸಕ್ತಿಗಳನ್ನು ಕೆರಳಿಸಿ, ಅದನ್ನೆ ಬಂಡವಾಳವಾಗಿಸಿಕೊಂಡು ಆ ಮೂಲಕ ತಮ್ಮ ಸರಕುಗಳಿಗೆ ವ್ಯಾಪಕ ಬೇಡಿಕೆಯನ್ನು ಹುಟ್ಟಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಉದಾರೀಕರಣ, ಜಾಗತೀಕರಣ ನೀತಿಯ ಫಲವಾಗಿ ವಿದೇಶೀಯ ವಸ್ತುಗಳ ಉತ್ಪಾದಕರೂ, ಈ ಸರಕು ಸಂಸ್ಕೃತಿಯ ಎಲ್ಲಾ ಅವನತಿ ಕಾರಕ ಅಂಶಗಳನ್ನು ರಭಸವಾಗಿ ತಂದು ಇಲ್ಲಿ ತುಂಬಿಸಬಲ್ಲಂಥ ಏಜೆಂಟರನ್ನು ಆರಿಸಿಕೊಳ್ಳುತ್ತಿದ್ದು, ಎಬಿಸಿಎಲ್ ಕೂಡ ಅಂಥ ಒಂದು ದಳ್ಳಾಳಿ ಮೆಗಾಸಂಸ್ಥೆ. ಕೋಟ್ಯಾಂತರ ಡಾಲರುಗಳತ್ತ ಕಣ್ಣಿಟ್ಟಿರುವಂಥದು.

ಇಂಥ ಸರಕು ಸಂಸ್ಕೃತಿಯನ್ನು ಬರಮಾಡಿಕೊಳ್ಳುವುದರಲ್ಲಿ ನಮ್ಮ ನಾಡಿನ ಪ್ರಗತಿಯನ್ನು ಕಾಣಬಲ್ಲವರೂ ಉಂಟು. ಬೆಂಗಳೂರು ಒಂದು ಮೆಗಾಸಿಟಿ ಆಗುತ್ತದೆಂದೂ, ಅದು ಆ ರೀತಿ ಜಾಗತಿಕ ಭೂಪಟದಲ್ಲಿ ಸ್ಥಾನ ಪಡೆಯುವುದು ಹೆಮ್ಮೆಯ ಸಂಗತಿ ಎಂದೂ ಇವರು ವಾದಿಸುತ್ತಾರೆ. ಕರ್ನಾಟಕದ ಜನರಿಗೆ, ಬೆಂಗಳೂರಿನ ನಾಗರಿಕರಿಗೆ ವಿದ್ಯುತ್ತು, ಕುಡಿಯುವ ನೀರು, ಕನಿಷ್ಠ ಶೌಚವ್ಯವಸ್ಥೆಗಳಾವುದನ್ನೂ ಒದಗಿಸಲು ಅಸಮರ್ಥವಾಗಿ, ಅವರ ಮೇಲೆ ಇದೇ ಸವಲತ್ತುಗಳಿಗಾಗಿ ನಾಲ್ಕೈದು ಪಟ್ಟು ತೆರಿಗೆ ಭಾರ ಹೇರಿರುವ ಸರ್ಕಾರ, ಎಬಿಸಿಎಲ್‌ನಂಥ ಮೂಟೆಹಣ ನೀಡಬಲ್ಲ ವ್ಯಾಪಾರಿ ಸಂಸ್ಥೆಗೆ ಅವೇ ಸೌಕರ್ಯಗಳೆಲ್ಲವನ್ನೂ ತೊಂದರೆಯಿಲ್ಲದೆ ಒದಗಿಸಿಕೊಡಬಲ್ಲ ಅನೈತಿಕ ಎದೆಗಾರಿಕೆಯನ್ನು ತೋರುತ್ತದೆ. ಜನ ಜೀವನವೇ ದುಸ್ತರವಾಗಿ, ಅಪಘಾತ, ಹಿಂಸೆ, ಗುಂಡಾಗಿರಿ, ದರೋಡೆ ಕೊಲೆಗಳಲ್ಲಿ ಮನುಷ್ಯರ ಜೀವನಕ್ಕೆ ಕವಡೆಯ ಕಿಮ್ಮತ್ತೂ ಇಲ್ಲದಿರುವ ಭೀಕರ ಸ್ಥಿತಿ ಬೆಂಗಳೂರಿನಲ್ಲೂ, ನಾಡಿನ ಇತರ ಪ್ರದೇಶಗಳಲ್ಲೂ ನಿರ್ಮಾಣವಾಗಿದೆ. ಇಂತಹ ಸಮಸ್ಯೆಗಳಿಂದ ಜನರು ಕ್ರುದ್ಧರಾಗದಂತೆ, ಅವರ ಗಮನ ಬೇರೆಡೆಗೆ ಸರಿಸಲು ಅದ್ದೂರಿಯ ಸೌಂದರ್ಯ ಸ್ಪರ್ಧೆಗಿಂತ ಬೇರೆ ಸಾಧನ ಬೇಕೆ? ಹಳ್ಳಕೊಳ್ಳಗಳಿಂದ ಕೂಡಿದ್ದು ರಿಪೇರಿ ಕಾಣದ ರಸ್ತೆಗಳಿಂದ, ಅಸಹಜ ಬಡಾವಣೆ, ಕೊಂಪೆಗಳಿಂದ, ರಸ್ತೆರಸ್ತೆಗಳಲ್ಲಿ ಎತ್ತದೆ ಬಿಟ್ಟಿರುವ ಕೊಳೆತ ಕಸದ ಬೆಟ್ಟಗಳಿಂದ, ಪರಿಸರ ಮಾಲಿನ್ಯದಿಂದ ನರಳುತ್ತಿರುವ ಬೆಂಗಳೂರು ವಿಶ್ವಭೂಪಟಕ್ಕೆ ಮೂಗುಬೊಟ್ಟಾಗುವುದು ಹೆಮ್ಮೆ ಪಡಬೇಕಾದ ಸಂಗತಿಯೇ? ಯಾವ ಮಹಾಪುರುಷನೂ ಇಂದಿನ ಕಷ್ಟಕರ ಸಮಸ್ಯೆಗಳನ್ನು ಪರಿಹರಿಸಲಾರ ಎನ್ನುವುದು ಭ್ರಷ್ಟತೆಯಲ್ಲಿ ಮುಳುಗಿರುವವರ ಹತಾಶ ನೀತಿಯಷ್ಟೆ. ನಮ್ಮ ನಾಡು, ನುಡಿ, ಜನರ ಬದುಕೆಲ್ಲ ಇಂಥ ಹತಾಶ ನೀತಿಗರಿಗೆ ಬಲಿಯಾಗಬೇಕೆ?

ನಿಜವಾಗಿ ಹೀಗಾಗಬೇಕಿಲ್ಲ. ಸೌಂದರ್ಯ ಎನ್ನುವುದಾಗಲಿ, ಅದರ ಮೆಚ್ಚುಗೆ ಪ್ರಶಂಸೆಗಳಾಗಲಿ ತಮ್ಮಷ್ಟಕ್ಕೆ ಅಪರಾಧಗಳಲ್ಲ. ಆದರೆ ಸೌಂದರ್ಯ ಎಂಬುದನ್ನು ಲಿಂಗಭೇದ ಮೂಲವಾದ ಮೌಲ್ಯಗಳಲ್ಲಿ ಬಂಧಿಸಿಟ್ಟು ಹೆಣ್ಣನ್ನೂ ದೇಹ ಸೌಂದರ್ಯವನ್ನೂ ಸಮೀಕರಿಸುವುದರಲ್ಲಿ ಆಕೆ ತನ್ನ ಬದುಕಿನ ಪರಿಧಿಯನ್ನೂ, ತನ್ನ ಶಕ್ತಿ, ಸಾಮರ್ಥ್ಯ, ಕಾಲ ಎಲ್ಲವನ್ನೂ ಕೇವಲ ಒಂದು ಅಲಂಕೃತ ವಸ್ತುವಾಗಿ ಉಳಿಯಲಿಕ್ಕಾಗಿ ಬಳಸುವಂತೆ ಮಾಡುತ್ತದೆ. ಹುಟ್ಟಿನ ಮೂಲದಿಂದ ಬರುವಂಥ, ಮಾನವರ ಹಿಡಿತದಲ್ಲಿ ಇಲ್ಲದಿರುವಂಥ ದೇಹ ಸೌಂದರ್ಯವಷ್ಟೇ ಹೆಣ್ಣಿನ ಬದುಕಿನ ಪರಮಮೌಲ್ಯವಾಗುವುದು ದೊಡ್ಡ ದುರಂತವೇ ಸರಿ. ಸೌಂದರ್ಯ ಸ್ಪರ್ಧೆಗಳು ಈ ಪರಂಪರಾಗತ ಮೌಲ್ಯವನ್ನು ಬಳಸಿಕೊಂಡು ಅವುಗಳ ಮೇಲೆ ಕೋಟ್ಯಾಂತರ ಡಾಲರುಗಳ ವ್ಯಾಪಾರಿ ಸಾಮ್ರಾಜ್ಯವನ್ನು ಕಟ್ಟುತ್ತ ಬಂದಿವೆ. ಈ ಲಾಭಬಡುಕರ ವ್ಯಾಪಾರಿ ಸಂಸ್ಕೃತಿಯೇ ಇಂದು ನಮ್ಮ ಸಮಾಜವನ್ನು ಸುತ್ತಲೂ ಆವರಿಸಿ, ಅವನತಿಯತ್ತ ಕರೆದೊಯ್ಯುತ್ತಿದೆ. ಇಂಥ ಸ್ಥಿತಿಗೆ ಇಡೀ ಸಮಾಜವೇ ಬಲಿಯಾಗುತ್ತಿದ್ದರೂ, ಮಹಿಳೆಯರ ಮೇಲೆ ಇದರಿಂದ ಆಗುವ ದುಷ್ಪರಿಣಾಮಗಳು ಅನೂಹ್ಯವೆನ್ನುವಷ್ಟು ದಾರುಣವಾಗಿರಬಲ್ಲವು. ನಮ್ಮ ಬೆಳೆಯುವ ಹುಡುಗಿಯರು, ಯುವತಿಯರು ದಶಕೋಟಿಗಟ್ಟಲೆ ಡಾಲರುಗಳ ವ್ಯಾಪಾರಕ್ಕೆ ದೀಪ ಹೊರುವ ದೀಪದ ಮಲ್ಲಿಯರಾಗಬೇಕೆ? ಈ ಸೌಂದರ್ಯ ಪರಿಕಲ್ಪನೆಗಳೊಳಕ್ಕೆ ಹೊಂದಲಾಗದ ತಮ್ಮ ರೂಪ, ಆಕಾರಕ್ಕಾಗಿ ಮರುಗುತ್ತಾ, ನೂರಾರು ಪ್ರಸಾಧನಗಳ ಜಡ ಬಳಕೆದಾರರಾಗಿ, ಸೌಂದರ್ಯಗಳಿಕೆಯ ಕಸರತ್ತುಗಳಿಂದ ರೋಗಗ್ರಸ್ತರಾಗಬೇಕೆ? ಫಿಲಿಪೀನ್ಸ್ ಮತ್ತು ಥೈಲ್ಯಾಂಡ್‌ಗಳ ಮಾದರಿಯಲ್ಲಿ ಪ್ರವಾಸೋದ್ಯಮದ ಹೆಸರಿನಲ್ಲಿ ಸರ್ಕಾರವೇ ತಲೆಹಿಡುಕತನಕ್ಕಿಳಿದ ಸ್ಥಿತಿ ಭಾರತಕ್ಕೆ ಬೇಕಾಗಿದೆಯೆ? ಹೆಣ್ಣನ್ನು ದೇಹ ಸೌಂದರ್ಯವನ್ನೂ ಸಮೀಕರಿಸುವುದರ ಹಿಂದಿರುವುದು ಆಕೆಯನ್ನು ಭೋಗದ ವಸ್ತುವೆಂದು ನೋಡುವ ದೃಷ್ಟಿ ಮಾತ್ರ. ಇಂಥ ದೃಷ್ಟಿಯೇ ಸರ್ವವ್ಯಾಪಿಯಾಗುತ್ತಿರುವುದರ ಪರಿಣಾಮವೇ ದಿನದಿನವೂ ಹೆಣ್ಣಿನ ಮೇಲೆ ನಡೆದಿರುವ ನೂರಾರು ಬಗೆಯ ಲೈಂಗಿಕ ಹಿಂಸಾಚಾರಗಳು. ಇಂಥ ಹಿಂಸಾಚಾರಕ್ಕೂ ''ಸೌಂದರ್ಯ''ದ ವಸ್ತುವೆಂದು ಹೆಣ್ಣನ್ನು ನೋಡುವುದಕ್ಕೂ ನಿಕಟ ಸಂಬಂಧವಿದೆ ಎಂಬುದನ್ನು ನಾವು ಮನಗಾಣಬೇಕು.

ಸೌಂದರ್ಯವನ್ನು ಅಳೆಯುವಲ್ಲಿ ಸ್ತ್ರೀಯರನ್ನು ವ್ಯಕ್ತಿಗಳೆಂದು ಗುರುತಿಸುವ, ಅವರ ಪ್ರತಿಭೆ, ಬುದ್ಧಿಮತ್ತೆ, ಚಾತುರ್ಯ, ಸಾಮರ್ಥ್ಯಗಳೂ ಅವರ ವ್ಯಕ್ತಿತ್ವಕ್ಕೆ ಸೌಂದರ್ಯ ನೀಡುತ್ತವೆಂದು ಅರಿಯುವ ಸಾಮರ್ಥ್ಯವನ್ನು ನಮ್ಮ ಮಕ್ಕಳಲ್ಲಿ ನಾವು ಬೆಳೆಸಬೇಕಾಗಿದೆ. ಒಲಂಪಿಕ್‌ನಲ್ಲಿ ಪದಕಗಳಿಸಿದ ಪಯಸ್, ಜಿಂಕೆ ಓಟದ ಪಿ.ಟಿ. ಉಷಾ, ಪರ್ವತಾರೋಹಿ ಬಚೇಂದ್ರಿಪಾಲರ ಹಾಗೆ ವಕೀಲವೃತ್ತಿ, ರಾಜಕಾರಣ, ಅಧಿಕಾರಕ್ಷೇತ್ರ, ಕಲೆ, ವಿಜ್ಞಾನ ತಂತ್ರಜ್ಞಾನಾದಿ ವಿವಿಧ ಕ್ಷೇತ್ರಗಳಲ್ಲಿ ಸಾಮರ್ಥ್ಯ ತೋರಿಸಿರುವ ಮಹಿಳೆಯರ ವ್ಯಕ್ತಿತ್ವ ಸೌಂದರ್ಯ ನಮಗೆ ಮನತುಂಬಬೇಕು. ಎಲ್ಲಕ್ಕಿಂತ ಮಿಗಿಲಾಗಿ ತನ್ನ ಸತ್ವವನ್ನು ಗುರುತಿಸಿಕೊಳ್ಳುವ ಆತ್ಮಬಲದಿಂದ ಸತ್ವಯುತವೂ ಅರ್ಥಪೂರ್ಣವೂ ಆದ ಬದುಕು ಸಾಧಿಸುವಂಥ ಆತ್ಮಸೌಂದರ್ಯಕ್ಕೆ ನಮ್ಮ ಯುವ ಪೀಳಿಗೆಯನ್ನು ಮುನ್ನಡೆಸಬೇಕಾಗಿದೆ.

ಡಾ|| ಬಿ.ಎನ್. ಸುಮಿತ್ರಾ ಬಾಯಿ

ಜಾನಪದ ಸ್ತ್ರೀಕೇಂದ್ರಿತ ಕಥೆಗಳು : ಪರ್ಯಾಯ ವ್ಯವಸ್ಥೆಯತ್ತ ಒಂದು ಯತ್ನ

ಇದೊಂದು ವಿಶೇಷ ಲೇಖನವಾಗಿದ್ದು, ಅಚಲದಲ್ಲಿ ಎರಡು ಕಂತುಗಳಲ್ಲಿ ಇದನ್ನು ಪ್ರಕಟಿಸುತ್ತಿದ್ದೇವೆ. -ಸಂ.

(ದಿ॥ ಡಾ. ಎ.ಕೆ. ರಾಮಾನುಜನ್* ಅವರ ಕೆಲವು ವಿಚಾರಗಳು)

ಪರಿಚಯ: ಡಾ. ಬಿ.ಎನ್. ಸುಮಿತ್ರಾಬಾಯಿ

ಇಂದು ಜಾಗತಿಕ ನೆಲೆಯಲ್ಲಿ ಜಾನಪದ ಅಧ್ಯಯನಗಳೆಂದರೆ ಪರಂಪರಾಗತ ಜಾನಪದ ಮಾಹಿತಿ, ಸಾಮಗ್ರಿ ಸಂಗ್ರಹಣೆಗಳಷ್ಟೇ ಅಲ್ಲ; ಒಂದು ಸಂಸ್ಕೃತಿಯಲ್ಲಿ ಕಾಣಸಿಗುವ ವಿವಿಧ ಅಭಿವ್ಯಕ್ತಿ-ಆಕೃತಿಗಳನ್ನು ತಿಳಿಸುವ ಒಂದು ಮರು ಉತ್ಪಾದಕ ಚಲನಕ್ರಿಯೆಯಾಗಿ ಜಾನಪದವು ಒದಗಬಲ್ಲದು ಎನ್ನುವುದು ಇಂದಿನ ತಿಳುವಳಿಕೆಯಾಗಿದೆ. ಕಳೆದ ಎರಡು ದಶಕಗಳಲ್ಲಿ ಜಾನಪದ ಅಧ್ಯಯನಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗಿವೆ. ''ಪಠ್ಯ,'' ''ಅಭಿನಯ,'' ''ಜನಪದ'' ಮತ್ತು ''ಶೈಲಿ'' ಮುಂತಾದ ಪದಗಳನ್ನೇ ಈ ಅಧ್ಯಯನಗಳು ಸಮಸ್ಯೆಗೆ ಒಡ್ಡುತ್ತವೆ. ಹೀಗಾಗಿ ಬೇರೆ ಬೇರೆ ಜ್ಞಾನಶಾಖೆಗಳ ನಡುವೆ ಸ್ಪರ್ಧಾತ್ಮಕತೆಯನ್ನು ಹುಟ್ಟುಹಾಕಬಲ್ಲ ಕ್ಷೇತ್ರವಾಗಿ ಜಾನಪದ ಅಧ್ಯಯನವು ಬೆಳೆದಿದೆ. ಅಂದರೆ ಜಾನಪದ ತಜ್ಞರು ಮಾತ್ರವೇ ಇಂಥ ಅಧ್ಯಯನಗಳಲ್ಲಿ ನಿರತರಾಗಿಲ್ಲ. ಸಮಾಜಶಾಸ್ತ್ರ, ಅಲಂಕಾರಶಾಸ್ತ್ರ, ಇಂಡಾಲಜಿ, ಮಾನವಶಾಸ್ತ್ರ ಧಾರ್ಮಿಕ ಚರಿತ್ರೆಗಳಲ್ಲಿ ತಜ್ಞರಾದವರೂ ಜಾನಪದ ಅಧ್ಯಯನಗಳತ್ತ ತೊಡಗಿದ್ದಾರೆ. ''ಪಠ್ಯ'' ಎಂದರೆ ಯಾವುದು? ಅದನ್ನು ಎಷ್ಟರ ಮಟ್ಟಿಗೆ ಬದುಕಿದ ಅನುಭವಗಳೆಂದು ಓದಲು ಸಾಧ್ಯ ಅಥವಾ ಓದಬೇಕು ಎಂಬುದನ್ನು ಅವರು ಚರ್ಚೆಗೆ ಒಳಗು ಮಾಡಿದ್ದಾರೆ.

ವಿವಿಧ ಜ್ಞಾನಶಾಖೆಗಳ ವಿದ್ವಾಂಸರ ಇಂಥ ಯತ್ನಗಳ ಫಲವಾಗಿ ದಕ್ಷಿಣ ಏಷ್ಯಾದ ಬಗೆಗಿನ ಅಧ್ಯಯನಗಳು ಜಗತ್ತಿನ ವಿದ್ವಾಂಸರ ಆಸಕ್ತಿ ಕೆರಳಿಸಿವೆ. ಭಾರತೀಯ ಸಂಸ್ಕೃತಿಯ ಅಭಿವ್ಯಕ್ತಿಗಳಲ್ಲಿ ಇರುವ ವಿವಿಧ ಸ್ತರ ಹಾಗೂ ರೂಪಗಳ ಪರಿಚಯ ಇಂದು ದೊರೆಯುವಂತಾಗಿದೆ. ಉತ್ತರ ಭಾರತದ ಸಂಸ್ಕೃತ ಪ್ರಭಾವಿತ ಶಿಷ್ಟಕಥಾ ಪರಂಪರೆಯ ನೆರಳನ್ನು ಬಿಟ್ಟು ದ್ರಾವಿಡಭಾರತವೂ ಬೆಳಕಿಗೆ ಬರುವುದು ಸಾಧ್ಯವಾಗಿದೆ. ಇದುವರೆಗೆ ಅನಕ್ಷರದ ನೆಲೆಯಲ್ಲಿ ಅಡಗಿದ್ದ ಪರಂಪರೆಗಳು ಅಕ್ಷರದ ಸವಲತ್ತಿನತ್ತ ಬರುತ್ತಿವೆ. ಅಲಿಖಿತವಾಗಿ ಮೌಖಿಕವಾಗಿ ಉಳಿದಿದ್ದ ಸಾಮಗ್ರಿಗಳು ಲಿಖಿತ ಸಾಮಗ್ರಿಗಳ ಜೊತೆ ಸ್ಪರ್ಧಿಸಲು ಅನುವಾಗುತ್ತಿವೆ. ಜಾನಪದ ಅಧ್ಯಯನಗಳ ಹಿಂದಿರುವ ತಾತ್ವಿಕ ವಿಚಾರಗಳನು, ಈ ಅಧ್ಯಯನ ವಿಧಾನಗಳು ಕನ್ನಡದ ವಿದ್ವತ್ ಲೋಕದ ಮೇಲೆ ಶೂನ್ಯದಿಂದ ದಿಢೀರನೆ ಬಂದು ಬಿದ್ದಿಲ್ಲ. ಪಾಶ್ಚಿಮಾತ್ಯ ದೇಶಗಳಲ್ಲಿ, ಮತ್ತು ಅಮೆರಿಕಾ ಸಂಸ್ಥಾನದಂಥ ನವವಸಾಹತುಶಾಹಿ ದೇಶಗಳಲ್ಲಿ ದಕ್ಷಿಣ ಏಷ್ಯಾದ ಬಗ್ಗೆ ಹುಟ್ಟಿದ ಆಸಕ್ತಿ, ಸಂಶೋಧನೆಗಳು ನಮ್ಮ ಮನೆಯಂಗಳದ ಮಲ್ಲಿಗೆಗಳಂತೆ ಹರಡಿಕೊಳ್ಳುತ್ತಿವೆಯಷ್ಟೆ. ಇದರಲ್ಲಿ ಪಶ್ಚಿಮದ ವಿಚಾರಗಳಿವೆಯೆಂದೋ, ಅವರ ತಂತ್ರಗಳಿವೆಯೆಂದೋ ನಾವು ಖತಿಗೊಳ್ಳಬೇಕಿಲ್ಲ. ಬದಲಾಗಿ ಸಮತೋಲ ದೃಷ್ಟಿಯಿಂದ ನೋಡಿದಲ್ಲಿ ನಮ್ಮ ಅಚ್ಚ ಕನ್ನಡದ ಜಾನಪದ ಸಾಮಗ್ರಿಗಳನ್ನು ಇವತ್ತಿನ ಅಗತ್ಯಕ್ಕೆ ತಕ್ಕಂತೆ ತಲಶೋಧನೆ ಮಾಡಬಲ್ಲ ಅನೇಕ ಉಪಕರಣಗಳನ್ನು ನಾವು ಪಶ್ಚಿಮದಿಂದ ಪಡೆಯಬೇಕಾಗಿದೆ. ಉದಾಹರಣೆಗೆ, ಮಹಾ ಪರಂಪರೆ, ಕಿರುಪರಂಪರೆ ಕುರಿತ ತಾತ್ವಿಕ ಚರ್ಚೆಗಳು, ಸಂಸ್ಕೃತೀಕರಣ ಮತ್ತು ಅದರ ವಿವಿಧ ರೂಪಗಳು ಶಿಷ್ಟ ಸಾಂಸ್ಕೃತಿಕ ಮಾದರಿಗಳು ಬಹು ಸಾಂಸ್ಕೃತಿಕ ಸಂದರ್ಭಗಳಲ್ಲಿ ಪಡೆಯಬಹುದಾದ ಅರ್ಥಗಳು, ಪ್ರಾದೇಶಿಕ ಭಾಷಾ ಪ್ರಪಂಚ ಮುಂತಾದ ವಿಷಯಗಳನ್ನು ಕುರಿತಂತೆ ಪಶ್ಚಿಮದಲ್ಲಿ ನಡೆದಿರುವ ಜಿಜ್ಞಾಸೆಗಳು ಭಾರತ ಉಪಖಂಡದಲ್ಲಿ ಸಂಸ್ಕೃತಜನ್ಯ /ಸಂಸ್ಕೃತ ಪ್ರಭಾವಿತ ವಿಚಾರಧಾರೆಗೂ ಅದಕ್ಕಿಂತ ಬೇರೆಯ ವಿಚಾರಧಾರೆಗಳಿಗೂ ಇರುವ ವ್ಯತ್ಯಾಸಗಳನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿವೆ. ಅದರಿಂದಾಗಿ ನಮ್ಮಲ್ಲಿನ ಅಸ್ಪೃಶ್ಯರು, ರೈತರು, ನಿರಕ್ಷರಿ ದುಡಿಮೆಗಾರರು ಮತ್ತು ಇವರೆಲ್ಲರ ಜೊತೆಯಲ್ಲಿ ಸೇರಿಹೋಗಿರುವ ಮಹಿಳೆಯರು, ಸಂತ ಕವಿಗಳು ಮುಂತಾದವರು ಸಂಸ್ಕೃತ ಮೂಲವಾದ ಪ್ರಬಲವಾದ ವಿಚಾರಧಾರೆಗಿಂತ ಭಿನ್ನವಾದ, ಅದಕ್ಕೆ ಪರ್ಯಾಯವೆನ್ನಬಹುದಾದ ವಿಚಾರಧಾರೆಗಳನ್ನು ತಮ್ಮಲ್ಲಿ ಹುದುಗಿಸಿಟ್ಟುಕೊಂಡಿರುವುದು ಬೆಳಕಿಗೆ ಬರುವಂತಾಗಿದೆ. ಕನ್ನಡದಲ್ಲಿ ಈ ರೀತಿ ಗುಪ್ತವಾಗಿರುವ ಅಸ್ಪರ್ಶಿತ ಕಿರು ಸಾಂಸ್ಕೃತಿಕ ಅಭಿವ್ಯಕ್ತಿ ವಲಯಗಳನ್ನು ಅನಾವರಣಗೊಳಿಸುವ ಯತ್ನ ಇತ್ತೀಚೆಗಷ್ಟೇ ಆರಂಭವಾಗಿದೆ. ಅದರಲ್ಲೂ ಮಹಿಳೆಯರದೇ ಆದ ಜಾನಪದ ಅಭಿವ್ಯಕ್ತಿ ರೂಪಗಳಲ್ಲಿ ಹುದುಗಿರುವ ಪ್ರತಿಸಂಸ್ಕೃತಿಯ ಅಂಶಗಳತ್ತ

* Towards a counter system: Women's Tales: A.K. Ramanujan : Gender, Genre and Power in South Asian Expressive Traditions: Ed. Arjun Appadurai, Frank J. Koram & Margaret A Mills. Delhi 1994

ಶೋಧನೆ ದಕ್ಷಿಣ ಕನ್ನಡದ ತುಳುಪಾಡ್ದನಗಳ ಅಧ್ಯಯನದ ಮೂಲಕ ಕಿರಿದಾಗಿ ಕಾಣಿಸಿಕೊಳ್ಳತೊಡಗಿದೆಯಷ್ಟೆ. ಈ ಬಗೆಯ ಅಧ್ಯಯನಗಳಿಗೆ ನೆರವಾಗಬಲ್ಲ, ಅಥವಾ ಹಾದಿ ತೋರಿಸಬಲ್ಲ ಸ್ವೋಪಜ್ಞ ಚಿಂತನೆಗಳಾಗಲಿ, ಅಂಥ ತಾತ್ವಿಕ ಚೌಕಟ್ಟುಗಳನ್ನಾಗಲಿ ನಮ್ಮ ಜಾನಪದ ತಜ್ಞರು ಇನ್ನೂ ರೂಪಿಸಬೇಕಾಗಿದೆ. ಇಂಥ ಪರಿಸರದಲ್ಲಿ ದಿ|| ಡಾ. ಎ.ಕೆ. ರಾಮಾನುಜನ್ ಅವರು ಕರ್ನಾಟಕದ ಜಾನಪದ ಸಾಮಗ್ರಿಯನ್ನು ಮಹಿಳೆಯರ ನೆಲೆಯಿಂದ ಅಧ್ಯಯನ ಮಾಡಲು ಯತ್ನಿಸಿರುವಂಥ ಕೆಲವು ಇಂಗ್ಲಿಷ್ ಲೇಖನಗಳು ಇಂಥ ಅಧ್ಯಯನಕ್ಕೆ ಮಾರ್ಗದರ್ಶನ ಮಾಡಿಸಬಲ್ಲವು. ಆ ದೃಷ್ಟಿಯಿಂದ ರಾಮಾನುಜನ್ ಅವರ ಒಂದು ಪ್ರಮುಖ ಲೇಖನವಾದ "Towards a Counter System: Women's Tales" ಎಂಬುದರಲ್ಲಿ ಅಡಕವಾಗಿರುವ ಮುಖ್ಯ ವಿಚಾರಗಳನ್ನು ಸಂಗ್ರಹಿಸಿ ಪರಿಚಯಿಸಲು ಇಲ್ಲಿ ಯತ್ನಿಸಿದೆ.

ಭಾರತೀಯ ಮನಸ್ಸು ರಾಮಾಯಣ ಮಹಾಭಾರತ, ಪುರಾಣಗಳ ಪೌರಾಣಿಕ ಕಥಾಜಗತ್ತಿನಿಂದ ಗಾಢವಾಗಿ ಪ್ರಭಾವಿತವಾದದ್ದು. ಹಾಗಿದ್ದರೂ ಇಲ್ಲಿನ ಜನರ ನಡುವೆ ಬೇರೆ ಎಷ್ಟೋ ಬಗೆಯ ಕತೆಗಳು, ಭಿನ್ನರೀತಿಯ ನಂಬಿಕೆಗಳು, ಪದ್ಧತಿಗಳೂ ಜೀವಂತವಾಗಿವೆ. ಇವುಗಳು ಸಂಸ್ಕೃತ ಮೂಲದ ಶಿಷ್ಟಲೋಕಕ್ಕಿಂತ ಭಿನ್ನರೀತಿಯ ಆಯ್ಕೆಗಳನ್ನು, ಭಿನ್ನವಾದ ನೋಟಗಳನ್ನು, ಪರಿಹಾರಗಳನ್ನು ಪ್ರತಿಪಾದಿಸುತ್ತಿರುತ್ತವೆ. ವಾಸ್ತವದಲ್ಲಿ ಸಂಸ್ಕೃತ ಪರಂಪರೆಯ ಕಥೆಗೆ ಭಿನ್ನವಾದೊಂದು ದೃಷ್ಟಿಕೋನ ಕರ್ನಾಟಕದ ರೈತರ, ದುಡಿಮೆಗಾರರ, ಮಹಿಳೆಯರ ಕಥೆಗಳು ಹೇಳಬಲ್ಲವು. "ಶಿಷ್ಟ"ಕ್ಕಿಂತ ಇದು ಭಿನ್ನವಾಗಿದ್ದರೂ, ಅದಕ್ಕೆ ತದ್ವಿರುದ್ಧವಾದದ್ದೇ ಈ ಜಾನಪದ ಎನ್ನುವುದನ್ನು ಒಪ್ಪದೆ, ರಾಮಾನುಜನ್ ಶಿಷ್ಟ, ಜಾನಪದಗಳೆರಡೂ ಒಂದೇ ಗುಂಪಿನ ಭಾಗಗಳಾಗಿ, ಒಂದು ಮತ್ತೊಂದರ ಮುಂದುವರಿಕೆಯಾಗಿಯೂ ಇರಬಲ್ಲವು. ಕೇವಲ ಅತಿಕೊನೆಯ ಬಿಂದುಗಳಲ್ಲಿ ಮಾತ್ರ ಅವು ಪರಸ್ಪರ ವಿರುದ್ಧವಾದಂತೆ ತೋರುತ್ತವೆ ಎನ್ನುತ್ತಾರೆ. ಈ ಸಮನ್ವಯದ ನೆಲೆಯಿಂದ ಸ್ತ್ರೀಜಾನಪದ ಕತೆಗಳನ್ನು ಅವರು ಪರಿಶೀಲಿಸುತ್ತಾರೆ.

"ಸ್ತ್ರೀಕತೆ"ಗಳು (೧) ಸ್ತ್ರೀಯರೇ ಹೇಳುವಂಥ ಕತೆಗಳಾಗಬಹುದು; (೨) ಸ್ತ್ರೀಯರನ್ನು ಕೇಂದ್ರವಾಗಿ ಇಟ್ಟುಕೊಂಡ ಕತೆಗಳೂ ಆಗಿರಬಹುದು. ಹಲವು ಸಲ ಪುರುಷರು ಕಥಕರಾಗಿರುವ ಕತೆಗಳೂ ಮೂಲದಲ್ಲಿ ಸ್ತ್ರೀಯರು ಹೇಳಿದ ಕತೆಗಳೇ ಆಗಿರುತ್ತವೆ. ಅಲ್ಲದೆ ಬರೀ ಪುರುಷರ ಹೊರಜಗತ್ತಿನಲ್ಲಿ ಹೇಳಲಾಗುವಂಥ ರಮ್ಯ, ಸಾಹಸಪ್ರಧಾನ ಅಥವಾ ಅಶ್ಲೀಲ ಕತೆಗಳಲ್ಲಿ ಕೂಡ ಸ್ತ್ರೀಯರು ಕೇಂದ್ರದಲ್ಲಿರುವುದುಂಟು. ಇವೆಲ್ಲವನ್ನೂ ಒಟ್ಟಾಗಿ ಸ್ತ್ರೀಕೇಂದ್ರಿತ ಕತೆಗಳು ಎಂದು ಹೇಳಬಹುದು. ಇವುಗಳೊಳಗೆ ತಾಯಿ-ಮಗಳು, ಅತ್ತೆ-ಸೊಸೆ, ತಂದೆ-ಮಗಳು, ಗಂಡ-ಹೆಂಡತಿ, ಸೂಳೆ ಮುಂತಾದ ಪಾತ್ರಗಳ ಬಗ್ಗೆ, ಅವರ ಸಂಬಂಧಗಳ ಬಗ್ಗೆ ನಿರೂಪಣೆಯಿರುತ್ತದೆ. ಹಲವಾರು ಹೆಣ್ಣುದೇವತೆಗಳ ಸುತ್ತ ಬೆಳೆದಿರುವ ಪುರಾಣಾಂಶಗಳು, ಸಂತ ಮಹಿಳೆಯರ ಚರಿತ್ರೆಗಳು, ನಾಯಕಿಯರನ್ನು ಕುರಿತ ಹಾಡುಗಳು ಹಾಗೂ ಹೆಂಗಸರು ಹೇಳುವ ರಾಮಾಯಣ, ಭಾರತ ಕಾವ್ಯಗಳೂ ಇದೇ ಗುಂಪಿಗೆ ಸೇರುವಂಥವು.

ಈ ರೀತಿ ಮಹಿಳೆಯನ್ನು ಕೇಂದ್ರವಾಗಿಟ್ಟು ಹೊರಡುವ ಜಾನಪದ ಕತೆಗಳಲ್ಲಿ ರಾಮಾನುಜನ್ ಮೂರು ಮುಖ್ಯ ವೈಚಾರಿಕ ನೆಲೆಗಳನ್ನು ಗುರುತಿಸುತ್ತಾರೆ. ಮೊದಲಿನದು ಭಾರತದ ಎಲ್ಲಾ ಧಾರ್ಮಿಕ, ತಾತ್ವಿಕ ಚಿಂತನೆ, ಚರ್ಚೆಗಳಲ್ಲಿ ಹಾಸುಹೊಕ್ಕಾಗಿರುವ ಕರ್ಮ ಸಿದ್ಧಾಂತ. ಎರಡನೆಯದು ಹೆಣ್ಣಿನ ಶೀಲ, ಪಾವಿತ್ರ್ಯದ ಬಗೆಗಿನ ಪರಿಕಲ್ಪನೆ, ಹಾಗೂ ಮೂರನೆಯದು ಇವೆರಡಕ್ಕಿಂತಲೂ ಭಿನ್ನವಾದ 'ಕತೆಗಳನ್ನು ಕುರಿತು ಹೇಳುವ ಕತೆಗಳು.' ಕರ್ಮಸಿದ್ಧಾಂತ ಮನುಷ್ಯರ ಯಾವ ಕಾರ್ಯವೂ ಆಕಸ್ಮಿಕವಲ್ಲ ಎನ್ನುತ್ತದೆ. ಪ್ರತಿಯೊಂದು ಕ್ರಿಯೆಯೂ ವರ್ತಮಾನದಲ್ಲಿ, ತನಗಿಂತ ಹಿಂದಿನ ಕರ್ಮದಿಂದ ಪ್ರೇರಿತವಾಗಿರುತ್ತದೆ. ಆದ್ದರಿಂದ ಅದು ನೈಮಿತ್ತಿಕ, ಕಾರ್ಯ-ಕಾರಣ ತರ್ಕಕ್ಕೆ ಬದ್ಧವಾಗಿರುತ್ತದೆ. ಸ್ವತಂತ್ರವಾಗಿರುವುದಿಲ್ಲ. ಈ ಬಗೆಯ ನೈಮಿತ್ತಿಕತೆಗೆ ನೈತಿಕ ನಂಬಿಕೆಗಳೂ ಸೇರಿಕೊಳ್ಳುತ್ತವೆ. ಕರ್ಮಗಳು ಒಳ್ಳೆಯ ಹಾಗೂ ಕೆಟ್ಟ ಬಗೆಯದಾಗಿರುತ್ತವೆ. ಅವು ಕ್ರಮವಾಗಿ ಪುಣ್ಯ ಅಥವಾ ಪಾಪವನ್ನು ಸಂಚಯಿಸುತ್ತವೆ. ಈ ನೈತಿಕ ದೃಷ್ಟಿಗೆ ಪುನರ್ಜನ್ಮ ತತ್ವವೂ ಸೇರಿದ್ದು, ಭಾರತೀಯರ ಕರ್ಮಸಿದ್ಧಾಂತಕ್ಕೆ ಪ್ರಬಲ ಶಕ್ತಿಯನ್ನು ಒದಗಿಸಿದೆ. ಮಾಡಿದ ಕರ್ಮಗಳ, ಪುಣ್ಯ ಅಥವಾ ಪಾಪ ಸಂಚಯವನ್ನು ಸವೆಸಲಿಕ್ಕಾಗಿ ಆತ್ಮವು ಮತ್ತೆ ಮತ್ತೆ ಬೇರೆ ಬೇರೆ ಶರೀರಗಳಲ್ಲಿ ಹುಟ್ಟುತ್ತದೆ. ಈ ನಿರಂತರ ಚಕ್ರವೇ ಸಂಸಾರ. ಇದರಿಂದ ಬಿಡುಗಡೆಯೇ ಮೋಕ್ಷ. ಇಂಥ ಸಂಕೀರ್ಣವಾದ ವಿಚಾರಗಳ ಗೊಂಚಲು ಕರ್ಮಸಿದ್ಧಾಂತ. ಆದರೆ ಕನ್ನಡದಲ್ಲಿ ಸ್ತ್ರೀಜಾನಪದ ಕತೆಗಳಲ್ಲಿ ಈ ಕರ್ಮಸಿದ್ಧಾಂತದ ವಿಚಾರಗಳೆಲ್ಲವನ್ನೂ ಪೂರ್ತಿಯಾಗಿ ಕೈಬಿಟ್ಟಿರುವ ಪ್ರತ್ಯೇಕ ಚಿಂತನಾಕ್ರಮವೊಂದನ್ನು ಕಾಣಬಹುದು ಎನ್ನುವ ರಾಮಾನುಜನ್, ಇದಕ್ಕೆ ಅನೇಕ ಕತೆಗಳನ್ನು ನಿದರ್ಶನವಾಗಿ ನೀಡುತ್ತಾರೆ. ಆದರೆ ಸಂಕ್ಷಿಪ್ತತೆಗಾಗಿ ಅವರು ಪರಿಶೀಲಿಸಿರುವ ಕತೆಗಳ ಪೈಕಿ ಕೇವಲ ಎರಡು ಕತೆಗಳ ಮಾದರಿಗಳನ್ನು ಮಾತ್ರ ನೋಡಬಹುದು.

ಮೊದಲನೆಯದು "ದೀಪದ ಮಲ್ಲಿ" ಎಂಬ ಕತೆ. ಈ ಕತೆಗೆ ಕನ್ನಡ, ತಮಿಳು, ತೆಲುಗು ಭಾಷಾ ಪ್ರದೇಶಗಳಲ್ಲೆಲ್ಲ ಅನೇಕ ಆವೃತ್ತಿಗಳು ದೊರೆಯುತ್ತವೆ. ಈ ಕತೆಯ ನಾಯಕಿ ಒಬ್ಬ ರಾಜಕುಮಾರಿ. ಮೂರು ಖಂಡುಗ ಮಲ್ಲಿಗೆ ಹೂ ಹಾಸಿ, ಮೂರು ಖಂಡುಗಳ ಹೂವನ್ನು ಹೊದೆಸಿ ತಂದೆ ಅವಳನ್ನು ಕೋಮಲವಾಗಿ ಬೆಳೆಸಿದ್ದನು. ಅವಳ ಕೈಹಿಡಿದಾತ ಕೂಡ ರಾಜಕುಮಾರನೇ. ಅವನ ಕಡೆಯವರು ಈ ಹೆಣ್ಣನ್ನು ಆರು ಖಂಡುಗ ಹೂವು ಹಾಸಿ, ಆರು

ಖಂಡುಗ ಹೂವು ಹೊದಿಸಿ ನೋಡಿಕೊಳ್ಳುತ್ತೇವೆಂದು ಮಾತುಕೊಟ್ಟು ಮನೆಗೆ ಕರೆದುಕೊಂಡಿದ್ದರು. ಅದರಂತೇ ಆಕೆಯ ಬದುಕು ಹೂವಿನ ಸುಪ್ಪತ್ತಿಗೆಯ ಮೇಲೆ ಸುಖಸಂತೋಷಗಳಿಂದ ಸಾಗಿತ್ತು. ಆದರೆ 'ವಿಧಿಯಮ್ಮ'ನಿಗೆ ಇದು ಸಹಿಸದಾಯಿತು. ಅವಳು ಪ್ರತಿರಾತ್ರಿಯೂ ಆಕೆಯ ಕನಸಿನಲ್ಲಿ ಬಂದು "ಇಷ್ಟೆಲ್ಲ ಸಿರಿ ನಿನಗಿದೆ. ಬೇರಾರಿಗೂ ಇಷ್ಟು ಐಸಿರಿಯಿಲ್ಲ. ಆದರೆ ಮೂರು ಖಂಡುಗ ಭತ್ತವನ್ನು ಯಾರು ತಿನ್ನಬೇಕು?" ಎಂದು ಪ್ರಶ್ನಿಸಿ, ಇವಳ ಹಾಸಿನ ಹೂವನ್ನೆಲ್ಲ ತೆಗೆದು ಮುಳ್ಳನ್ನು ಹಾಸುತ್ತಿರುತ್ತಾಳೆ. ಸುಕುಮಾರಿ ರಾಜಕುಮಾರಿ ಆ ಮುಳ್ಳಿನ ಹಾಸಿಗೆಯಲ್ಲಿ ನೊಂದು ನವೆದು ನವೆದು ದಿನೇ ದಿನೇ ಕೃಶವಾಗಿ ಬೆರಳಿನ ಗಾತ್ರವಾಗುತ್ತಾಳೆ. ಗಂಡನಿಂದ ಹಿಡಿದು ಮನೆ ಜನರು, ಆಳುಕಾಳುಗಳಿಗೆಲ್ಲ ಇದು ಅರ್ಥವಾಗದ ಅಚ್ಚರಿಯ ವಿಷಯ. ಅಷ್ಟೆಲ್ಲ ಸುಖವಾಗಿ ತಿಂದು, ಉಂಡು, ತಾವೆಲ್ಲ ಅಷ್ಟೊಂದು ಚೆನ್ನಾಗಿ ನೋಡಿಕೊಂಡರೂ ಈ ರೀತಿ ಇವಳೇಕೆ ಬಡವಾಗುತ್ತಿದ್ದಾಳೆ? ಎಂಬುದೇ ಅವರೆಲ್ಲರ ಪ್ರಶ್ನೆ. ಅವಳು ಎಲ್ಲ ತನ್ನ 'ಹಣೆಬರಹ' ಎಲ್ಲ ತನ್ನ 'ವಿಧಿ', ವಿಧಿಯೇ ಈ ರೀತಿ ತನ್ನನ್ನು ಕಷ್ಟಕ್ಕೆ ಗುರಿಪಡಿಸಿರುವಾಗ ಹುಲುಮಾನವರಿಗೆ ಹೇಳಿಕೊಂಡರೆ ಏನು ಪ್ರಯೋಜನ? ಎಂದುಕೊಂಡು ಅವಳು ಗಂಡನಿಗಾಗಲಿ, ಇತರರಿಗಾಗಲೀ ತನ್ನ ಸಂಕಟವನ್ನು ಹೇಳಿಕೊಳ್ಳದೆ ಬಾಯಿಮುಚ್ಚಿ ಅನುಭವಿಸುತ್ತಿರುತ್ತಾಳೆ. ಕೊನೆಗೊಮ್ಮೆ ಹತಾಶೆಯಿಂದ ಗಂಡನಿಗೆ ತನಗೊಂದು ಚಿತೆಯನ್ನು ಸಿದ್ಧಪಡಿಸೆಂದು ಆಗ್ರಹ ಪಡಿಸುತ್ತಾಳೆ. ಗಂಧದ ಕೊರಡು ಹೂಡಿದ ಚಿತೆಯೇರಿ, ಬೆಂಕಿಹೊತ್ತಿ ಉರಿಯುವಷ್ಟರಲ್ಲಿ ದೊಡ್ಡ ಬಿರುಗಾಳಿ ಎದ್ದು ಅವಳನ್ನು ಅಲ್ಲಿಂದ ಎತ್ತಿಕೊಂಡು ಒಯ್ದು ಕಾಡಿನಲ್ಲಿ ಬಿಡುತ್ತದೆ. ಅಲ್ಲಿದ್ದ ಗುಹೆಯೊಳಗೆ ಆಕೆ ಹೋದಾಗ ಅಲ್ಲಿ ಭತ್ತದ ರಾಶಿ ಕಾಣುತ್ತದೆ. ವಿಧಿಯಮ್ಮ ಪ್ರತಿರಾತ್ರಿ ಕನಸಲ್ಲಿ ಬಂದು ತನ್ನನ್ನು ಕೇಳುತಿದ್ದುದು ಈ ಭತ್ತದ ಬಗ್ಗೆಯೇ ಎಂದಾಕೆ ಊಹಿಸಿಕೊಳ್ಳುತ್ತಾಳೆ. ಸ್ವಲ್ಪ ಸ್ವಲ್ಪ ಧಾನ್ಯ ಕುಟ್ಟಿ ಹಿಟ್ಟು ಮಾಡಿ ಆಹಾರ ತಯಾರಿಸಿ ತಿಂದು ದಿನಗಳನ್ನು ದೂಡುತ್ತಾಳೆ. ಮೂರುನಾಲ್ಕು ವರ್ಷಗಳಾಗುವಷ್ಟರಲ್ಲಿ ಆ ಭತ್ತವೆಲ್ಲ ತೀರಿರುತ್ತದೆ. ಅದುವರೆಗೆ ಮನುಷ್ಯರ ಮುಖವನ್ನೂ ನೋಡದೆ ತಾನು ಬದುಕಿರುವ ಬಗ್ಗೆ ನೊಂದು, ಅವಳು ಬೆಟ್ಟವೇರಿದಾಗ ಕೆಳಗಡೆ ಸೌದೆ ಕಡಿಯುವ ಜನ ಕಾಣಿಸುತ್ತಾರೆ. ಅವರ ಜೊತೆ ಹೊರಟು ಪಟ್ಟಣ ಸೇರಿ, ಅವರ ನೆರವಿನಿಂದ ಒಂದು ಮನೆಯಲ್ಲಿ ಕೆಲಸದವಳಾಗಿ ಬದುಕತೊಡಗುತ್ತಾಳೆ. ಆದರೆ ಆ ಮನೆಯ ಒಡತಿಯ ಮಗುವಿನ ಹಾರವನ್ನು ನವಿಲೊಂದು ನುಂಗಿದಾಗ ಅದನ್ನು ಕದ್ದಳೆಂದು ಆಪಾದಿಸಿ ಈಕೆಯನ್ನು ತಲೆಬೋಳಿಸಿ ಕ್ರೂರವಾಗಿ ದಂಡಿಸುತ್ತಾರೆ. ಮನೆಗೆಲಸವೆಲ್ಲ ಮಾಡಿದ ಬಳಿಕ, ನುಣ್ಣಗೆ ಬೋಳಿಸಿದ್ದ ತನ್ನ ತಲೆಯ ಮೇಲೆ ಸೆಗಣಿ ತೊಪ್ಪೆಯಿಟ್ಟು, ಅದರ ಮೇಲೆ ಹಣತೆ ಹೊತ್ತು, ಬತ್ತಿಯನ್ನು ಹೊತ್ತಿಸಿ, ಆ ಮನೆಯನ್ನೆಲ್ಲ ಬೆಳಗುತ್ತಾ ರಾತ್ರಿಯಿಡೀ ಹೊತ್ತುಕೊಂಡು ನಿಂತಿರಬೇಕಾದ ಶಿಕ್ಷೆ ಅದು. ಒಮ್ಮೆ ಒಡತಿಯ ಅಣ್ಣ ನೆರೆಯೂರಿನಿಂದ ಬಂದು, ತಂಗಿಯಿಂದ ಉಪಚಾರ ಮಾಡಿಸಿಕೊಂಡು, ಊಟವಾದ ಮೇಲೆ ಎಲೆಯಡಿಕೆ ಮೆಲ್ಲುತ್ತಿರುತ್ತಾನೆ. ಅವನು ಕುಳಿತಿದ್ದ ಜಾಗದಲ್ಲಿ ದೀಪ ಬೆಳಗು ಹೋಗು ಎಂದು ಯಜಮಾನಿ ಈ ದೀಪದ ಮಲ್ಲಿಯನ್ನು ಅಲ್ಲಿಗೆ ಕಳಿಸುತ್ತಾಳೆ. ಇವಳಿಗೆ ಆತ ತನ್ನ ಗಂಡನೇ ಎಂದು ಗುರುತು ಹತ್ತಿದರೂ ಅವನು ತನ್ನ ಹೆಂಡತಿ ಚಿತೆಯಲ್ಲಿ ನಾಶವಾದಳೆಂದೇ ನಂಬಿದ್ದು, ಈಕೆಯನ್ನು ನೋಡಿದರೂ ಗುರುತಿಸಲಿಲ್ಲ. ತನ್ನ ಕಾಲಕ್ಷೇಪಕ್ಕಾಗಿ ಅವನು ದೀಪದ ಮಲ್ಲಿಯನ್ನು ತನಗೊಂದು ಕತೆಯನ್ನು ಹೇಳೆಂದು, ಅವಳು ಇಲ್ಲವೆಂದರೂ ಬಿಡದೆ ಒತ್ತಾಯಿಸುತ್ತಾನೆ. ಆಗ ಅವಳು ತಾನು ಹುಟ್ಟಿದಂದಿನಿಂದ ಅಂದಿನವರೆಗೆ ಹೊಂದಿದ ಅನುಭವ, ಯಾತನೆ, ಸಂಕಟಗಳ ಕತೆಯನ್ನೇ ಬೇರೊಬ್ಬಳ ಕತೆಯೆಂಬಂತೆ ಅವನಿಗೆ ಹೇಳತೊಡಗುತ್ತಾಳೆ. ಹೇಳುವಾಗ ಅವಳಿಗೆ ದುಃಖವುಕ್ಕಿಬರುತ್ತದೆ. ಕತೆ ಕೇಳಿದ ಗಂಡನಿಗೆ ಆಕೆಯೇ ತನ್ನ ಹೆಂಡತಿಯೆಂದು ಗುರುತುಹತ್ತುತ್ತದೆ. ಅವಳನ್ನು ಶಿಕ್ಷಿಸಿದ್ದಕ್ಕಾಗಿ ತಂಗಿಯನ್ನು ನಿಂದಿಸಿ, ಹೆಂಡತಿಯನ್ನು ತನ್ನ ಊರಿಗೆ ಕರೆದೊಯ್ಯುತ್ತಾನೆ. ಸತ್ತುಹೋಗದೆ ಅವಳು ಬದುಕಿದ್ದಾಳೆಂದು ಕಂಡು ಎಲ್ಲರೂ ಸಂತಸಗೊಳ್ಳುತ್ತಾರೆ.

ಈ ಕತೆಯ ನಾಯಕಿಗೆ ಬದುಕಿನಲ್ಲಿ ಎದುರಾಗುವ ಅನುಭವಗಳು ಕಷ್ಟ ಸಂಕಟಗಳು ಅವಳ ಕರ್ಮಕ್ಕೆ ಅಥವಾ ಅವಳ 'ಶೀಲ'ಕ್ಕೆ ಸಂಬಂಧಿಸಿದಂಥವಲ್ಲ. ವ್ಯಕ್ತಿಯಾಗಿ ಅವಳಲ್ಲಿ ಕಳಂಕವೇನೂ ಇಲ್ಲ. ಅವಳು ಯಾವ ತಪ್ಪೂ ಮಾಡಿಲ್ಲ. ಆದರೆ ಅವಳು ಸುಖವಾಗಿದ್ದುದನ್ನು ವಿಧಿಯಮ್ಮನಿಗೆ ಸಹಿಸಲಾಗದ್ದರಿಂದ ಈಕೆ ನಾನಾ ಕಷ್ಟ ಕೋಟಲೆಗಳನ್ನು ಎದುರಿಸಬೇಕಾಗಿದೆ. 'ವಿಧಿಲಿಖಿತ' ಅಥವಾ 'ಹಣೆಬರಹ' ಎಂದು ಅದನ್ನು ಸ್ವೀಕರಿಸಿ, ಸಹಿಸುತ್ತಾ, ಬೇರೊಂದು ಕಾಲ ಬಂದೀತೆಂದು ಆಕೆ ಕಾಯುವುದೇ ಆಕೆಗಿರುವ ದಾರಿ. ಕೊನೆಯಲ್ಲಿ ಕತೆಯ ನಿಜವಾದ ಕ್ರಿಯೆ ಹೊರಗೆ ಬರುತ್ತದೆ. ತನ್ನ ಬದುಕೆಲ್ಲ ತಾನೇ ಒಂದು ವಸ್ತುವೆಂಬಂತೆ ನೋಡಬಲ್ಲ ಕತೆಯಾಗುವವರೆಗೂ ಕಾದಿದ್ದು, ಒಬ್ಬ ಅರ್ಹನಾದ ಕೇಳುಗನಿಗೆ ಆ ಕತೆಯನ್ನು ಆಕೆ ಹೇಳುವುದೇ ಇಲ್ಲಿನ ಮುಖ್ಯಕ್ರಿಯೆ. ಅವಳ ಬದುಕಿನ ಯಾತನೆಗಳೆಲ್ಲ ಹೀಗೆ ಕತೆಯಾಗಿ ಹೊರಬರುವುದರ ಜೊತೆಯಲ್ಲೇ ಅವಳ ಬವಣೆಗಳೂ ಕೊನೆಗೊಳ್ಳುತ್ತವೆ. ಅಗಲಿದ್ದ ಗಂಡನನ್ನು ಅವಳು ಮತ್ತೆ ಕೂಡಿಕೊಳ್ಳುತ್ತಾಳೆ. ಅಂದರೆ ಅವಳೊಳಗೆ ಇದ್ದ ಕತೆ ಹೊರಬರುವುದರಲ್ಲೇ ಅವಳ ಬಿಡುಗಡೆಯೂ ಇದೆ.

"ದೀಪದ ಮಲ್ಲಿ" ಕತೆಯಲ್ಲಿ ನಾಯಕಿಗೆ ಒದಗುವ ಯಾತನೆಗಳಿಗೆ ಯಾವುದೇ ವೈಚಾರಿಕ ವಿವರಣೆಯಿಲ್ಲ. ಅವು ಪಾಪ

ಸವೆಸುವ ಪ್ರಕ್ರಿಯೆಯಲ್ಲ. ಅಂಥ ಯಾತನೆಯಿಂದ ಅವಳು ತನ್ನ ನಡತೆಯನ್ನು ತಿದ್ದಿಕೊಳ್ಳಬೇಕಾಗಿಲ್ಲ. ಆ ಎಲ್ಲ ಸಂಕಟ, ಬವಣೆ ಕೇವಲ ಯಾದೃಚ್ಛಿಕ ಅಥವಾ 'ವಿಧಿ'ಯಂಥ ರಹಸ್ಯ ಶಕ್ತಿಯ ಮೂಲದ್ದು. ಅದರ ವಾಸ್ತವತೆಯನ್ನು ಒಪ್ಪಿ ಸ್ವೀಕರಿಸಬಹುದು ಅಥವಾ ನಕ್ಕು ಚತುರತೆಯಿಂದ ಅದನ್ನು ಬದಿಗೆ ಸರಿಸಬಹುದೇ ಹೊರತು ನಾವು ಅದಕ್ಕೆ ಯಾವುದೇ ರೀತಿ ವೈಚಾರಿಕ ಕಾರಣವನ್ನು ವಿವರಿಸಲು ಸಾಧ್ಯವಿಲ್ಲ. ಮನುಷ್ಯರ ಬದುಕಿನಲ್ಲಿ ಹೀಗೆ ವ್ಯಕ್ತಿಗಳ ಬುದ್ಧಿಗೆ, ಶರೀರಕ್ಕೆ, ತಾತ್ವಿಕತೆಗೆ, ತರ್ಕಕ್ಕೆ ಸಿಗಲಾರದ ರಹಸಮಯ ಅಂಶಗಳು ಎಷ್ಟೋ ಎದುರಾಗುತ್ತವೆ. ಆ ಅಗ್ರಾಹ್ಯ ಸಂಗತಿಗೆ ಈ ಕತೆ ವಿವರಣೆ ನೀಡುವುದಿಲ್ಲ. ಇಲ್ಲಿ ಇನ್ನೊಂದು ಅಂಶವನ್ನು ಗಮನಿಸಬೇಕು. ಒಳಗೇ ಹುದಗಿಸಿಟ್ಟುಕೊಂಡ ದುಃಖದುಮ್ಮಾನಗಳ ಹಾಗೆ ಒಬ್ಬ ವ್ಯಕ್ತಿ ಬೇರೊಬ್ಬರಿಗೆ ಹೇಳದೆ ಮುಚ್ಚಿಟ್ಟುಕೊಂಡ ಕತೆ, ಹಾಡುಗಳೂ ವಿನಾಶಕಾರಿಯಾಗಬಹುಹು. ಅವು ರೂಪಾಂತರಗೊಂಡು ಅಂಥ ವ್ಯಕ್ತಿಗಳ ಮೇಲೆ ಸೇಡು ತೀರಿಸಿಕೊಳ್ಳಬಹುದು. ಆದ್ದರಿಂದ ಕತೆಗಳನ್ನು ಹೇಳಬೇಕು. ಅವುಗಳಿಗೆ ಅವುಗಳದೇ ಆದ ಜೀವವಿರುತ್ತದೆ. ಬೇರೆಯವರಿಗೆ ಸಂವಹನೆಯಾಗದಿದ್ದರೆ ಅವುಗಳಿಗೆ ಉಸಿರುಗಟ್ಟುತ್ತದೆ. ಅವು ಸಾಯುತ್ತವೆ. ಅದರಿಂದಾಗಿ ಅವು ತಮ್ಮನ್ನು ಹೊಂದಿರುವಂಥ ವ್ಯಕ್ತಿಗಳು ಬೇರೆಯವರಿಗೆ ಹೇಳಲಿ ಎಂದು ಬಯಸುತ್ತವೆ. ಈ ನಂಬಿಕೆಯನ್ನು ಸಾರುವ ಅನೇಕ ಸ್ತ್ರೀಕತೆಗಳನ್ನು ಉದಾಹರಿಸಿ, ರಾಮಾನುಜನ್ ಇವೆಲ್ಲ ''ಕತೆಗಳ ಬಗ್ಗೆ ಇರುವ ಕತೆಗಳು'' ಎಂದು ಕರೆದಿದ್ದಾರೆ.

ಈ ಜಾನಪದ ಕತೆಗಳಿಗೂ, ಶಿಷ್ಟ ಸಂಪ್ರದಾಯದ ಕತೆಗಳಿಗೂ ಇರುವ ಮುಖ್ಯವ್ಯತ್ಯಾಸ ಕತೆ ಹೇಳುವ ಉದ್ದೇಶಕ್ಕೆ ಸಂಬಂಧಿಸಿದ್ದು, ರಾಮಾಯಣ, ಮಹಾಭಾರತ, ಪುರಾಣದ ಕತೆಗಳಿಗೆಲ್ಲ ಕತೆ ಹೇಳಲು ಕಾರಣ ಅವುಗಳ ''ಫಲಶ್ರುತಿ.'' ಎಂದರೆ ಆ ಕತೆಗಳಿಗೆ ವಿಶೇಷ ಶಕ್ತಿಯಿದ್ದು, ಕೇಳುವವರ ಮೇಲೆ ಅವು ಪರಿಣಾಮ ಬೀರಿ, ಪುಣ್ಯ ಸಂಪಾದನೆಗೆ ನೆರವಾಗುತ್ತವೆ ಎಂಬ ನಂಬಿಕೆ ಅಲ್ಲಿದೆ. ಅಂದರೆ ಶಿಷ್ಟ ಕತೆಗಳ ಪರಿಣಾಮ ಆ ಕತೆಯ ವ್ಯಕ್ತಿಗಳಿಗೆ ಹೊರಗಿನದು. ಆದರೆ ಸ್ತ್ರೀಕತೆಗಳಲ್ಲಿ ಇಂಥ ಹೊರಗಿನ ಫಲವಾಗಲಿ, ಪರಿಣಾಮಗಳನ್ನಾಗಲಿ ಆರೋಪಿಸಿಲ್ಲ. ಬದಲಾಗಿ ಕತೆಗಳೊಳಗೆ ಸ್ವತಂತ್ರ ಅಸ್ತಿತ್ವವನ್ನು ಇವು ಪಡೆಯುತ್ತವೆ. ಕತೆಯು ಹೊರಬರುವುದರಲ್ಲಿ ಆ ಕತೆಯ ನಾಯಕಿಯ ವೈಯಕ್ತಿಕ ಬಿಡುಗಡೆಯೂ ಸೇರಿರುತ್ತದೆ. ಕತೆಯಿಂದ ಹುಟ್ಟುವ ಈ ಪರಿಣಾಮಕ್ಕೆ ಪಾಪ ಪುಣ್ಯಗಳ ಲೇಪವಿಲ್ಲ. ಬದಲಾಗಿ ಅದು ವ್ಯಕ್ತಿ ತನ್ನೊಳಗೆ ಕಂಡುಕೊಳ್ಳುವಂಥ ಬದಲಾವಣೆ ಆಗಿರಬಹುದು. ತಮಿಳು ಭಾಷೆಯ ಜಾನಪದ ಕತೆಯೊಂದರಲ್ಲಿ ಒಬ್ಬ ವಿಧವೆ, ತನ್ನಿಬ್ಬರು ಗಂಡುಮಕ್ಕಳು, ಇಬ್ಬರು ಸೊಸೆಯರಿಂದ ನೂರಾರು ಬವಣೆ ಪಟ್ಟರೂ ಯಾರಿಗೂ ಹೇಳಿಕೊಳ್ಳದೆ, ಆ ಸಂಕಟಗಳ ಭಾರದಿಂದ ದಿನೇದಿನೇ ಊದಿಕೊಂಡು ದಪ್ಪಗಾಗುತ್ತಾಳೆ. ಕೊನೆಗೆ ಹತಾಶಳಾಗಿ ಊರಾಚೆಯ ಪಾಳುಮನೆಯ ನಾಲ್ಕುಗೋಡೆಗಳ ಮುಂದೆ ನಿಂತು ನಾಲ್ಕು ಜನರಿಂದ ತಾನು ಪಡುತ್ತಿರುವ ಬವಣೆಗಳನ್ನು ಹೇಳಿಕೊಳ್ಳುತ್ತಾಳೆ. ಆ ಸಂಕಟಕ್ಕೆ ಗೋಡೆಗಳು ಕುಸಿದು ಉರುಳುತ್ತವೆ. ಅವಳ ಮೈ ಹಗುರಾಗಿ, ಮನಸ್ಸು ತಿಳಿಯಾಗುತ್ತದೆ. ಹೀಗೆ ವ್ಯಕ್ತಿಯ ಒಳಗಿಂದಲೇ ಆಗುವ ಬದಲಾವಣೆಯನ್ನು, ತೀರಾ ವೈಯುಕ್ತಿಕವಾದುದನ್ನು ಈ ಸ್ತ್ರೀಕತೆಗಳು ಹೇಳುತ್ತವೆ.

(ಮುಂದುವರೆಯುತ್ತದೆ.)

ಭಾರತೀಯ ಮಹಿಳೆಯನ್ನು ಕುರಿತ ಪ್ರತಿಯೊಂದು ಸಾಮಾಜಿಕ ವ್ಯಾಖ್ಯಾನದಲ್ಲೂ ಎದುರಾಗುವ ತೀರಾ ಸಾಮಾನ್ಯವಾದ ವಿರೋಧಾಭಾಸವೆಂದರೆ ಏಕೆ ಕೆಲವೇ ಮಹಿಳೆಯರು ಸಾರ್ವಜನಿಕ ಅಧಿಕಾರ ಮತ್ತು ಗೌರವಗಳ ತುಟ್ಟತುದಿಗೆ ಏರಬಲ್ಲರು ಮತ್ತು ಬಹುಮಂದಿ ಸಾಮಾನ್ಯ ಮಹಿಳೆಯರು ಸಾರ್ವಜನಿಕ ಜೀವನದ ಅನೇಕ ಕ್ಷೇತ್ರಗಳಿಂದ ಹೊರಗೇ ಉಳಿದಿದ್ದಾರೆ ಎಂಬುದು.

ಕೆಲವರಪ್ರಕಾರ ಭಾರತೀಯ ಸಂಸ್ಕೃತಿ ಮೂಲಭೂತವಾಗಿ ಮಹಿಳೆಯರನ್ನು ತಾರತಮ್ಯದಿಂದ ನೋಡುವಂಥದ್ದಲ್ಲವಾದ್ದರಿಂದಲೇ ಕೆಲವು ಸ್ತ್ರೀಯರಿಗೆ ಮೇಲಕ್ಕೆ ಏರಲು ಸಾಧ್ಯವಾಗಿದೆ. ಮತ್ತೆ ಕೆಲವರ ಪ್ರಕಾರ ಈ ಮಹಿಳೆಯರು ಕೇವಲ ಅಪವಾದಗಳು. ಅದರಿಂದ ಏನೂ ಸಾಬೀತಾಗದು.

ಆದರೆ ಮನಶ್ಶಾಸ್ತ್ರಜ್ಞರ, ನಿಮಗೆ ಗೊತ್ತಿರುವಂತೆ, ವಿಚಿತ್ರ ದಾರಿಗಳಲ್ಲಿ ಯೋಚಿಸುವವರ, ಪ್ರಕಾರ ಸ್ಪರ್ಧೆ ಆಕ್ರಮಣ ಶೀಲತೆ, ಅಧಿಕಾರ ಕ್ರಿಯಾಶೀಲತೆ ಮತ್ತು ನುಗ್ಗುವ ಗುಣಗಳು ಭಾರತದಲ್ಲಿ ಪೌರುಷದೊಂದಿಗೇ ಸಮೀಕರಣಗೊಳ್ಳುವುದಿಲ್ಲ. ವಾಸ್ತವದಲ್ಲಿ ಪುರಾಣಗಳಲ್ಲಿ ಮತ್ತು ಜಾನಪದಗಳಲ್ಲಿ ಸಾಂಪ್ರದಾಯಿಕವಾಗಿ ಅರ್ಥೈಸಲಾಗಿರದಂಥ ಸಾಮಾಜಿಕ ಸನ್ನಿವೇಶಗಳಿಗೆ ಸೂಕ್ತ ನಿಯಮಗಳನ್ನು ಹೇಳುವಲ್ಲಿ, ಈ ಗುಣಗಳೆಲ್ಲ ಬಹುಪಾಲು ಸ್ತ್ರೀತ್ವಕ್ಕೆ ಸಂಬಂಧಿಸಿರುತ್ತವೆ. ಭಾರತೀಯನ ಅಂತರಂಗದ ಲೋಕದೊಳಗೆ ತನ್ನನ್ನು ಧಿಕ್ಕರಿಸಿಬಿಡಬಲ್ಲ ಸರ್ವಶಕ್ತೆಯಾದ ಹೆಣ್ಣೊಬ್ಬಳ ಕಲ್ಪನೆ ಯಾವಾಗಲೂ ಒಂದು ಮೂಲೆಯಲ್ಲಿ ಇದ್ದೇ ಇರುತ್ತದೆ.

-ಆಷೀಸ್ ನಂದಿ

(Woman versus Womanliness)

ಪ್ರತಿಭಾನ್ವಿತ ಮುಗ್ಧೆಯ ಮಾರಣಹೋಮ

ಮೂಲ : 'ದಿ ವೀಕ್' ವಾರಪತ್ರಿಕೆ ಮತ್ತು ಇಂಡಿಯನ್ ಎಕ್ಸ್‌ಪ್ರೆಸ್ ದಿನಪತ್ರಿಕೆ

ಸಂಗ್ರಹ ಭಾಷಾಂತರ - ಶಾಂತಾ ನಾಗರಾಜ್

ಆಕೆ ಸಾಕ್ಷರತಾ ಆಂದೋಲನ ವಲಯದ ತಾರೆಯಾಗಿದ್ದಳು. ಅವಳ ಕೋಕಿಲ ಕಂಠ ಸಾವಿರಾರು ಅನಕ್ಷರಸ್ಥರನ್ನು ಅಕ್ಷರತೆಯ ಕಡೆಗೆ ಸೆಳೆಯುತ್ತಿತ್ತು. ಅಲ್ಲದೆ ಆಕೆ ಉದಯೋನ್ಮುಖ ಕವಯತ್ರಿಯಾಗಿದ್ದಳು. ಮತ್ತು ರಾಜ್ಯಮಟ್ಟದ ಫುಟ್‌ಬಾಲ್ ಆಟಗಾರ್ತಿಯಾಗಿದ್ದಳು. ಆಕೆಯ ಪ್ರತಿಭೆಗೆ ಆಕೆಯ ಊರಿನವರಲ್ಲದೆ ಪಾಟ್ನಾದ ಸರ್ಕಾರಿ ಅಧಿಕಾರಿಗಳೂ ಬೆರಗಾಗಿದ್ದರು. ಅವಳೇ ಬಿಹಾರದ ಜಮ್ಶೆ ಜಿಲ್ಲೆಯ ದೀಪಾ ಮರ್ಮು ಎಂಬ ಆದಿವಾಸಿ ಕ್ರಿಶ್ಚಿಯನ್ ಹದಿಹರಯದ ಹುಡುಗಿ. ಇಷ್ಟೆಲ್ಲ ಬುದ್ಧಿವಂತೆಯಾದವಳು ಬದುಕಿನಲ್ಲಿ ಎಸಗಿದ ತಪ್ಪು ಒಂದೇ ಒಂದು. ಅದು ತನ್ನ ತಂದೆಯ ಪ್ರಾಯದ ಗ್ರಾಮೀಣ ಅಭಿವೃದ್ಧಿ ಅಧಿಕಾರಿ (Barhat Block Development Officer, B.D.O) ರವೀಂದ್ರ ಸಿಂಗ್‌ನನ್ನು ಪೂರ್ತಿಯಾಗಿ ನಂಬಿದ್ದು. ಮತ್ತು ಅವನೊಂದಿಗೆ ಸಾಕ್ಷರತಾ ಆಂದೋಲನ ಶಿಬಿರಗಳಲ್ಲಿ ಭಾಗವಹಿಸಲು ಜಿಲ್ಲೆಯನ್ನೆಲ್ಲಾ ಸುತ್ತಿದ್ದು.

ನವೆಂಬರ್ ೨೬, ೧೯೯೬ರಂದು ದೀಪಳ ಪಾಲಿಗೆ ಕರಾಳದಿನ. ಅಂದು ಜಿಲ್ಲೆಯ ಗ್ರಾಮೀಣಾಭಿವೃದ್ಧಿ ನಿರ್ದೇಶಕರಾದ ಕೆ.ಕೆ. ಸಿನ್ಹ ಎನ್ನುವವರು ಆಕೆಗೆ ಕರೆ ಕಳುಹಿಸಿ, ಸಿಕಂದ್ರ ಎನ್ನುವ ಊರಿನಲ್ಲಿ ಬಿ.ಡಿ.ಓ. ರವೀಂದ್ರಸಿಂಗ್‌ರೊಡನೆ ಸಾಕ್ಷರತಾ ಶಿಬಿರದಲ್ಲಿ ಭಾಗವಹಿಸಲು ತಿಳಿಸಿದರು. ಇಂಥ ಶಿಬಿರಗಳಲ್ಲಿ ಆಗಿಂದಾಗ್ಗೆ ಪಾಲ್ಗೊಂಡು ಅನುಭವವಿದ್ದ ದೀಪಳಿಗೆ ಈ ಶಿಬಿರಗಳೆಂದರೆ ಅಚ್ಚುಮೆಚ್ಚು. ತನ್ನ ಜನಾಂಗ ಅಕ್ಷರಸ್ಥರಾಗಿ, ಒಳ್ಳೆಯ ಬದುಕನ್ನು ಸ್ವೀಕರಿಸಬೇಕೆಂದು ಬಹುವಾಗಿ ಶ್ರಮಿಸುತ್ತಿದ್ದಳಾಕೆ. ಇಂದಿಗೂ ದೀಪಳ ಪಂಗಡಿಗರು ಅವಳು ತಾದಾತ್ಮ್ಯತೆಯಿಂದ ಕೆಲಸಗಳಲ್ಲಿ ತೊಡಗಿಕೊಳ್ಳುತ್ತಿದ್ದ ರೀತಿಯನ್ನು ಮನದುಂಬಿ ಸ್ಮರಿಸುತ್ತಾರೆ. ತನ್ನವರಿಗೆ ಅಕ್ಷರದ ಜ್ಯೋತಿಯನ್ನು ಬೆಳಗಲು ಹೋಗಿ ತಾನು ಕತ್ತಲೆಯಲ್ಲಿ ನಂದಿಹೋದದ್ದನ್ನು ಕಣ್ಣೀರಿನೊಡನೆ ಸ್ತುತಿಸುತ್ತಾರೆ.

ನವೆಂಬರ್ ೨೯ರ ಮುಂಜಾನೆ ಈ ಹುಡುಗಿ ಅಳುತ್ತ ಮನೆಗೆ ವಾಪಸ್ಸಾದಳು. ಅವಳು ತನ್ನ ತಾಯಿ ಸಲೋಮಿಗೆ ಹೇಳಿದ ಮಾತೊಂದೇ "ಅಮ್ಮ ನನ್ನ ಬದುಕು ನಾಶವಾಯಿತು. ಆ ಬಿ.ಡಿ.ಓ. ನನ್ನನ್ನು ಹಾಳುಮಾಡಿಬಿಟ್ಟ" ಅನಂತರದ ಎಂಟು ತಿಂಗಳು ದೀಪಳ ಪಾಲಿಗೆ ನರಕ ಸದೃಶವಾಗಿತ್ತು. ಆಕೆ ಅಪಮಾನದಿಂದ ಕುಸಿದಳು. ಹೆಜ್ಜೆಹೆಜ್ಜೆಗೆ ಸಂಕಷ್ಟಗಳನ್ನು ಅನುಭವಿಸಿದಳು. ಆದರೂ ನ್ಯಾಯಕ್ಕಾಗಿ ಹೋರಾಡಿದಳು. ಆ ಅನಿಶ್ಚಿತ ಬೇಗುದಿಯ ದಿನಗಳಲ್ಲೂ ಆಕೆ ತಾನನುಭವಿಸಿದ ನರಕಯಾತನೆಯ ಬಗ್ಗೆ ಡೈರಿಯಲ್ಲಿ ದಾಖಲಿಸುತ್ತಾ ಬಂದಳು ಮತ್ತು ತೀರ ಹತಾಶೆಯ ಸಮಯದಲ್ಲೂ ಗೋಡೆಯ ಕ್ಯಾಲೆಂಡರ್‌ಗಳ ಮೇಲೆ ಕವನಗಳನ್ನು ರಚಿಸಿದಳು.

ದೀಪಳ ಡೈರಿ ಹೇಳುತ್ತದೆ- ನವೆಂಬರ್ ೨೬ರಂದು ಸಿನ್ಹಾ ಸಾಹೇಬರ ಕರೆಯ ಮೇರೆಗೆ ರವೀಂದ್ರರೊಡನೆ ಸಿಕಂದ್ರಕ್ಕೆ ದೀಪ ಹೋದಳು. ಆಲೂರಿನಲ್ಲಿ ರವೀಂದ್ರರ ಸೋದರಿಯ ಮನೆಯಲ್ಲಿ ಅವಳಿಗೆ ತಂಗಲು ವ್ಯವಸ್ಥೆಯಾಗಿತ್ತು. ೨೭, ೨೮ರಂದು ಪೂರ್ತಿ ಸುತ್ತಾಟ, ಶಿಬಿರಗಳಲ್ಲಿ ಪಾಲ್ಗೊಳ್ಳುವಿಕೆ ಎಲ್ಲದರಿಂದ ದೀಪ ಸಾಕಷ್ಟು ದಣಿದಿದ್ದಳು. ೨೮ರ ರಾತ್ರಿ ರವೀಂದ್ರರ ಸೋದರಿ ಮನೆಗೆ ಬಂದಾಗ ಆ ಸೋದರಿ ಅವಳಿಗೆ ಗೆಸ್ಟ್‌ರೂಮಿನಲ್ಲಿ ಮಲಗಲು ಹೇಳಿದಳು. ಅದು ರವೀಂದ್ರ ಮಲಗುವ ಸ್ಥಳವಾಗಿತ್ತು. ಆದರೆ ಸೋದರಿಯ ಪ್ರಕಾರ ಆ ರಾತ್ರಿ ರವೀಂದ್ರರು ಮನೆಗೆ ಬರುವುದಿಲ್ಲವೆಂದೂ ದೀಪ ಅಲ್ಲಿ ಹಾಯಾಗಿ ಮಲಗಬಹುದೆಂದೂ ತಿಳಿಯಿತು. ಬೆಳಗಿನ ಝಾವದಿಂದ ರಾತ್ರಿಯವರೆಗೆ ಕೆಲಸ ಮಾಡಿದ್ದ ದೇಹಕ್ಕೆ ಜಗತ್ತು ಮುಳುಗಿದರೂ ಎಚ್ಚರವಾಗದ ನಿದ್ದೆ. ಮಧ್ಯರಾತ್ರಿಯಲ್ಲಿ ಗಾಢನಿದ್ದೆಯಲ್ಲಿ ಮುಳುಗಿದ್ದವಳಿಗೆ ಮೈಮೇಲೆ ಮಣಭಾರ ಹೊತ್ತಂತಾಗಿ ಎಚ್ಚರವಾಯಿತು. ಆದರೆ ಆ ವೇಳೆಗಾಗಲೇ ಆಕ್ರಮಣ ಪ್ರಾರಂಭವಾಗಿಹೋಗಿತ್ತು. ಲೈಂಗಿಕತೆಯ ಬಗ್ಗೆ ಏನೂ ಅರಿಯದ ಮುಗ್ಧ ಬಾಲೆಗೆ ರವೀಂದ್ರನನ್ನು ಗುರ್ತಿಸುವುದಕ್ಕೆ ಕ್ಷಣಕಾಲ ಹಿಡಿಯಿತು, ಏನಾಗುತ್ತಿದೆ ಎಂದರಿಯುವ ಹೊತ್ತಿಗೆ ಎಲ್ಲವೂ ಮುಗಿದಿತ್ತು.

ಡೈರಿಯಲ್ಲಿ ದೀಪ ಬರೆಯುತ್ತಾಳೆ. "ನಂತರ ಮನೆಗೆ ಬಂದು ಅಮ್ಮನೊಂದಿಗೆ ಎಲ್ಲ ಹೇಳಿದ ಮೇಲೆ ನಾನು ಮನೆಯಿಂದ ಹೊರಗೆ ಹೋಗುವುದನ್ನೇ ನಿಲ್ಲಿಸಿದೆ. ನನಗೆ ಹೊರಗಿನ ಪ್ರಪಂಚಕ್ಕೆ ಮುಖತೋರಿಸುವುದಕ್ಕೇ ಹೆದರಿಕೆಯಾಗುತ್ತಿತ್ತು" ಹೀಗೆ ಅಪಮಾನ, ಕ್ರೋಧ, ದುಃಖಗಳಲ್ಲೇ ತೊಳಲಾಡುತ್ತಾ ಹಲವಾರು ವಾರಗಳೂ ಒಂದೆರಡು ತಿಂಗಳುಗಳೂ ಕಳೆದೇ ಹೋದವು. ಫೆಬ್ರವರಿ ೬ರಂದು ಹಿಂದೆ ಬರುತ್ತಿದ್ದಂತೆ ಹೊಟ್ಟೆನೋವು ಕಾಣಿಸಿಕೊಂಡಿತು. ಹತ್ತಿರದ ಮಹಿಳಾವೈದ್ಯೆ ರೂಪಾಸಿಂಗ್‌ರ ಹತ್ತಿರ ತಪಾಸಣೆ ಮಾಡಿಸಿದಾಗ ದೀಪ ಗರ್ಭಿಣಿಯಾಗಿರುವುದು ತಿಳಿಯಿತು. ದೀಪ ಡೈರಿಯಲ್ಲಿ ಹೇಳುತ್ತಾಳೆ

"ನಾನು ನನ್ನ ಮಗುವನ್ನು ಕೊಲ್ಲಲಿಚ್ಛಿಸಲಿಲ್ಲ. ಸಮಾಜದ ಎಲ್ಲ ತಿರಸ್ಕಾರಗಳನ್ನು ಸಹಿಸಿಯಾದರೂ ನನ್ನ ಮಗುವನ್ನು ಉಳಿಸಿಕೊಳ್ಳುತ್ತೇನೆ ಎಂದು ನಿರ್ಧರಿಸಿದೆ."

ದೀಪಾ ಗಟ್ಟಿಯಾಗಬೇಕಿತ್ತು. ತನ್ನ ಹೊಟ್ಟೆಯಲ್ಲಿ ಬೆಳೆಯುತ್ತಿರುವ ಕಂದನಿಗೆ ಆರ್ಥಿಕ ಭದ್ರತೆ ತಂದುಕೊಡಬೇಕು. ತನಗಾಗಿರುವ ಅನ್ಯಾಯಕ್ಕೆ ಪರಿಹಾರ ದೊರಕಿಸಿಕೊಳ್ಳಬೇಕಿತ್ತು. ಹತಾಶೆಯನ್ನು ಕೊಡವಿಕೊಂಡು ಮೇಲೇಳಲೇ ಬೇಕಾಗಿತ್ತು. ಆಕೆ ಮೊದಲು ತನ್ನನ್ನು ಶಿಬಿರಕ್ಕೆ ಕಳಿಸಿದ ಸಿನ್ಹಾ ಸಾಹೇಬರನ್ನು ಭೇಟಿ ಮಾಡಿದಳು. ಆದರೆ ಅಲ್ಲಿ ದೊರೆತ ಸಲಹೆಗಳು ದೀಪಳಿಗೆ ದಿಗ್‌ಭ್ರಮೆ ಹುಟ್ಟಿಸಿದವು. ಯಾರ ಆದೇಶದಿಂದ ಅವಳು ಶಿಬಿರಕ್ಕೆ ಹೋದಳೋ, ಯಾರು ತನ್ನ ಪ್ರತಿಭೆಯನ್ನು ಮುಕ್ತಕಂಠದಿಂದ ಹೊಗಳಿ ತನಗೆ ಹೆಚ್ಚುಹೆಚ್ಚು ಅವಕಾಶಗಳನ್ನು ನೀಡುತ್ತಿದ್ದರೋ ಆ ವ್ಯಕ್ತಿ ಇವಳ ಇಂಥ ಕಷ್ಟಕ್ಕೆ ಆಸರೆಯಾಗುವುದರ ಬದಲು ತಾನು ಇಂಥ ಕೇಸುಗಳಲ್ಲಿ ಸಿಕ್ಕಿಹಾಕಿಕೊಳ್ಳಲು ಇಷ್ಟ ಪಡುವುದಿಲ್ಲವೆಂದೂ, ದೀಪ ಈ ಪ್ರಸಂಗವನ್ನು ಮರೆತುಬಿಡಬೇಕೆಂದೂ ಉಚಿತವಾದ ಸಲಹೆ ನೀಡಿದರು. ಅಷ್ಟೇ ಅಲ್ಲ ಅವಳು ಬಂದು ತನ್ನ ಮುಂದೆ ಹೇಳಿದ್ದನ್ನು ಇನ್ನಷ್ಟು ಒರಟಾಗಿ ಕಠೋರ ಶಬ್ದಗಳಿಂದ ರವೀಂದ್ರನಿಗೂ ತಿಳಿಸಿ ತನ್ನ ಕೈಕೆಳಗಿನ ಅಧಿಕಾರಿಗೆ ಮಹದುಪಕಾರವನ್ನು ಮಾಡಿದ.

ದೀಪ ಮತ್ತವಳ ತಾಯಿಯ ಪ್ರಯತ್ನ ಇಲ್ಲಿಗೇ ನಿಲ್ಲಲಿಲ್ಲ. ಅವರಿಬ್ಬರೂ ಜಿಲ್ಲಾನ್ಯಾಯಾಧೀಶರಾದ ರಾಜಕಿಶೋರ್ ಪ್ರಸಾದ್ ಎನ್ನುವವರ ಮೊರೆ ಹೋದರು. ಆದರೆ ಅಲ್ಲಿಯೂ ಮುಖಭಂಗವೇ ಕಾದಿತ್ತು. ಅಂಥ ಗಣ್ಯ ಅಧಿಕಾರಿಗಳ ಬಗ್ಗೆ ದೂರನ್ನು ಕೊಂಡೊಯ್ದುದ್ದಕ್ಕಾಗಿ ತಾಯಿ, ಮಗಳಿಗೆ ಛೀಮಾರಿ ಹಾಕಲಾಯಿತು. ಜಮ್ಮೈ ಜಿಲ್ಲೆಯ ಪೋಲಿಸ್ ಸೂಪರಿಂಟೆಂಡೆಂಟ್ ಮಹಾಶಯನೂ ಎಲ್ಲ ಅತ್ಯಾಚಾರ ಪ್ರಕರಣಗಳಲ್ಲಿ ಸಾಮಾನ್ಯವಾಗಿ ಮಾಡುವಂತೆ ದೂರನ್ನೇ ದಾಖಲಿಸದೆ ಬೈಗುಳದ ಮಳೆ ಹರಿಸಿದ. ಇವೆಲ್ಲದರ ನಂತರವೂ ಅವರ ನ್ಯಾಯದ ಹುಡುಕಾಟ ನಿಲ್ಲಲಿಲ್ಲ. ತೀಕ್ಷ್ಣಮತಿ ದೀಪಳಿಗೆ ರವೀಂದ್ರನ ಸ್ನೇಹವಲಯಗಳು ಒಂದೊಂದಾಗಿ ನೆನಪಿಗೆ ಬರತೊಡಗಿ ಯಾವ ಬಾಗಿಲು ತಟ್ಟಿದರೆ ತನಗೆ ನ್ಯಾಯಸಿಗಬಹುದು ಎನ್ನುವ ಲೆಕ್ಕಾಚಾರ ತೀವ್ರವಾಗಿ ಕಾಡಿತು. ರವೀಂದ್ರನ ಗೆಳೆಯ ಜಯಪ್ರಕಾಶ್ ನಾರಾಯಣ್‌ಯಾದವ್ ಎಂಬಾತ ಮಾನವ ಸಂಪನ್ಮೂಲ ಇಲಾಖೆಯ ಮಂತ್ರಿಯಾಗಿರುವುದು ನೆನಪಿಗೆ ಬಂದು ತಾಯಿಮಗಳ ಯಾತ್ರೆ ಪಾಟ್ನಾದವರೆಗೆ ಬೆಳೆಯಿತು.

ದೀನರಾಗಿ ಯಾರ ಬಾಗಿಲಿಗೆ ಬಂದು ಈ ದಲಿತ ಮಹಿಳೆಯರು ನ್ಯಾಯಕ್ಕಾಗಿ ತಹತಹಿಸಿದರೋ ಆ ಮಂತ್ರಿ ಮಹೋದಯ ಮತ್ತು ಅವನೊಂದಿಗಿದ್ದ ಅರವತ್ತು ವರ್ಷದ ವೃದ್ಧ ಅಖಿಲೇಶ್ವರ ಎನ್ನುವವರು ಸೇರಿ ದೀಪಳನ್ನೇ ಹಿಯಾಳಿಸಿದರು. ಕಠೋರ ಮಾತುಗಳಿಂದ ಜರೆದರು. ಅವರ ಪ್ರಕಾರ ದೀಪಳೇ ಚಾರಿತ್ರ್ಯಹೀನ ಹುಡುಗಿಯಾಗಿದ್ದಳು. "ಒಳ್ಳೆ ಹುಡುಗಿಯರು ಯಾರಾದರೂ ಹೀಗೆ ಒಬ್ಬಂಟಿಯಾಗಿ ಬಿ.ಡಿ.ಓ. ಕರೆದನೆಂದು ಹೊರಟು ಹೋಗುತ್ತಾರೇನು?" ನಿರ್ದೇಶಕನ ಆದೇಶ ಪಾಲಿಸಿದ್ದಕ್ಕೆ ಅವಿದ್ಯಾವಂತರಿಗೆ ವಿದ್ಯೆ ಕಲಿಸುವ ಉತ್ಸಾಹಕ್ಕೆ, ಸತತ ದುಡಿಮೆಗೆ ದೀಪಳಿಗೆ ಸಿಕ್ಕ ಅಭಿದಾನವಿದು !! ಮತ್ತೂ ಮುಂದುವರೆದ ವೃದ್ಧ ಅಖಿಲೇಶ್ವರನ ಪ್ರಕಾರ ರವೀಂದ್ರನದು ತಪ್ಪೇ ಅಲ್ಲ, ಏಕೆಂದರೆ ಪರಾಶರ, ವಿಶ್ವಾಮಿತ್ರರಂಥ ವಿರಕ್ತರೇ ಹೆಣ್ಣಿನೊಡನೆ ಸುಖಿಸುತ್ತಿದ್ದರಂತೆ! ಅಲ್ಲದೆ ದೀಪಳಂಥ ಆದಿವಾಸಿ ಕುರೂಪಿ ಹುಡುಗಿ, ರವೀಂದ್ರನಂಥವನು ಒಮ್ಮೆ ಕೂಡಿದ್ದಕ್ಕೆ ಜನ್ಮ ಪಾವನವಾಯಿತು ಎಂದು ಸಂತೋಷ ಪಡಬೇಕಂತೆ! ಇದು ನಮ್ಮ ಮಂತ್ರಿಮಹೋದಯರೂ ಅವರ ಸಲಹೆಗಾರರೂ ಹೆಣ್ಣಿನ ಬಗ್ಗೆ ತಳೆದಿರುವ ದಿವ್ಯಭಾವ!

ದಿಟ್ಟೆ ದೀಪಾ ಎಲ್ಲ ಅವಮಾನಗಳನ್ನೂ ಸಹಿಸುತ್ತಲೇ ನ್ಯಾಯದ ಹೋರಾಟದಲ್ಲಿ ಮುಂದುವರೆದಳು. ಈಗ ದೀಪಳ ಕಾಲುಗಳು ಬಿಹಾರದ ಮುಖ್ಯಮಂತ್ರಿ ಲಲ್ಲೂಪ್ರಸಾದ್ ಯಾದವನ ಮನೆಯ ಮುಂದೆ ನಿಂತಿತ್ತು. ಯಥಾಪ್ರಕಾರ ಕಾವಲುಗಾರ (ಸಂದರ್ಶನಕ್ಕೆ ಪೂರ್ವಭಾವಿಯಾದ ಅನುಮತಿ ಈ ತಾಯಿಮಗಳ ಹತ್ತಿರ ಇಲ್ಲದ ಕಾರಣ) ಒಳಗೆ ಬಿಡಲು ನಿರಾಕರಿಸುತ್ತಿದ್ದ. ಇವರು ಅವನ ಬಳಿ ದೀನರಾಗಿ ಬೇಡುತ್ತಲೇ ಇದ್ದರು. ಆ ಹೊತ್ತಿಗೆ ಆರೋಗ್ಯಮಂತ್ರಿ ನರೇಂದ್ರಸಿಂಗರ ಕಾರುಬಂತು. ಕಾರಿನೊಳಗಿಂದಲೇ ಮಂತ್ರಿಗಳು ದೀಪಳನ್ನು ಗುರುತಿಸಿದರು. ದೀಪಳ ಗಾಯನದಿಂದಾಗಿ, ಆಟಪಾಟಗಳಿಂದ ಪಡೆದ ಪ್ರಶಸ್ತಿಗಳಿಂದಾಗಿ ಆ ವಲಯದಲ್ಲೇ ಆಕೆ ಪ್ರತಿಭಾನ್ವಿತ ಹುಡುಗಿಯಾಗಿದ್ದಳು. ಮಂತ್ರಿಗಳು ಕಾವಲುಗಾರನಿಗೆ ಹೇಳಿ ಒಳಗೆ ಪ್ರವೇಶ ದೊರಕಿಸಿಕೊಟ್ಟರು. ಲಲ್ಲೂಜಿಯವರ ಬಳಿ ದೀಪಳ ಚಾರಿತ್ರ್ಯಕ್ಕೇ ಬಣ್ಣಕಟ್ಟಿದ ಜಯಪ್ರಕಾಶಯಾದವನೂ ಇದ್ದ. ಆತ ದೀಪಳನ್ನು ನೋಡುತ್ತಲೇ ಲಲ್ಲೂಜಿಯವರ ಕಿವಿಯಲ್ಲಿ ತಾನು ಕಟ್ಟಿದ ಕತೆ ಹೇಳಲಾರಂಭಿಸಿದ. ಆದರೆ ಲಲ್ಲೂ ಆತನನ್ನು ಗದರಿಸಿ ದೀಪಳ ಹೇಳಿಕೆಗಳನ್ನು ಗಮನವಿಟ್ಟು ಕೇಳಿ ಆ ತಕ್ಷಣವೇ ಪೋಲಿಸ್ ಇಲಾಖೆಯ ಮುಖ್ಯಸ್ಥನಿಗೆ ದೂರವಾಣಿಯ ಮೂಲಕ ಈ ಕೇಸನ್ನು ಠಾಣೆಯೊಳಗೆ ನೊಂದಾಯಿಸಿಕೊಂಡು ಸೂಕ್ತ ಕ್ರಮಗಳನ್ನು ಜರುಗಿಸುವಂತೆ ಆದೇಶ ನೀಡಿದರು.

ಆದರೆ ಈ ದೇಶದ ವ್ಯವಸ್ಥೆಯಲ್ಲಿ ಒಬ್ಬ ಮುಖ್ಯಮಂತ್ರಿಯವರಿಂದಲೇ ಎಲ್ಲ ಸಮಸ್ಯೆಯೂ ಪರಿಹಾರವಾಗುವುದಿಲ್ಲವಲ್ಲ. ಆ ಕ್ಷಣಕ್ಕೆ ದೀಪ ಮತ್ತು ಅವಳ ತಾಯಿ ಸಲೋಮಿಗೆ ಸ್ವಲ್ಪ ನೆಮ್ಮದಿ ಸಿಕ್ಕಿತು. ಮತ್ತು ರವೀಂದ್ರನ ವಿರುದ್ಧ

ಠಾಣೆಯಲ್ಲಿ ಕೇಸು ನೊಂದಾವಣೆಗೊಂಡು ಫೈಲು ಸೇರಿತು. ಮಹಾ ಖದೀಮರಾದ ರವೀಂದ್ರ ಮತ್ತು ಇದಕ್ಕೆ ಚಿತಾವಣೆ ನೀಡಿದ ಸಿನ್ಹಾ ನಿರೀಕ್ಷಣಾ ಜಾಮೀನು ಪಡೆದುಬಿಟ್ಟಿದ್ದರಿಂದ ಪೋಲಿಸರಿಗೆ ಅವರನ್ನು ಬಂಧಿಸಲಾಗಲಿಲ್ಲ. ಅದಕ್ಕೆ ಬದಲಾಗಿ ದೀಪ ಮತ್ತು ಅವಳ ಮನೆಯವರಿಗೆ ಮತ್ತಷ್ಟು ಸಂಕಷ್ಟಗಳು ಎದುರಾದವು. ರೌಡಿಗಳು ಬಂದು ಮನೆಬಾಗಿಲು ತಟ್ಟಿ ಎಲ್ಲರನ್ನೂ ಕೊಲ್ಲುವುದಾಗಿ ಬೆದರಿಕೆ ಹಾಕಲಾರಂಭಿಸಿದರು. ಆದರೂ ದೀಪಾ ಮತ್ತು ಸಲೋಮಿಯರು ಹೆದರಲಿಲ್ಲ.

ದೀಪಳ ಗರ್ಭ ಬೆಳೆಯುತ್ತಿತ್ತು. ಸರಿಯಾದ ಆಹಾರ ಮತ್ತು ಮಾನಸಿಕ ನೆಮ್ಮದಿ ಇವೆರಡೂ ಇಲ್ಲದ ಕಾರಣ ಅವಳಿಗೆ ತನ್ನ ಜೀವಿತದ ಅವಧಿಯಲ್ಲಿ ರವೀಂದ್ರನಿಗೆ ಶಿಕ್ಷೆಯಾಗುವುದನ್ನು ನೋಡುವೆನೋ ಇಲ್ಲವೋ ಎನಿಸಲಾರಂಭಿಸಿತು. ಅವಳು ಡೈರಿಯಲ್ಲಿ ಬರೆಯುತ್ತಾಳೆ "ನನ್ನ ಕಣ್ಣಮುಂದೆ ಸಾವು ಇಣಕು ಹಾಕುತ್ತಿದೆ. ಅದು ನನ್ನ ಹತ್ತಿರ ಹತ್ತಿರ ತೆವಳುತ್ತಿರುವಂತೆ ಭಾಸವಾಗುತ್ತಿದೆ. ನಾನು ಸತ್ತರೆ ಬಿ.ಡಿ.ಓ. ಮತ್ತು ಡಿ.ಆರ್.ಡಿ.ಎ (ಜಿಲ್ಲಾ ಗ್ರಾಮೀಣಾ ಅಭಿವೃದ್ಧಿ ನಿರ್ದೇಶಕ) ರಿಬ್ಬರೂ ನನ್ನ ಕುಟುಂಬದವರನ್ನೂ ಪೀಡಿಸುತ್ತಾರೆ ಎನ್ನಿಸುತ್ತಿದೆ. ಅವರಿಬ್ಬರೇ ನನಗೆ ಹದಿಹರಯದಲ್ಲೇ ಗರ್ಭಧರಿಸುವ ಪರಿಸ್ಥಿತಿ ತಂದೊಡ್ಡಿದ್ದು. ಈಗಲೂ ಮನಸಾಕ್ಷಿಯಿಂದ ದೃಢವಾಗಿ ಹೇಳುತ್ತೇನೆ ರವೀಂದ್ರನೇ ನನ್ನ ಬದುಕನ್ನು ಹೊಸಕಿ ಹಾಕಿದವನು."

ಮುಂದೆ ನಡೆದುದೆಲ್ಲವೂ ದುರ್ಘಟನೆಗಳ ಸರಮಾಲೆಯೇ ದೀಪಳಿಗೆ. ಅವಳನ್ನು ಪರೀಕ್ಷಿಸುತ್ತಿದ್ದ ಡಾಕ್ಟರ್ ನಿಗದಿ ಪಡಿಸಿದ್ದಕ್ಕಿಂತ ಹತ್ತುದಿನ ಮೊದಲೇ ಹೆರಿಗೆ ನೋವು ಕಾಣಿಸಿತು. ಅವಳನ್ನು ಹಳ್ಳಿಯಿಂದ ಬಾಮ್‌ಧಾ ಆಸ್ಪತ್ರೆಗೆ ಕರೆತರಲಾಯಿತು. ಆದರೆ ಅಲ್ಲಿಯ ವೈದ್ಯಾಧಿಕಾರಿಗಳು ಈ ಅವಿವಾಹಿತ ತಾಯಿಗೆ ಹೆರಿಗೆ ಮಾಡಲು ನಿರಾಕರಿಸಿ ಒಳಕ್ಕೆ ಬಿಡಲಿಲ್ಲ. ಕೆಲವು ಹಳ್ಳಿಗರ ಮತ್ತು ಲಾರಿಡ್ರೈವರನ ಸಹಾಯದಿಂದ ಲಾರಿಯಲ್ಲಿಯೇ ದೂರದ ಝೂರ್ಝೂ ಆಸ್ಪತ್ರೆಗೆ ಕರೆತರಲಾಯಿತು. ಆದರೆ ಮಾರ್ಗದಲ್ಲೇ ದೀಪಳಿಗೆ ಹೆರಿಗೆಯಾಗಿ ಗಂಡುಮಗು ಹುಟ್ಟಿ ಆಕೆ ಪ್ರಜ್ಞಾಶೂನ್ಯಳಾಗಿ ಸ್ಥಿತಿ ಚಿಂತಾಜನಕವಾಯಿತು. ಈ ಆಸ್ಪತ್ರೆಯಲ್ಲಿಯೂ ರವೀಂದ್ರನ ಕಬಂಧ ಬಾಹುಗಳು ತನ್ನ ಹೀನ ಕೃತ್ಯವನ್ನು ನಡೆಸಿಯೇ ಬಿಟ್ಟಿತ್ತು. ರವೀಂದ್ರನ ನೆಂಟನೇ ಆದ ವೈದ್ಯ ದೀಪಳನ್ನು ತಪಾಸಣೆ ಮಾಡಲು ನಿರಾಕರಿಸಿದ. ಬಹಳ ಬೇಡಿಕೆಯ ನಂತರ ಆಸ್ಪತ್ರೆಗೆ ಪ್ರವೇಶ ದೊರೆಯಿತು. ಆತ ತನ್ನ ಕೆಳ ವೈದ್ಯಾಧಿಕಾರಿಗೆ ದೀಪಳಿಗೆ ಎರಡು ಇಂಜೆಕ್ಷನ್‌ಗಳನ್ನು ಚುಚ್ಚಲು ತಿಳಿಸಿದ. ಈ ಸೂಜಿಯ ಮದ್ದು ದೀಪಳ ಶರೀರ ಪ್ರವೇಶಿಸಿದ ಕೆಲವೇ ಕ್ಷಣಗಳಲ್ಲಿ ಅವಳ ಜೀವ ಹಾರಿಯೇ ಹೋಯಿತು!! ಎರಡು ದಿನಗಳ ನಂತರ ಯಾವ ಪೋಸ್ಟ್‌ಮಾರ್ಟಂ ಸಹ ಮಾಡಲಾಗದೆ ಅವಳ ಶರೀರವನ್ನು ಹೂತುಬಿಡಲಾಯಿತು. ದೀಪಳ ಚಾರಿತ್ರ್ಯ, ನ್ಯಾಯಕ್ಕಾಗಿ ಅವಳ ನಿರಂತರ ಹೋರಾಟ ಎಲ್ಲವೂ ಮಣ್ಣುಪಾಲಾಯಿತು.

ಈಗ ದೀಪಳ ಕೇಸನ್ನು ಮಾನವ ಹಕ್ಕು ಸಮಿತಿಗೆ ವಹಿಸಲಾಗಿದೆ. ಅದು ರಾಜ್ಯ ಸರ್ಕಾರಕ್ಕೆ ಬಿ.ಡಿ.ಓ. ರವೀಂದ್ರನನ್ನೂ ಡಿ.ಆರ್.ಡಿ.ಎ. ಕೆ.ಕೆ ಸಿನ್ಹನನ್ನೂ ತಕ್ಷಣ ಕೆಲಸದಿಂದ ಅಮಾನತ್ತು ಗೊಳಿಸುವಂತೆ ಆದೇಶ ನೀಡಿದೆ. ಇದೇ ಸೆಪ್ಟೆಂಬರ್ ೨೭ರ ದಿನಪತ್ರಿಕೆ ಇಂಡಿಯನ್ ಎಕ್ಸ್‌ಪ್ರೆಸ್ ವರದಿಯ ಪ್ರಕಾರ ಈ ಸಮಿತಿ ಸುಪ್ರೀಂಕೋರ್ಟ್‌ವರೆಗೂ ಹೋಗಿ ರವೀಂದ್ರ ಮತ್ತು ಸಿನ್ಹಾರ ನಿರೀಕ್ಷಣಾ ಜಾಮೀನನ್ನು ರದ್ದುಪಡಿಸುವಂತೆ ಸರ್ಕಾರಕ್ಕೆ ಆದೇಶ ನೀಡಿದೆ. ಈ ಏಳುಜನರ ತಜ್ಞರ ಸಮಿತಿ ಜಮ್ಮೈ ಜಿಲ್ಲೆಯಲ್ಲಿ ಪ್ರವಾಸಮಾಡಿ ದೀಪಳ ಅತ್ಯಾಚಾರ ಹಾಗೂ ಅಸಹಜ ಸಾವಿನ ಬಗ್ಗೆ ತನಿಖೆ ನಡೆಸುತ್ತಿದೆ. ಆದರೆ ಈ ಸಮಿತಿಯ ವರದಿ ಸಹ ಎಲ್ಲ ವರದಿಗಳ ಹಾಗೆ ಕಚೇರಿಯ ಫೈಲುಗಳಲ್ಲಿ ಹುಳುಗಳಿಗಾಹಾರ ವಾಗುತ್ತದೋ ಇಲ್ಲವೋ ಕಾದು ನೋಡಬೇಕು.

ಇಂದಿನ ಭಾರತದಲ್ಲಿ ಹೆಣ್ತನವನ್ನು ಮತ್ತೆ ಅರ್ಥೈಸಿಕೊಳ್ಳಬೇಕೆಂದರೆ ಪುರುಷನ ಮತ್ತು ಸಾರ್ವಜನಿಕ ಕಾರ್ಯನಿರ್ವಹಣೆಯ ಪರಿಕಲ್ಪನೆಯನ್ನೂ ಮತ್ತೆ ಅರ್ಥೈಸಿಕೊಳ್ಳಬೇಕಾಗುತ್ತದೆ. ಬದಲಾವಣೆಯ ಪ್ರಕ್ರಿಯೆ ಸಾಗಿರುವಂತೆ ಮಹಿಳೆಯ ವಿಮೋಚನೆ ಮತ್ತು ಪುರುಷನೊಂದಿಗಿನ ಅವಳ ಸಮಾನತೆಗಳು ಮಹತ್ವ ಪಡೆದಿವೆ. ಆದರೆ ಅವೇ ಅತಿ ಮುಖ್ಯ ಸಮಸ್ಯೆಗಳೆನಿಸಿಲ್ಲ. ಈಗಾಗಲೇ ಸವಲತ್ತನ್ನು ಪಡೆದುಕೊಂಡಿರುವ ಆಧುನಿಕ ಮಹಿಳೆಯರ ಚಿಕ್ಕಗುಂಪುಗಳಲ್ಲಿ ಈ ಪ್ರಶ್ನೆಗಳು ತೀವ್ರ ಚರ್ಚೆಗೆ ಅವಕಾಶ ನೀಡಿರಬಹುದು. ಆದರೆ ದೂರದ ಒಳನಾಡುಗಳಲ್ಲಿರುವ ಬಹುಸಂಖ್ಯಾತರು ಇವುಗಳನ್ನು ಸಮಾಜದ ವಿಮರ್ಶೆಗೆ, ಪರಿಷ್ಕರಣೆಗೆ ಅವಶ್ಯಕವಾದ ಪ್ರಶ್ನೆಗಳು ಎಂದು ಪರಿಗಣಿಸಿಯೇ ಇಲ್ಲ.

ಮಹಿಳೆಯ ವಿಮೋಚನೆ ಮತ್ತು ಲಿಂಗ ಸಮಾನತೆಯ ಪ್ರಶ್ನೆಗಳೇ ಮುಖ್ಯವಾಗಬೇಕಿದ್ದರೆ, ಸಹಜವಾಗಿಯೇ ಸ್ತ್ರೀ ಪುರುಷ ಸಂಬಂಧವು ದಾಂಪತ್ಯ ಕೇಂದ್ರಿತವಾಗಿರುವಂಥ ಸಂಸ್ಕೃತಿಯಿದ್ದಲ್ಲಿ ಮಾತ್ರ ಸಾಧ್ಯ. ತನ್ನ ಗಂಡ ಅಥವ ಸಮವಯಸ್ಕ ಗೆಳೆಯರಿಂದ ವಿಮೋಚನೆಯನ್ನೂ ಸಮಾನತೆಯನ್ನೂ ಅರಸಬಹುದೇ ಹೊರತು ಮಗನಿಂದ ಅಲ್ಲ. ದಾಂಪತ್ಯ ಸಂಬಂಧವೇ ಒಟ್ಟು ಬದುಕಿನ ಅಂಚಿನ ಬಳಿ ಉಳಿದಿರುವಲ್ಲಿ ವಿಮೋಚನೆ ಮತ್ತು ಸಮಾನತೆಯ ಪ್ರಶ್ನೆಗಳೂ ಅದೇ ನೆಲೆಯಲ್ಲಿ ಉಳಿಯುವುದು ಅನಿವಾರ್ಯ.

-ಆಷೀಸ್ ನಂದಿ

(Woman versus Womanliness)

ಹೆಂಗಸರ ಎರಡನೆಯ ಪಾಳಿ

ಕೆ. ಸತ್ಯನಾರಾಯಣ

ಮನೆಗೆಲಸವನ್ನು ಯಾರು ಮಾಡಬೇಕು? ಉದ್ಯೋಗಿ ಮಹಿಳೆಯರನ್ನು ಕಾಡುವ ಪ್ರಶ್ನೆ ಇದು. ಈ ಪ್ರಶ್ನೆಗೆ ಸರಳವಾದ ಉತ್ತರ ಇಲ್ಲ. ಒಂದು ಕುಟುಂಬದ ಗಂಡ ಹೆಂಡತಿಯರಿಬ್ಬರು ಉದ್ಯೋಗದಲ್ಲಿ ಇರುವಾಗ ಹೆಂಡತಿ ಹೊರಗೆಲಸವನ್ನು ಮುಗಿಸಿ ಮನೆಗೆಲಸದ ಎರಡನೇ ಪಾಳಿಗೆ ಸಿದ್ಧರಾಗಬೇಕೆ? ಮಕ್ಕಳ ಲಾಲನೆ, ಪಾಲನೆಯನ್ನು ನೋಡುವವರು ಯಾರು? ಮನೆಗೆಲಸದ ಎರಡನೆಯ ಪಾಳಿ ಹೆಂಡತಿಯ ಹೊಣೆಯಾದರೆ ಆಕೆಯ ಆಯಸ್ಸು, ಆರೋಗ್ಯ, ಕುಟುಂಬ ಸೌಖ್ಯದ ಗತಿ-ಕತೆ ಏನು?

ಆರ್ಲಿ ಹಾಕ್ಸ್‌ಚೈಲ್ಡ್ ಮತ್ತು ಅನ್ನೆ ಮ್ಯಾಕ್ ಚುಂಗ್ ಅಮೆರಿಕಾದ ಇಬ್ಬರು ಮಹಿಳಾ ಶಾಸ್ತ್ರಜ್ಞರು. ಅಪಾರ ಕ್ಷೇತ್ರಕಾರ್ಯ ಮತ್ತು ಅಧ್ಯಯನದ ಬಳಿಕ ಅವರು ಬರೆದಿರುವ The second shift ಮೇಲಿನ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುವ ಒಂದು ಪ್ರಯತ್ನವೆನಿಸಿದೆ. ಈ ಪುಸ್ತಕವನ್ನು ಕೆ. ಸತ್ಯನಾರಾಯಣ ಇಲ್ಲಿ ಪರಿಚಯಿಸಿದ್ದಾರೆ. -ಸಂ.

ಸುಮಾರು ಒಂದು ತಿಂಗಳ ಹಿಂದೆ ಮಹಾರಾಷ್ಟ್ರದ ಮುಖ್ಯಮಂತ್ರಿ ಶರದ್ ಪವಾರ್ ಮಹಿಳೆಯರ ಅಭಿವೃದ್ಧಿಗಾಗಿ ಕೆಲವೊಂದು ಪ್ರಗತಿಪರ ಯೋಜನೆಗಳನ್ನು ಪ್ರಕಟಿಸಿದರು. ಸರ್ಕಾರಿ ಉದ್ಯೋಗಗಳಲ್ಲಿ ಪ್ರತಿಶತ ೩೦ರಷ್ಟನ್ನು ಹೆಂಗಸರಿಗೆ ಕಾದಿರಿಸುವುದು ಅವರ ಯೋಜನೆಯ ಒಂದು ಮುಖ್ಯಅಂಶ. ಉದ್ಯೋಗಗಳನ್ನು ಹೆಂಗಸರಿಗೆ ಕಾದಿರಿಸುವುದು, ಅವರು ಕೆಲಸಕ್ಕೆ ಹೋಗಿ ಸಂಬಳ ತರುವುದು, ಸ್ವಾತಂತ್ರ್ಯ ಸಮಾನತೆ ಪಡೆಯುವುದು, ಎಲ್ಲವೂ ಸರಿಯೆ. ಆದರೆ ಹಾಗೆ ಕೆಲಸಕ್ಕೆ ಹೋಗುವ - ಹೆಂಗಸರ ಮನೆಗಳಲ್ಲಿ 'ಮನೆಗೆಲಸ'ವನ್ನು ಯಾರು ಮಾಡಬೇಕು? ಅವರ ಮಕ್ಕಳ ಲಾಲನೆ-ಪಾಲನೆಯನ್ನು ನೋಡುವವರಾರು? ಗಂಡಂದಿರು ಅವರಿಗೆ ನೆರವಾಗಬೇಕೆ - ನೆರವಾಗಬಲ್ಲರೆ ಅಥವಾ ಪ್ರತಿದಿನವೂ ಹೆಂಗಸರು ಮೊದಲ ಷಿಪ್ಟನ್ನು ಹೊರಗಡೆ ಉದ್ಯೋಗದಲ್ಲಿ ಮುಗಿಸಿ, ಮನೆಗೆಲಸಕ್ಕೆ ಎರಡನೆಯ ಷಿಪ್ಟ್‌ಗೆ ರಿಪೋರ್ಟ್ ಮಾಡಿಕೊಳ್ಳಬೇಕೆ? ಹಾಗೆ ಮಾಡಿದರೆ ಅವರ ಆಯಸ್ಸು, ಆರೋಗ್ಯ, ಕೌಟುಂಬಿಕ ಸುಖದ ಗತಿ-ಕತೆ, ಏನು?

ಉತ್ತರ ತಿಳಿಯದು

ಈ ಎಲ್ಲ ಪ್ರಶ್ನೆಗಳಿಗೂ ಪವಾರ್ ಅವರಾಗಲೀ, ಅವರ ಹೊಸ ಯೋಜನೆಯಿಂದ ಲಾಭ - ಅವಕಾಶ ಪಡೆಯಲಿರುವ ಹೆಂಗಸರಾಗಲೀ ಉತ್ತರ ಹೇಳಲಾರರು. ಉತ್ತರವೂ ಗೊತ್ತಿರುವುದಿಲ್ಲ. ಭಾರತದಲ್ಲಿ ಮಾತ್ರವಲ್ಲ, ಸುಮಾರು ಆರೇಳು ದಶಕಗಳಿಂದಲೂ, ಹೆಂಗಸು ಮನೆಯ ಹೊರಗಡೆ ಗಂಡನಿಗೆ ಸರಿ ಸಮಾನವಾಗಿ ದುಡಿಯುತ್ತಿರುವ ಅಮೆರಿಕಾ-ಯುರೋಪುಗಳಲ್ಲು ಮೇಲೆ ಕೇಳಿದ ಪ್ರಶ್ನೆಗಳಿಗೆ ನಿಖರವಾದ ಉತ್ತರವಿಲ್ಲ. ಏಕೆಂದರೆ ಇದು ಸಾರ್ವಜನಿಕ ಪ್ರಶ್ನೆ ಅಲ್ಲ. ಪ್ರತಿಯೊಂದು ಗಂಡು-ಹೆಣ್ಣು ಕೂಡ ಸಂಸಾರದ ಆವರಣದೊಳಗೆ ಎದುರಿಸಬೇಕಾದ ಆತ್ಮೀಯವಾದ ಅನಿವಾರ್ಯವಾದ ಪ್ರಶ್ನೆ. ಪ್ರಶ್ನೆಯನ್ನು ಎದುರಿಸುವ ರೀತಿ ಮತ್ತು ಕಂಡುಕೊಳ್ಳುವ ಉತ್ತರ, ದಂಪತಿಗಳ ಮನೋಧರ್ಮ, ಹಿನ್ನೆಲೆ ಮತ್ತು ಕುಟುಂಬದ ಆರ್ಥಿಕ-ಸಾಮಾಜಿಕ ಪರಿಸ್ಥಿತಿ ಇವುಗಳಿಂದ ನಿರ್ಧಾರವಾಗುತ್ತದೆ.

The Second Shift ಎಂಬ ಈ ಪುಸ್ತಕದಲ್ಲಿ ಆರ್ಲಿ ಹಾಕ್ಸ್‌ಚೈಲ್ಡ್ ಮತ್ತು ಅನ್ನೆ ಮ್ಯಾಕ್‌ಚುಂಗ್ ಎಂಬ ಅಮೆರಿಕಾದ ಇಬ್ಬರು ಮಹಿಳಾ ಸಮಾಜ ಶಾಸ್ತ್ರಜ್ಞರು ಮೇಲಿನ ಪ್ರಶ್ನೆಗಳಿಗೆ ಉತ್ತರ ಹುಡುಕಲು ಪ್ರಯತ್ನಿಸಿದ್ದಾರೆ. ಬೇರೆ ಬೇರೆ ಸಾಮಾಜಿಕ ಸ್ತರಗಳಿಗೆ ಸೇರಿದ, ಗಂಡ ಹೆಂಡತಿ ಇಬ್ಬರೂ ಕೆಲಸಕ್ಕೆ ಹೋಗುವ ಅಮೆರಿಕಾದ ಹತ್ತು ಕುಟುಂಬಗಳ ಬದುಕು ಬವಣೆಯನ್ನೂ ಆಧರಿಸಿದ ಪುಸ್ತಕವಿದು. ಆದರೆ ಇದು ಸಂಶೋಧನೆಯ, ಅಂಕಿ-ಅಂಶಗಳ ಪುಸ್ತಕವಲ್ಲ ಎಂಬುದನ್ನು ಗಮನಿಸಬೇಕು. ಹತ್ತು ಕುಟುಂಬಗಳ ಜೊತೆ ಒಡನಾಡಿ, ಕಾಲ ಕಳೆದು ಪ್ರತಿಯೊಂದು ಕುಟುಂಬದ ಅಡಿಗೆ ಮನೆ, ರಂಜಾರ, ಶಯ್ಯಾ ಕೋಣೆಗಳಲ್ಲಿ ದಿನನಿತ್ಯದ ಬದುಕು-ಬಿರುಕು ಪಡೆಯುವ ನಾನಾ ಅವತಾರಗಳನ್ನು ಕಣ್ಣಾರೆ ಕಂಡು, ಕಂಡಿದ್ದನ್ನು ಪ್ರಶ್ನೆ-ಮಾತುಕತೆಗಳ ಮೂಲಕ ಸ್ಪಷ್ಟಪಡಿಸಿಕೊಂಡು ಬರೆದ ಪುಸ್ತಕವಿದು. ಪುಸ್ತಕದ ಆತ್ಮೀಯ ಧ್ವನಿಗೆ ಉದಾಹರಣೆಯಾಗಿ ಲೇಖಕರು ಕೇಳುವ ಒಂದು ಪ್ರಶ್ನೆಯನ್ನು ಸೂಚಿಸಬಹುದು. ಒಂದು ಮನೆಯ ಹೊರಗಡೆಗೆ ಯಾವಾಗಲೂ ಕೇಳಿಸುವುದು, ಗಂಡಸಿನ ಅಬ್ಬರದ ಅಟ್ಟಹಾಸದ ಧ್ವನಿಯೆ. ಇಂತಹ ಕುಟುಂಬದಲ್ಲಿ ಹೆಂಗಸಿನ ಸ್ಥಾನ ಮಾನ ಏನು, ಗಂಡಸು ನಿಜಕ್ಕೂ ಒಡನಾಡಿಯೆ, ಇಲ್ಲ ಹದಿನೆಂಟನೆ ಶತಮಾನದ ಆಟಾಟೋಪ ಶೈಲಿಯ ಯಜಮಾನನೆ ಎಂಬ ಪ್ರಶ್ನೆಯನ್ನು ಲೇಖಕರು ಹಾಕಿಕೊಳ್ಳುತ್ತಾರೆ. ಈ ಪುಸ್ತಕ ಎತ್ತುವ ಎಲ್ಲ ಪ್ರಶ್ನೆಗಳ ಹಿಂದೆಯು, ಇಂತಹ ಸೂಕ್ಷ್ಮ ವಿವರಗಳಿವೆ, ಒಳನೋಟಗಳಿವೆ.

ಗಂಡನೇ ಆಗಲಿ, ಹೆಂಡತಿಯೇ ಆಗಲಿ ಮೇಲೆ ಸೂಚಿಸಿರುವ ಪ್ರಶ್ನೆಗಳಿಗೆ ಪರಿಪೂರ್ಣವಾದ, ಪ್ರಾಮಾಣಿಕವಾದ ಉತ್ತರವನ್ನು ಈವತ್ತು ಕಂಡುಕೊಳ್ಳುವುದು ಬಹಳ ಕಷ್ಟವಾದ ಸಂಗತಿ ಎಂಬುದನ್ನು

ಲೇಖಕರು ಮೊದಲಿಗೇ ಒಪ್ಪಿಕೊಳ್ಳುತ್ತಾರೆ. ಏಕೆಂದರೆ, ಇಬ್ಬರೂ ಕೂಡ ಸಂಕ್ರಮಣಕಾಲದ ಸಮಾಜದ ಒತ್ತಡಗಳಿಗೆ ಸಿಕ್ಕಿಹಾಕಿಕೊಂಡು ಕಂಗಾಲಾಗಿರುವವರು. ಅವರಿಬ್ಬರೂ ಬೆಳೆದ ಬಾಲ್ಯದಲ್ಲಿನ 'ಗಂಡಸು' 'ಹೆಂಗಸು' ಕಲ್ಪನೆಯೇ ಬೇರೆ. ಈಗ ಅವರು ಪರಸ್ಪರ ಎದುರಿಸಬೇಕಾಗಿರುವ 'ಗಂಡಸು' 'ಹೆಂಗಸು' ಎಂಬ ವಾಸ್ತವ ವ್ಯಕ್ತಿಗಳೇ ಬೇರೆ. ಗಂಡಸು ಮನಸ್ಸು ಮಾಡಿದರೆ ಸಮಸ್ಯೆಯನ್ನು ಎದುರಿಸದೆ ಕೈತೊಳೆದುಕೊಳ್ಳಬಹುದು. ಎಲ್ಲವನ್ನು ಹೆಂಗಸಿನ ಮೇಲೆಯೆ ಹೇರಿಬಿಡಬಹುದು. ಕಾರಣವಾದರೂ ಇಷ್ಟೆ. ಬದಲಾಗುತ್ತಿರುವ ಇಂದಿನ ಸಮಾಜದಲ್ಲಿ ಕೂಡ ಗಂಡಸಿನದೇ ಮೇಲುಗೈ ಇದೆ. ಇನ್ನೂ ಅನೇಕ ನಿರ್ಣಾಯಕ ಸಂಗತಿಗಳಲ್ಲಿ. ಆದರೆ ಹೆಂಗಸು ಮಾತ್ರ ಸನ್ನಿವೇಶದ ಒತ್ತಾಯದಿಂದಲೋ ಅಥವಾ ಸ್ವಂತದ ಆಯ್ಕೆಯಿಂದಲೋ ಅಥವಾ ಸ್ವಂತದ ಆಯ್ಕೆಯಿಂದಲೋ ಸಮಸ್ಯೆಯನ್ನೂ ಪ್ರಶ್ನೆಯನ್ನು ಎದುರಿಸಲೇಬೇಕಾಗಿದೆ. ಆದರೆ ಅವರು ಕೂಡ ಪೂರ್ತಿಯಾಗಿ ಮಾನಸಿಕ ಸಿದ್ಧತೆ ಪಡೆದವರಲ್ಲ. ಹೀಗಾಗಿ ಅವರ ಮನಸ್ಸಿನಲ್ಲಿ ದೇಹದಲ್ಲಿ ನಾನಾ ರೀತಿಯ ಪ್ರತಿಕ್ರಿಯೆಗಳು-ವಿಕಾರಗಳು ಏಳಬಹುದು. ದಾಂಪತ್ಯ ಸಂಬಂಧಕ್ಕೆ ಪೆಟ್ಟು ಬೀಳಬಹುದು. ಅಪರೂಪಕ್ಕೆಂಬಂತೆ ಒಂದೋ ಎರಡೋ ಕುಟುಂಬಗಳಲ್ಲಿ ಪರಸ್ಪರ ಚರ್ಚೆ ಒತ್ತಾಸೆಗಳಿಂದ ಸಮಸ್ಯೆಯನ್ನು ಹೃತ್ಪೂರ್ವಕವಾಗಿ ಎದುರಿಸಬಹುದು.

ಹೆಂಗಸಿನ ಕಷ್ಟಗಳು, ಅವುಗಳನ್ನು ಆಕೆ ಎದುರಿಸುವ ತಂತ್ರಗಳು ಬಹು ಸಂಕೀರ್ಣವಾದವು. ಲಾಗಾಯ್ತಿನಿಂದ ಬಂದ, 'ತಾಯಿ' 'ಗೃಹಿಣಿ' ಮತ್ತು 'ಪ್ರೇಯಸಿ' ಈ ಎಲ್ಲ ಪಾತ್ರವನ್ನು ಸಂಪೂರ್ಣವಾಗಿ ಬಿಡಲು ಅವಳಿಗೆ ಇಷ್ಟವಿಲ್ಲ. ಆದರೆ ಮನೆಯ ಹೊರಗಡೆಯ ಉದ್ಯೋಗ ತಂದುಕೊಡುವ ಹಣ, ಸ್ವಾತಂತ್ರ್ಯ, ಆತ್ಮವಿಶ್ವಾಸ, ವ್ಯಕ್ತಿತ್ವವಿಕಾಸ ಇದು ಕೂಡ ಅವಳಿಗೆ ಪ್ರಿಯವಾದ್ದು. ಈ ಎಲ್ಲ ಪಾತ್ರಗಳನ್ನೂ ಯಶಸ್ವಿಯಾಗಿ ನಿರ್ವಹಿಸಿ, ತನ್ನೆಲ್ಲ ಬಯಕೆಗಳನ್ನು ಪೂರೈಸಿಕೊಂಡು 'ಸೂಪರ್ ಮಮ್ಮಿ'ಯಾಗಿ ಕಾಣುವ ಬಯಕೆಯ ಹೆಂಗಸರೂ ಇದ್ದಾರೆ. ಈ ಬಯಕೆ ಎಷ್ಟೇ ಅಪ್ಯಾಯಮಾನವಾದದ್ದಾದರೂ ಕಷ್ಟಸಾಧ್ಯವಾದದ್ದು. ಮನೆಯ ಒಳಗಡೆ ಹೊರಗಡೆ, ಎರಡೂ ಕಡೆ ದುಡಿಯುವ ಹೆಂಗಸು ವರ್ಷಕ್ಕೆ ಹದಿಮೂರು ತಿಂಗಳು ಕೆಲಸ ಮಾಡುತ್ತಾಳೆ. ಅಂದರೆ ಅಷ್ಟರ ಮಟ್ಟಿಗೆ ಅವಳ ದೇಹ, ಗಂಡಸಿನ ದೇಹಕ್ಕಿಂತಲೂ ಹೆಚ್ಚು ಬೇಗ ಸವೆಯುತ್ತದೆ, ಆಯಸ್ಸು ಕ್ಷೀಣಿಸುತ್ತದೆ.

ಸೂಪರ್ ಮಮ್ಮಿ, ಸೂಪರ್ ವುಮನ್ ಆಗುವ ಬಯಕೆಯ ಪೂರೈಕೆ ಕಷ್ಟಸಾಧ್ಯವಾದರೆ, ಹೆಂಗಸು ಮತ್ತೆ ಯಾವ ಯಾವ ತಂತ್ರ ಹೂಡಬಹುದು? ಉದ್ಯೋಗ, ಮಕ್ಕಳ ಲಾಲನೆ ಪಾಲನೆ, ಮನೆ ಕೆಲಸ ಎಲ್ಲದರ ಗುಣಮಟ್ಟದಲ್ಲೂ, ರಾಜಿ ಮಾಡಿಕೊಂಡು, ಆದರೆ ಎಲ್ಲವನ್ನು ಹೇಗೆ ಹೇಗೋ ಮಾಡುತ್ತ 'ನೋಡಿ, ನಾನು ಎಲ್ಲವನ್ನೂ ಮಾಡಿದ್ದೇನೆ' ಎಂದು ಹೇಳಿ ಆತ್ಮವಂಚನೆ ಮಾಡಿಕೊಳ್ಳಬಹುದು. ಇನ್ನು ಕೆಲವು ಸಂದರ್ಭಗಳಲ್ಲಿ, ಮನೆಗೆಲಸ, ಮಕ್ಕಳ ಲಾಲನೆ-ಪಾಲನೆಯ ಜವಾಬ್ದಾರಿಯನ್ನು ಕೊಂಚವಾದರೂ ಒಪ್ಪಿಕೊಳ್ಳಲು ನಿರಾಕರಿಸುವ ಗಂಡನ ಮೇಲಿನ ಸೇಡಿಗಾಗಿ ಆತನಿಗೆ ಲೈಂಗಿಕ ಸುಖ-ಸಂಭ್ರಮಗಳನ್ನು ನಿರಾಕರಿಸಬಹುದು. ಅಥವಾ ಮಕ್ಕಳಿಗೆ ಅತಿಯಾಗಿ ಗಮನಕೊಟ್ಟು, ಗಂಡನೊಡನೆ ಭಾವನಾತ್ಮಕ ಸಂಬಂಧವನ್ನು ಕಡಿಮೆ ಮಾಡಿಕೊಳ್ಳಬಹುದು. ಮನೆ ಕೆಲಸಕ್ಕೆ, ಆಯಾ ಕೆಲಸಕ್ಕೆ ಕೂಲಿಯ ಮೇಲೆ ದಕ್ಷ ಹೆಂಗಸನ್ನೋ, ಅಸಹಾಯಕ ವಿಧವೆಯನ್ನೋ ಇಟ್ಟುಕೊಳ್ಳಬಹುದು. ಇದೂ ಪರಿಹಾರವಲ್ಲ. ಏಕೆಂದರೆ, ಒಬ್ಬ ಹೆಂಗಸು ತನ್ನ ವ್ಯಕ್ತಿತ್ವವನ್ನು ಉಳಿಸಿ ಬೆಳೆಸಿಕೊಳ್ಳಲು ಇನ್ನೊಬ್ಬ ಹೆಂಗಸಿನ 'ವ್ಯಕ್ತಿತ್ವ'ವನ್ನು ನಾಶಮಾಡುವ ಕ್ರಮ ಅದು. ಈ ಎಲ್ಲ ತಂತ್ರಗಳನ್ನು ಉಪಾಯಗಳನ್ನು ಯಾವ ಹೆಂಗಸು ಯೋಚಿಸಿ ಹೂಡುವುದಿಲ್ಲ. ಸನ್ನಿವೇಶದ ಅಸಹಾಯಕತೆ, ಒತ್ತಡಗಳಿಂದ ಮಾಡುತ್ತಾಳೆ.

ಗಂಡಸು ಸಮಸ್ಯೆಯನ್ನು ಎದುರಿಸಲು ಹೂಡುವ ಉಪಾಯಗಳೇ ಬೇರೆ. ಹೆಂಡತಿಯ ದಕ್ಷತೆ, ಸೌಂದರ್ಯ, ಸೂಪರ್ ಮಮ್ಮಿಯ ಪಾತ್ರ ಇದೆಲ್ಲವನ್ನೂ ಬಾಯಿ ತುಂಬಾ ಹೊಗಳುತ್ತಾ, ತಾನು ಮಾತ್ರ ಸಾಂಪ್ರದಾಯಿಕ ಶೈಲಿಯ ಮನೆ ಯಜಮಾನನಾಗಿಯೇ ಉಳಿದುಬಿಡಬಹುದು. ನಾನು ಮನೆಗೆಲಸ ಮಾಡಲಾರೆ. ಮಕ್ಕಳ ಲಾಲನೆ-ಪಾಲನೆಯು ನನ್ನಿಂದಾಗದು. ಇದೆಲ್ಲವನ್ನೂ ನೀನೆ ನೋಡಿಕೋ, ಹೊರಗಡೆ ಕೆಲಸಕ್ಕೆ ಹೋಗಲು ನನ್ನ ಅಡ್ಡಿಯೇನೂ ಇಲ್ಲ. ಅದಕ್ಕಾಗಿ ನೀನು ಊಟ ತಿಂಡಿಯ ರುಚಿ, ಮನೆಯ ಅಚ್ಚುಕಟ್ಟು -ಇವುಗಳಲ್ಲಿ ಸ್ವಲ್ಪ ಕಡಿಮೆ ಮಾಡಿದರೂ ಪರವಾಗಿಲ್ಲ ಎಂದು ಹೇಳಿ ತನ್ನ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಬಹುದು. ನಿನ್ನ ಕಷ್ಟಗಳ ಒತ್ತಡಗಳ ಬಗ್ಗೆ ನನಗೆ ಸಹಾನುಭೂತಿಯಿದೆ. ಆದರೆ ನನ್ನ ಸ್ವಭಾವವನ್ನು ಈಗೆಲ್ಲಿ ನಾನು ಬದಲಾಯಿಸಿಕೊಳ್ಳಲಿ ಎಂದು ಪ್ರಾಮಾಣಿಕವಾದ, ಆದರೆ ಉಪಯೋಗಕ್ಕೆ ಬಾರದ ಮಾತುಗಳನ್ನು ಆಡಬಹುದು. ಅಥವಾ ತೀರಾ ಸಣ್ಣಪ್ರಮಾಣದಲ್ಲಿ ನೆರವಾಗಿ, ಅದನ್ನೇ ದೊಡ್ಡದು ಮಾಡಿ ಹೇಳಿ ಹೆಂಡತಿಯಲ್ಲಿ ಅಪರಾಧೀ ಮನೋಭಾವವನ್ನು ಹುಟ್ಟು ಹಾಕಬಹುದು.

ಎಲ್ಲ ಕುಟುಂಬಗಳೂ, ಉಪಾಯ ತಂತ್ರಗಳಿಂದಲೇ ಈ ಸಮಸ್ಯೆಯನ್ನು ಎದುರಿಸುತ್ತಾರೆಂದಲ್ಲ. ಕೆಲವರು ಪ್ರಾಮಾಣಿಕವಾಗಿಯೆ ಬದಲಾಗುತ್ತಾರೆ. ಅಥವಾ ಕ್ರಮೇಣವಾಗಿ ಬದಲಾಗಲು ಆಸೆ ಪಡುತ್ತಾರೆ. ಪ್ರಯತ್ನ ಪಡುತ್ತಾರೆ. ಇಂತಹ ಅಪರೂಪದ ಕೆಲವು

ಕುಟುಂಬಗಳಲ್ಲಿ ಗಂಡಸು, ಮನೆ ಕೆಲಸಗಳಲ್ಲಿ, ಮಕ್ಕಳ ಲಾಲನೆ-ಪಾಲನೆಯಲ್ಲಿ ಸಕ್ರಿಯವಾಗಿರುವುದು ಕಂಡು ಬಂದಿದೆ. ಇಂತಹ ಮನೆಗಳಲ್ಲಿ ಮಕ್ಕಳ ಬೆಳವಣಿಗೆ, ಪರಸ್ಪರ ಪ್ರೀತಿ, ಒತ್ತಾಸೆ, ಲೈಂಗಿಕ ಪ್ರೀತಿ, ಸಂಭ್ರಮಗಳು ಹೆಚ್ಚಿರುತ್ತವೆ, ಅರ್ಥಪೂರ್ಣ ವಾಗಿರುತ್ತವೆ. ಇದು ಆದರ್ಶದ ಪರಿಸ್ಥಿತಿಯಾದರೂ, ಕುಟುಂಬಗಳು ಈ ಹಂತಕ್ಕೆ ತಲುಪಲು ಗಂಡಸಿನ ಮನೋಧರ್ಮದಲ್ಲಿ ಬಹಳ-ಬಹಳ ಬದಲಾವಣೆ ಆಗಬೇಕಾಗುತ್ತದೆ. ಆದರೆ ಈ ಬದಲಾವಣೆಗೆ ಬೇಕಾದ ಪ್ರೇರಣೆ, ಒತ್ತಾಸೆಗಳೆಲ್ಲ ಹೆಂಗಸಿನಿಂದಲೇ ಬರಬೇಕಾಗುತ್ತದೆ. ಒಬ್ಬರು ಸಮಸ್ಯೆಯನ್ನು ಪ್ರಾಮಾಣಿಕವಾಗಿ ಎದುರಿಸಿ, ಇನ್ನೊಬ್ಬರು ಉಪಾಯದ ಸ್ತರದಲ್ಲಿ ಎದುರಿಸುತ್ತಿದ್ದರೆ ಏನೂ ಪ್ರಯೋಜನ ವಾಗಲಾರದು. ಸಮಸ್ಯೆಯನ್ನು ಎದುರಿಸಲಾರದೆ ದಾಂಪತ್ಯವನ್ನೇ ಮುರಿದುಕೊಳ್ಳುವುದು ಒಂದು ಅತಿಯಾದರೆ, ಗಂಡಸು-ಹೆಂಗಸು, ಇಬ್ಬರೂ ತಮ್ಮ ತಮ್ಮ ಸಾಮಾಜಿಕ-ವೈಯಕ್ತಿಕ ಪಾತ್ರಗಳನ್ನು ಕರ್ತವ್ಯಗಳನ್ನು ಇಡಿಯಾಗಿ ಬದಲಾಯಿಸಿಕೊಳ್ಳಬೇಕು ಎಂಬುದು ಇನ್ನೊಂದು ಅತಿ. ಈ ಎರಡೂ ರೀತಿಯ ಅತಿ ನಿಲುವುಗಳಿಂದಲೂ ಏನೂ ಪ್ರಯೋಜನ ವಾಗುವುದಿಲ್ಲ.

ಲಾಲನೆ-ಪಾಲನೆ

ಮನೆಗೆಲಸ, ಮಕ್ಕಳ ಲಾಲನೆ-ಪಾಲನೆ ಹಿಂದಿನ ಸಮಾಜದಲ್ಲಿ ಹೊರಗಡೆ ಏನೂ ಕೆಲಸವಿಲ್ಲದ, ಆ ಕಾರಣದಿಂದ ನಿಷ್ಪ್ರಯೋಜಕ ವಾದ ಹೆಂಗಸರ ಮೇಲೆ ಇತ್ತು. ಏನೂ ಕೆಲಸವಿಲ್ಲದ, ನಿಷ್ಪ್ರಯೋಜಕರಾದ ಜನರು ಮಾಡುವ ಕೆಲಸಗಳಿಗೆ ಯಾವ ರೀತಿಯ ಮೌಲ್ಯವಿರುತ್ತದೆ. ಈಗಲೂ ಈ ಕೆಲಸಗಳಿಗೆ ಯಾವುದೇ ಮೌಲ್ಯವಿಲ್ಲ. ಏಕೆಂದರೆ ಗಂಡಸು, ಹೆಂಗಸು ಇಬ್ಬರೂ ಹೊರಗಡೆ ದುಡಿಯುವಾಗ, ಈ ಕೆಲಸಗಳನ್ನೆಲ್ಲ ಭಾವನೆಯಿಲ್ಲದ ಯಂತ್ರಗಳು, ಉಪಕರಣಗಳು ಮಾಡುತ್ತವೆ. ದಿನಗೂಲಿ, ಗಂಟೆಕೂಲಿ ಪಡೆದ ಆಳುಗಳು ಮಕ್ಕಳನ್ನು ಸಾಕುತ್ತಾರೆ. ಇದಕ್ಕೆಲ್ಲ ಯಾವ ಮೌಲ್ಯವಿರುತ್ತದೆ. ಇದ್ದರೂ ಅತ್ಯಂತ ಕನಿಷ್ಠ ಮೌಲ್ಯವಿದ್ದೀತು.

ನಿಜ ಹೇಳಬೇಕೆಂದರೆ, ಸಂಸಾರದ ನೆಮ್ಮದಿ, ಪ್ರಗತಿ ಎಲ್ಲವೂ ಸರಿಯಾದ ದಿಕ್ಕಿನಲ್ಲಿರಬೇಕಾದರೆ ಮನೆ ಒಳಗಿನ ಕೆಲಸಗಳಿಗೆ, ವಿವರಗಳಿಗೆ ಅಚ್ಚುಕಟ್ಟುತನ, ಆತ್ಮೀಯ ಸ್ಪರ್ಶ ಬೇಕಾಗುತ್ತದೆ. ಇಬ್ಬರೂ ದುಡಿಯುವ ಕುಟುಂಬಗಳಲ್ಲಿ ದಿನನಿತ್ಯದ, ಯಾಂತ್ರಿಕ ಕೆಲಸಗಳಿಗೆ ಜೀವಂತಿಕೆ ಬರಬೇಕಾದರೆ ಪ್ರತಿಯೊಂದು ಕುಟುಂಬದ ಆವರಣ ದೊಳಗೂ ಒಂದು ಸಣ್ಣ ಕ್ರಾಂತಿ ನಡೆದು ಗಂಡು-ಹೆಣ್ಣಿನ ಮನೋಧರ್ಮದಲ್ಲಿ ಖಚಿತವಾದ ಬದಲಾವಣೆಗಳು ಆಗಲೇ ಬೇಕಾಗುತ್ತದೆ. ಗಂಡು-ಹೆಣ್ಣು ಇಬ್ಬರೂ ಈ ದಿಕ್ಕಿನಲ್ಲಿ ಹೊರಟಿದ್ದಾರೆ. ಕೆಲವರು ಸ್ವಂತ ಇಚ್ಛೆಯಿಂದ, ಬಹುಪಾಲು ಜನ ಸನ್ನಿವೇಶದ ಒತ್ತಾಯದಿಂದ. ಈ ಬದಲಾವಣೆಯನ್ನು ಗುರುತಿಸಿ ಇಂತಹ ಬದಲಾವಣೆಗೆ ಇನ್ನೂ ಒಂದಿಷ್ಟು ಹಂಬಲಿಸುವ ಈ ಪುಸ್ತಕವನ್ನು ಸಕಾರಣವಾಗಿಯೆ ಸಿಮನ್ ದ ಬುವಾಳ Second Sex ಮತ್ತು ಬೆಟ್ಟಿ ಫ್ರೈಡ್‌ನ್‌ಳ Feminine Mystique ಕೃತಿಗಳೊಡನೆ ಸಮೀಕರಿಸಲಾಗಿದೆ.

ದೂರದ ಅಮೆರಿಕಾವನ್ನು ಕುರಿತದ್ದು ಈ ಪುಸ್ತಕ ಎಂದು ಹೀಗಳೆಯುವ ಅವಶ್ಯಕತೆಯಿಲ್ಲ. ನಗರ ಪ್ರದೇಶಗಳಲ್ಲಿ ಮಧ್ಯಮ ವರ್ಗದ ಕುಟುಂಬಗಳಲ್ಲಿ ಗಂಡ-ಹೆಂಡತಿ ಇಬ್ಬರೂ ದುಡಿಯುವುದು ಈಗ ಸಾಮಾನ್ಯ ಸನ್ನಿವೇಶವಾಗಿದೆ. ಕೆಲಸದಲ್ಲಿರುವ ಹೆಂಗಸರನ್ನೇ ಮದುವೆಯಾಗಲು ನಮ್ಮ ದೇಶದ ಕೆಳಮಧ್ಯಮ ವರ್ಗದ ಯುವಕರು (ಆರ್ಥಿಕ ಕಾರಣಗಳಿಗಾಗಿ) ಆಸೆ ಪಡುತ್ತಾರೆ. ಕೃಷಿ ಕಾರ್ಮಿಕರ ಕುಟುಂಬಗಳ ಸ್ಥಿತಿಯನ್ನು ಅಧ್ಯಯನ ಮಾಡಲು ಕೂಡ ಈ ಪುಸ್ತಕದ ಅನೇಕ ಒಳನೋಟಗಳನ್ನು ಉಪಯೋಗಿಸಿಕೊಳ್ಳ ಬಹುದಾಗಿದೆ. ಹೀಗಾಗಿ ದೂರದ ಅಮೆರಿಕಾದ ಈ ಪುಸ್ತಕ ನಮ್ಮ ನಮ್ಮ ಮನೆ, ಸಂಸಾರ, ವಾತಾವರಣವನ್ನು ಬೇರೊಂದು ದೃಷ್ಟಿಯಿಂದ ನೋಡುವುದನ್ನು ಕಲಿಸಿಕೊಡುವಷ್ಟು ಆತ್ಮೀಯವಾಗಿದೆ.

(ಕೃಪೆ : ಕನ್ನಡ ಪ್ರಭ)

ಭಾರತದ ಹೆಣ್ಣುಮಕ್ಕಳು ಇಂದು ಕೌಟುಂಬಿಕ ಪಾತ್ರನಿರ್ವಹಣೆಯ ನೆಲೆಯಿಂದ ಹೊರಬಂದು ತಮ್ಮ ವೈಯಕ್ತಿಕ ಬೌದ್ಧಿಕ ಮತ್ತು ಭಾವನಾತ್ಮಕ ಪರಿಪೂರ್ಣತೆಗೆ ತಾವೇ ಹೊಣೆಗಾರರೆಂದು ಜವಾಬ್ದಾರಿ ಹೊರುವತ್ತ ಬೆಳೆದಿದ್ದಾರೆ. ಮಹಿಳೆಯರ ಇಂಥ ಬೆಳವಣಿಗೆಯನ್ನು ಗ್ರಹಿಸಲು ಆಧುನಿಕ ಭಾರತೀಯ ಮನಸ್ಸುಗಳು ಎಷ್ಟರ ಮಟ್ಟಿಗೆ ಸಿದ್ಧವಾಗಿವೆ? ಜಾನಪದ, ಪುರಾಣ, ಜನಪದ ಆಚರಣೆಗಳೊಳಗೆ ಎಷ್ಟೇ ಸ್ತ್ರೀ ಸಾಮರ್ಥ್ಯದ ಅಂಶಗಳಿದ್ದರೂ ಅವೇನಿದ್ದರೂ ಒಂದು ಆತ್ಮವಿಶ್ವಾಸ ಗಳಿಸಿಕೊಳ್ಳಲು ಪೂರಕವಾಗಬಲ್ಲವೇ ಹೊರತು ಇವತ್ತಿನ ವಾಸ್ತವ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು, ಎದುರಿಸಲು ಅವು ಮಾದರಿಯಾಗಲಾರವು. ಹಿಂದಿನ ಎಲ್ಲ ಪ್ರತೀಕ, ರೂಪಕಗಳ ಚೌಕಟ್ಟನ್ನು ಮುರಿದು ಹೊರಬರುತ್ತಿರುವ, ರಕ್ತಮಾಂಸ ತುಂಬಿದ ಜೀವಂತ ಮಹಿಳೆಯರನ್ನು, ಯಾವುದೇ ಸಿದ್ಧ ಮಾದರಿಗಳ ಪಡಿಯಚ್ಚಾಗಲು ಒಲ್ಲದವರನ್ನು ಸೂಚಿಸಬಲ್ಲಂಥ ಮಾದರಿ, ನಿದರ್ಶನಗಳನ್ನು ನಾವು ಇನ್ನೂ ಕಾಣಬೇಕಾಗಿದೆ. ಯಾವುದಾದರೊಂದು ತಾತ್ವಿಕ ಪ್ರಜ್ಞೆಗೆ ಬದ್ಧರಾಗಿರದ, ಪ್ರತಿಭಟನೆ ಕಾರ್ಯಕರ್ತೆಯರಾಗಿರದ, ಕೇವಲ ಒಳಗಿನ ವೈಯಕ್ತಿಕ ತುರ್ತಿನಿಂದ ಬದುಕಬಲ್ಲ ವ್ಯಕ್ತಿಯಾದ, ನೆನಪಿನಲ್ಲಿ ಉಳಿಯಬಲ್ಲ ದೃಢವೂ ಉನ್ನತವೂ ಆದ ಸ್ತ್ರೀ ಆಕೃತಿಗಳನ್ನು ಭಾರತೀಯ ಸಮಾಜ ಸೃಷ್ಟಿಸಬಲ್ಲುದೆ ಎನ್ನುವುದೆ ಪ್ರಶ್ನೆ.

-ಮೈತ್ರೇಯಿ

ಸ್ತ್ರೀವಾದಿ ಚಿಂತನೆಯ ಅನ್ವಯಿಕ ಯತ್ನ

ದ್ರೌಪದಿ (ಕಾದಂಬರಿ)
ಲೇ: ಡಾ. ಎಸ್.ವಿ. ಪ್ರಭಾವತಿ
ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು, ೧೯೯೬.
ಪುಟ :೧೩೮ ಬೆಲೆ : ರೂ. ೩೫/-

ಕೃಷ್ಣ ಮತ್ತು ದ್ರೌಪದಿ ಪಾತ್ರಗಳು ಮಹಾಭಾರತದ ಅತ್ಯಂತ ಪ್ರಭಾವೀ ಪಾತ್ರಗಳು. ತನ್ನ ಕರ್ತೃತ್ವ ಶಕ್ತಿಯಿಂದ, ಜಾಣ್ಮೆಯಿಂದ, ಸಂಘಟನಾ ಶಕ್ತಿಯಿಂದ ಕೃಷ್ಣ ಅಂದಿಗೂ ಇಂದಿಗೂ ಎಂದೆಂದಿಗೂ ಮಹಾತ್ಮನಾಗಿಯೇ ಕಂಗೊಳಿಸುವಂತೆ, ತನ್ನ ಧೀಮಂತಿಕೆಯಿಂದ ಕಷ್ಟಗಳನ್ನೆದುರಿಸುವ ಧೈರ್ಯವಂತಿಕೆಯಿಂದ ದ್ರೌಪದಿ ಪ್ರಬಲ ಸ್ತ್ರೀಶಕ್ತಿಯಾಗಿ ಕಂಗೊಳಿಸುತ್ತಾಳೆ. ಆದ್ದರಿಂದಲೇ ಈ ವ್ಯಕ್ತಿಗಳು, ವ್ಯಾಸರಿಂದ ಪ್ರಾರಂಭಿಸಿ ಕುಮಾರವ್ಯಾಸರು ಮೊದಲಾದ ಕವಿಗಳಿಂದ ಮುಂದುವರೆದು ಎಸ್.ಎಲ್. ಭೈರಪ್ಪನವರಿಗೂ ಮತ್ತು ಇನ್ನೂ ಮುಂತಾದ ಕವಿಗಳಿಗೂ ತಮ್ಮೊಳಗಿನ ಪ್ರತಿಭೆಗೆ ಸವಾಲನ್ನೆಸೆಯುತ್ತಾರೆ. ಮತ್ತೆ ಮತ್ತೆ ಹೊಸ ಆಯಾಮಗಳಲ್ಲಿ ಮರುಹುಟ್ಟನ್ನು ಪಡೆದುಕೊಳ್ಳುತ್ತಾರೆ.

ಇಂಥದೇ ಒಂದು ಪ್ರಯತ್ನ ಡಾ. ಎಸ್.ವಿ. ಪ್ರಭಾವತಿಯವರ 'ದ್ರೌಪದಿ' ಕಾದಂಬರಿಯಲ್ಲಿದೆ. ಕಾದಂಬರಿಯ ಹೆಸರೇ ಹೇಳುವಂತೆ ಇದು ದ್ರೌಪದಿಯ ಕತೆ. ದ್ರೌಪದಿಯ ಒಳತೋಟಗಳನ್ನು ಅವಳ ಬವಣೆಯನ್ನು ಅವಳ ಬಾಯಿಂದಲೇ ಹೇಳಿಸುವ ತಂತ್ರವನ್ನೊಳಗೊಂಡಿದೆ. ಮುನ್ನುಡಿಯಲ್ಲಿ ಲೇಖಕಿಯವರು ಸ್ತ್ರೀವಾದಿ ಅಧ್ಯಯನದ ಹಿನ್ನೆಲೆಯಲ್ಲಿ ಸ್ತ್ರೀವಾದೀ ದೃಷ್ಟಿಕೋನದಿಂದ 'ದ್ರೌಪದಿ' ಕಾದಂಬರಿಯನ್ನು ಬರೆದೆನೆಂದು ಹೇಳುತ್ತಾರೆ. ಇಡೀ ಮಹಾಭಾರತದ ಕತೆಯನ್ನು ಯಾವ ಒಂದು ಸಣ್ಣ ಪ್ರಸಂಗವನ್ನು ಬಿಡದೆ ದ್ರೌಪದಿಯ ಬಾಯಲ್ಲಿ ಹೇಳಿಸಿರುವುದು ಈ ಕಾದಂಬರಿಯ ವಿಶೇಷವೆನ್ನಬಹುದಾದರೂ, ಕೇವಲ ಕೆಲ ಅನಿಸಿಕೆಗಳು ಅದೂ ಮೇಲುಸ್ತರದ್ದೆನಿಸಬಹುದಾದದ್ದು ಮತ್ತು ಇದುವರೆವಿಗೂ ಅನೇಕ ಬಾರಿ ಚರ್ಚಿತವಾಗಿರುವಂತದ್ದು, ಒಂದು ವಾದದ ದೃಷ್ಟಿಕೋನವಾಗಬಹುದೆ ಎನ್ನುವ ಪ್ರಶ್ನೆ ಏಳುತ್ತದೆ.

ದ್ರೌಪದಿಯನ್ನು ಮಹತ್ ಸ್ತ್ರೀಶಕ್ತಿಯಾಗಿ ಪರಿಗಣಿಸುವುದು ಅವಳ ಬದುಕಿನಲ್ಲಿ ನಡೆದುಹೋದ ಮೂರು ಮುಖ್ಯ ಪ್ರಸಂಗಗಳಿಂದಾಗಿ, ಒಂದು ಇಂದಿನ ಸಮಾಜ ಶಾಸ್ತ್ರಜ್ಞರ ಅಭಿಪ್ರಾಯದಂತೆ ಮತ್ತು 'ಪರ್ವ'ದ ತಯಾರಿಯ ಬಗ್ಗೆ ಬರೆದ ಪುಸ್ತಕ ಎಸ್.ಎಲ್. ಭೈರಪ್ಪನವರ 'ನಾನು ಪರ್ವ ಬರೆದದ್ದು'ನಲ್ಲಿನ ವಿವರಣೆಯಂತೆ ಅಂದಿನ ಕಾಲದ ಜನಪದದಲ್ಲಿ ರೂಢಿಯಲ್ಲಿದ್ದು ರಾಜವಂಶರಲ್ಲಿ ರೂಢಿಯಲ್ಲಿಲ್ಲದಿದ್ದ ಬಹುಪತಿತ್ವವನ್ನು ದ್ರೌಪದಿ ಸ್ವೀಕರಿಸಬೇಕಾಗಿ ಬಂದಂಥ ಸಂದರ್ಭ. ಎರಡನೆಯದು ವಸ್ತ್ರಾಪಹರಣ (ಮೂಲದಲ್ಲಿ ಸೂಚಿತವಾಗಿ ನಂತರ ಪ್ರಕ್ಷಿಪ್ತಭಾಗಗಳಲ್ಲಿ ಸ್ವಲ್ಪ ವಿವರವೆನಿಸಿ ಕುಮಾರವ್ಯಾಸ ಮುಂತಾದವರಲ್ಲಿ ವೈಭವೀಕೃತಗೊಂಡ ಪ್ರಸಂಗದಲ್ಲಿ ದ್ರೌಪದಿ ಎತ್ತುವ ಧರ್ಮದ ಪ್ರಶ್ನೆ.) ಮೂರನೆಯದಾಗಿ ಉಪಪಾಂಡವರು ಸತ್ತಾಗ ದ್ರೌಪದಿಗಾದ ಆಘಾತ.

ಪ್ರಭಾವತಿಯವರ 'ದ್ರೌಪದಿ'ಯಲ್ಲಿಯೂ ಈ ಮೂರು ಪ್ರಸಂಗಗಳೇ ಮುಖ್ಯವಾಗಿ ಚರ್ಚಿತವಾಗಿದೆಯಾದರೂ ಈ ಎಲ್ಲ ಪ್ರಸಂಗಗಳಲ್ಲೂ ಲೇಖಕಿಯವರು ಸ್ಥಾಪಿತ ಮೌಲ್ಯಗಳನ್ನೇ ಮುಖ್ಯವಾಗಿ ತಂದು ಬಿಡುತ್ತಾರಾದ್ದರಿಂದ ದ್ರೌಪದಿಯ ಒಳಗುದಿಗಳಿಗೆ ಯಾವ ಹೊಸ ಆಯಾಮವೂ ದಕ್ಕುವುದಿಲ್ಲ. ಉದಾ: ಅರ್ಜುನ ದ್ರೌಪದಿಯನ್ನು ಗೆದ್ದು ಅವಳೊಂದಿಗೆ ಮನೆಗೆ ಬಂದಾಗ ಹಣ್ಣು ತಂದಿದ್ದೇವೆ ಎಂದು ಹೇಳಿ ಕುಂತಿಯಿಂದ ಐವರೂ ಸಮನಾಗಿ ಹಂಚಿಕೊಳ್ಳಿ' ಎನ್ನುವ ಅಭಿದಾನವನ್ನು ಪಡೆದು ಅದರಂತೆ ನಡೆಯುವುದು. ವಸ್ತ್ರಾಪಹರಣದ ಸಮಯದಲ್ಲಿ ಕೃಷ್ಣ ಶಕ್ತಿಯ ಸಹಾಯದಿಂದ ಸೀರೆ ಅಕ್ಷಯವಾಯಿತೆನ್ನುವ ಭಾವ. (ಲೇಖಕಿ ಇಲ್ಲಿ ಒಂದು ನಾಟಕದ ತಂತ್ರವನ್ನು ತರುತ್ತಾರೆ. ದ್ರೌಪದಿ ಸೀರೆ ಹಿಡಿದು ಬಿಟ್ಟಂತೆ ಮಾಡುವುದು ದುಶ್ಯಾಸನನಿಗೆ ಎಳೆದಂತೆ ಭಾಸವಾಗುವುದು. ಇದು ಅಸಂಗತವೆನಿಸುತ್ತದೆ) ಮತ್ತು ಈ ಪ್ರಸಂಗದಲ್ಲಿ ಲೇಖಕಿಯ ಹೊಸ ಸೇರ್ಪಡೆ ಎಂದರೆ ದುಶ್ಯಾಸನನಿಗೆ ದ್ರೌಪದಿ ಕಪಾಳ ಮೋಕ್ಷಮಾಡುವುದು ಮತ್ತು ನೆಲದಲ್ಲಿ ಕೆಡವಿ ಕುತ್ತಿಗೆಯನ್ನು ಕಾಲಿನಿಂದ ಮೆಟ್ಟುವುದು. ಯಾವುದೇ ಹೊಸ ಸೇರ್ಪಡೆಯನ್ನು ಮಾಡುವಾಗ ಅದಕ್ಕೆ ಬೇಕಾದ ತಾರ್ಕಿಕ ಅಂಶಗಳನ್ನು ಸುಸಂಬದ್ಧವಾಗಿ ಪ್ರಸ್ತುತ ಪಡಿಸಬೇಕಾಗುತ್ತದೆ. ದ್ರೌಪದಿ ದುಶ್ಯಾಸನನನ್ನು

ಕೆಡುಹುವಷ್ಟು ಸಬಲಳಾಗಿದ್ದರೆ ಅವಳಿಗೆ (ಧರ್ಮರಾಯ ಮೊದಲು ತನ್ನನ್ನು ಪಣಕ್ಕಿಟ್ಟನೋ ತಾನು ಸೋತ ನಂತರವೋ ಎನ್ನುವ) ಧರ್ಮಸಂಬಂಧ ಪ್ರಶ್ನೆಯ ಅಗತ್ಯವೇ ಇರುತ್ತಿರಲಿಲ್ಲ.

ಇನ್ನು ಮೂರನೆಯ ಮತ್ತು ಅತಿಮುಖ್ಯವಾದ ವಿಷಯವೆಂದರೆ ದ್ರೌಪದಿ ಮತ್ತು ಉಪಪಾಂಡವರ ಸಂಬಂಧ. ಈ ತಾಯಿಮಕ್ಕಳ ಸಂಬಂಧದ ಪರಿವೇಷದ ಅರಿವಾಗಬೇಕಾದರೆ ಆ ಕಾಲಕ್ಕೆ ಹೋಗಬೇಕಾಗುತ್ತದೆಯೇ ವಿನಾ ತಾಯಿಯ ಸ್ಥಾನವನ್ನು ಶತಮಾನದಿಂದ ಶತಮಾನಕ್ಕೆ ದೈವತ್ವಕ್ಕೇರಿಸುತ್ತಾ ಸಂಬಂಧದ ಸಹಜತೆಗಳನ್ನೆಲ್ಲಾ ಕಳೆದುಕೊಂಡಿರುವ ಈ ಕಾಲದ ಮೌಲ್ಯಗಳಿಂದ ಅಲ್ಲ. ಘಟೋತ್ಕಜ ಸತ್ತಾಗ ಭೀಮ, ಮತ್ತು ಅಭಿಮನ್ಯು ಸತ್ತಾಗ ಅರ್ಜುನ ಬಹುವಾಗಿ ದುಃಖಿಸಿ ಉಪಪಾಂಡವರು ಸತ್ತಾಗ ಪಾಂಡವರು ತಲೆತಗ್ಗಿಸಿ ಯಾವ ಭಾವವನ್ನೂ ಸೂಚಿಸಲಿಲ್ಲವೆನ್ನುವುದು ಇತ್ತೀಚಿನ ತರ್ಕಗಳಲ್ಲಿ ಒಂದು. ಇದಕ್ಕೆ ಪೂರ್ವಕವಿಗಳಲ್ಲಿ ಆಧಾರ ಸಿಕ್ಕುವುದಿಲ್ಲ. ಇಂದಿನ ವಸಹಾತುಶಾಹಿಯ ಶಿಕ್ಷಣ ಮತ್ತು ವೃತ್ತಿಗಳಿಂದಾಗಿ ಒದಗಿರುವ ಚಿಕ್ಕ ಕುಟುಂಬದಲ್ಲಿನ ಉದ್ಯೋಗಸ್ಥ ದಂಪತಿಗಳ ಮಕ್ಕಳ ಸಂಗೋಪನೆಯ ಒತ್ತಡವನ್ನು ದ್ರೌಪದಿಯ ಕಾಲಕ್ಕೆ ಅಳವಡಿಸುವುದು ಸರ್ವಥಾ ಸರಿಯಲ್ಲ. ಉಪಪಾಂಡವರ ಪೋಷಣೆಯಲ್ಲಿ ಅವರ ತಂದೆಯರು ನೇರ ಪಾಲುದಾರರಾಗಿರಲಿಲ್ಲ ಎನ್ನುವ ನೋವು ಸಹ ದ್ರೌಪದಿಯನ್ನು ಕಾಡುವುದು ಸರಿಯೇ? ಎನ್ನುವ ಪ್ರಶ್ನೆ ಏಳುತ್ತದೆ. ಏಕೆಂದರೆ ಮಹಾಭಾರತದಲ್ಲೇ ಬರುವ ಅನೇಕ ಸಂದರ್ಭಗಳು ಆ ಕಾಲದ ಕುಟುಂಬ ವ್ಯವಸ್ಥೆ ಮತ್ತು ರಾಜಮನೆತನಗಳ ರೀತಿನೀತಿಗಳನ್ನು ಬಹಳ ಪ್ರತ್ಯೇಕವಾಗಿ ಪರಿಭಾವಿಸುವುದಕ್ಕೆ ಎಡೆಮಾಡಿಕೊಡುತ್ತದೆ. ಘಟೋತ್ಕಚನ ತಾಯಿ ಹಿಡಿಂಬೆಯಾಗಲೀ ಅರ್ಜುನನ ಉಪಪತ್ನಿಯರಾದ ಉಲೂಪಿ, ಚಿತ್ರಾಂಗದೆಯರಾಗಲೀ ತಮ್ಮ ಮಕ್ಕಳನ್ನು ವೀರರನ್ನಾಗಿ ಬೆಳೆಸಲೂ ತಮ್ಮ ಮಕ್ಕಳ ತಂದೆಯ ನೆರವಿಗಾಗಿ ಕಾಯಲಿಲ್ಲ ಎನ್ನುವ ಸತ್ಯವೂ ಅಲ್ಲಿದೆ. ಸಮರ್ಥ ಹಾಗೂ ಸಮೃದ್ಧ ತೌರುಗಳನ್ನುಳ್ಳ ರಾಣಿಯರು ತಮ್ಮ ಮಕ್ಕಳನ್ನು ವಿದ್ಯಾಭ್ಯಾಸಕ್ಕಾಗಿ ತಮ್ಮ ತೌರುಗಳಿಗೆ ಕಳಿಸುತ್ತಿದುದೂ, ಸೋದರಮಾವನ ಆಶ್ರಯದಲ್ಲಿ ಆ ಮಕ್ಕಳು ಬೆಳೆಯುತ್ತಿದುದೂ ರಾಮಾಯಣ ಕಾಲದಿಂದಲೂ ರೂಢಿಯಲ್ಲಿದ್ದ ಪದ್ಧತಿ. (ಭರತ ಶತೃಘ್ನರು ಕೈಕೇಯಿಯ ತೌರು ಮನೆಯಲ್ಲಿದ್ದುದು ನಿದರ್ಶನ) ಪಾಂಡವರಿಗೆ ವನವಾಸ ಪ್ರಾಪ್ತವಾದುದೂ ಮಕ್ಕಳನ್ನು ಸಮರ್ಥನಾದ ದ್ರುಪದರಾಜ ಸಾಕುವುದೂ ಆ ಕಾಲದ ನಡವಳಿಕೆಗೆ ಅನುಗುಣವಾಗಿಯೇ ಇದೆ. ಇಷ್ಟಾದರೂ ತಾಯಿ ಮತ್ತು ಮಕ್ಕಳ ಸಂಬಂಧ ಬಹಳ ನವಿರಾದುದೂ, ಭಾವನಾತ್ಮಕವಾದುದೂ ಆದ್ದರಿಂದ ಮಹಿಳೆಯ ದೃಷ್ಟಿಯಿಂದ ಇಂಥ ಪರಿವೀಕ್ಷಣೆ ತುಂಬಾ ಆಳವಾಗಿ ಮತ್ತು ಅಷ್ಟೇ ತೀವ್ರಭಾವದ ಚಿಂತನೆಯ ಅಗತ್ಯ ಇನ್ನೂ ಇದೆ.

ಶೈಲಿಯ ದೃಷ್ಟಿಯಿಂದ ಡಾ. ಪ್ರಭಾವತಿಯವರನು ಜನಪ್ರಿಯ ಕಾದಂಬರಿಯ ದಾಟಿಯನ್ನೇ ಅನುಸರಿಸಿರುವುದು ವಸ್ತುವಿನ ಗಹನತೆಯ ದೃಷ್ಟಿಯಿಂದ ಸರಿಹೊಂದುವುದಿಲ್ಲ. ವಸ್ತ್ರಾಪಹರಣದ ಸಂದರ್ಭದಲ್ಲಿ ದ್ರೌಪದಿ, ಭೀಷ್ಮರಿಗೆ ಹೇಳುವ ಮಾತುಗಳು ''ಅಂಬೆಯ ಸ್ಥಾನದಲ್ಲಿ ನಾನಿದ್ದಿದ್ದರೆ ಅಸಹಾಯಳಾಗಿ ಅಗ್ನಿಪ್ರವೇಶ ಮಾಡುತ್ತಿರಲಿಲ್ಲ. ಬದಲಿಗೆ ನಿಮ್ಮನ್ನೇ ಅಗ್ನಿಗೆ ನೂಕುತ್ತಿದ್ದೆ'' ಎನ್ನುವುದಾಗಲೀ, ಧೃತರಾಷ್ಟ್ರ 'ವರಕೇಳು' ಅಂದಾಗ ''ನೀವು ಮೊದಲು ಈ ಸಿಂಹಾಸನದಿಂದ ಕೆಳಗಿಳಿದು ಅಲ್ಲಿ ಯೋಗ್ಯರಾದವರನ್ನು ಕೂಡಿಸಿ ಆ ಯೋಗ್ಯ ನಿಮ್ಮ ದುರ್ಯೋಧನನಲ್ಲ ಧರ್ಮರಾಯ'' ಎನ್ನುವ ಮಾತಾಗಲೀ, ಮತ್ತು ವರ ಕೇಳುವಂತೆ ಆತ ಹೇಳಿದಾಗ ''ನನಗೆ ಬೇಕಾದುದು ನಿನ್ನಂತಹ ಮೂರ್ಖನ ಸಾವು'' ಎನ್ನುವುದಾಗಲೀ 'ಅಭಿಮನ್ಯು ಸತ್ತಾಗ ನನಗೆ ಸಂತೋಷವಾಯಿತು' ಎನ್ನುವ ಮಾತಾಗಲೀ ದ್ರೌಪದಿಯಂಥ ಉನ್ನತ ಪಾತ್ರಕ್ಕೆ ಶೋಭೆ ತರುವುದಿಲ್ಲ. ಆಕೆ ನಿಷ್ಠುರಳಾಗಿದ್ದಳು. ಬೆಂಕಿಯ ಮಗಳು ಎನ್ನುವುದನ್ನು ಮೂಲ ಭಾರತದಿಂದ ಎಲ್ಲ ಕವಿಗಳೂ ಹೇಳುತ್ತಾರಾದರೂ ಆಕೆ ವಿನಯವಿಲ್ಲದ ಅವಿವೇಕಿ ಮತ್ತು ಸಡಿಲವಾದ ಔಚಿತ್ಯ ಮೀರಿದ ಮಾತುಗಾರ್ತಿ ಎಂದು ಎಲ್ಲೂ ಹೇಳಿಲ್ಲ. ಆಕೆ ಎಲ್ಲ ಕಷ್ಟಗಳನ್ನು ದಿಟ್ಟೆಯಾಗಿ ಎದುರಿಸಿದಳು. ಅಬಲೆಯಂತೆ ಅಳುತ್ತಾ ಕೂಡಲಿಲ್ಲ ಎನ್ನುವುದು ನಿಜವಾದರೂ ರಾಜಮನೆತನದ ರಾಜಪುತ್ರಿ ರಾಜಮರ್ಯಾದೆಯನ್ನು ಎಲ್ಲಿಯೂ ಮೀರಲಿಲ್ಲ ಎನ್ನುವುದೂ ಅಷ್ಟೇ ಸತ್ಯ. ಇಂದಿನ ವಿಮರ್ಶಕರು ಕಟ್ಟಿರುವ 'ಪುರುಷ ಪ್ರಧಾನ' 'ಸ್ತ್ರೀಪ್ರಧಾನ' ಇತ್ಯಾದಿಗಳ ನುಡಿಕಟ್ಟುಗಳನ್ನು ಬಳಸಿ ದ್ರೌಪದಿ ಭಾಷಣ ಮಾಡುವುದೂ ಸಹ ಅಸಹಜವಾಗಿದ್ದು ಸ್ತ್ರೀವಾದಿ ಚಿಂತನೆಯನ್ನು ದ್ರೌಪದಿಯ ಬಾಯಲ್ಲಿ ಹೇಳಿಸುವುದಕ್ಕೂ, ಸ್ತ್ರೀವಾದಿ ದೃಷ್ಟಿಕೋನದಿಂದ ಆ ವಸ್ತುವನ್ನು ಹೊಸ ರೀತಿ ಪರಿಭಾವಿಸುವುದಕ್ಕೂ ಅಂತರವಿದೆ. ಆದರೂ ದ್ರೌಪದಿಯನ್ನೇ ಮುಖ್ಯವಾಗಿಸುವ ಹೊಸ ಪ್ರಯತ್ನ ಇದು ಎಂಬುದಕ್ಕಾಗಿ ಲೇಖಕಿಯನ್ನು ಅಭಿನಂದಿಸೋಣ.

-ಶಾಂತಾನಾಗರಾಜ್

ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ

-ರಮಾ ಗೋವಿಂದರಾಜ್

'ತೊಟ್ಟಿಲು ತೂಗುವ ಕೈ ಜಗತ್ತನ್ನು ತೂಗಬಲ್ಲದು' ಎಂಬ ನಾಣ್ನುಡಿಯಲ್ಲಿ ಎಂಥಹ ಮಹತ್ವವಿದೆ. ನಾಲ್ಕು ಗೋಡೆಗಳ ಮಧ್ಯೆ ಇರುವ ಹೆಣ್ಣು ಹೊಸ್ತಿಲು ದಾಟಿ ಹೊರಜಗತ್ತಿಗೆ ಕಾಲಿಟ್ಟಾಗ ಏನನ್ನಾದರೂ ಸಾಧಿಸಬಲ್ಲಳು. ಪ್ರೋತ್ಸಾಹ, ಉತ್ಸಾಹವಿದ್ದರೆ ಎಂತಹ ಉದ್ಯಮವನ್ನಾದರೂ ನಡೆಸಬಲ್ಲಳು ಎಂಬುದಕ್ಕೆ ಸಾಕ್ಷಿ ಚಾಗಲಟ್ಟಿ ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ.

ಬೆಂಗಳೂರು ನಗರದಿಂದ ೨೫-೩೦ ಕಿ.ಮೀ. ದೂರದಲ್ಲಿರುವ ಚಾಗಲಟ್ಟಿ ಗ್ರಾಮವು (ಮಾರೇನಹಳ್ಳಿ ಪಂಚಾಯ್ತಿ) ಬೆಂಗಳೂರು ಉತ್ತರ ತಾಲ್ಲೂಕಿಗೆ ಸೇರಿದ್ದು, ತಾಲ್ಲೂಕಿನ ಏಕೈಕ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ಇದಾಗಿರುತ್ತದೆ.

ಬೆಂಗಳೂರು ಡೇರಿ, ವಿಲ್ಸನ್‌ಗಾರ್ಡನ್ ವ್ಯಾಪ್ತಿಗೆ ಬರುವ ಈ ಸಂಘವು ೨೮-೮-೯೫ರಲ್ಲಿ ಪ್ರಾರಂಭಗೊಂಡಿದ್ದು ೧೦ ಜನ ಮಹಿಳಾ ಕಾರ್ಯಕಾರಿ ಸಮಿತಿಯವರಿಂದ ಕಾರ್ಯ ಚಟುವಟಿಕೆ ನಡೆಯುತ್ತದೆ. ಸಂಘದ ಅಧ್ಯಕ್ಷರು, ಕಾರ್ಯದರ್ಶಿಗಳು, ಸಮಿತಿಯ ನಿರ್ದೇಶಕರು ಎಲ್ಲಾ ಮಹಿಳೆಯರೇ ಕಾರ್ಯ ನಿರ್ವಹಿಸುತ್ತಿರುತ್ತಾರೆ.

೮೦೦ ಜನಸಂಖ್ಯೆಯುಳ್ಳ ಈ ಗ್ರಾಮದಲ್ಲಿ ೧೦೧ ಮಹಿಳಾ ಸದಸ್ಯರನ್ನು ಒಳಗೊಂಡ ಈ ಸಹಕಾರಿ ಸಂಘವು ಈಗಾಗಲೇ ೩ ಮಹಿಳೆಯರಿಗೆ ಸಾಲ ನೀಡಿ ಅವರ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳಲು ನೆರವಾಗಿರುತ್ತದೆ.

ಹಾಲು ಶೇಖರಿಸುವ ಕೆಲಸದಿಂದ ಹಿಡಿದು ಹಾಲನ್ನು ಬೆಂಗಳೂರು ಡೇರಿಗೆ ಸಾಗಿಸುವ ಕಾರ್ಯದವರೆಗೂ ಮಹಿಳೆಯರೇ ನಿರ್ವಹಿಸುವ ಈ ಸಂಘವು ಈಗಾಗಲೇ ಲಾಭದಾಯಕ ಪ್ರಗತಿಯಲ್ಲಿದೆ.

ಹಾಲುಟೆಸ್ಟರ್ ಶ್ರೀಮತಿ ಭಾಗ್ಯ, ಅಧ್ಯಕ್ಷರಾದ ಶ್ರೀಮತಿ ಪಾರ್ವತಮ್ಮ, ಕಾರ್ಯದರ್ಶಿ ಶ್ರೀಮತಿ ಕಮಲಾಕ್ಷಿ ಇವರುಗಳು ಉತ್ಸುಕತೆಯಿಂದ ಕಾರ್ಯನಿರ್ವಹಿಸುತ್ತಿರುವುದು ಇತರ ಮಹಿಳೆಯರಿಗೆ ಸ್ಫೂರ್ತಿದಾಯಕವಾಗಿದೆ.

ಸಹಕಾರ ಸಂಘದ ಕೆಲಸದ ವೇಳೆ ಬೆಳಿಗ್ಗೆ ೭-೮ ವರೆಗೆ ಸಂಜೆ ೬-೭ ಘಂಟೆಯವರೆಗೆ ಇರುವುದರಿಂದ ಮಹಿಳೆಯರಿಗೆ ಇತರೆ ಮನೆಗೆಲಸಗಳಿಗೆ ಅಡಚಣೆ ಇಲ್ಲದಿರುವುದರಿಂದ ಎಲ್ಲಾ ಮಹಿಳೆಯರೂ ಉತ್ಸಾಹದಿಂದಲೇ ಸಂಘದ ಕೆಲಸದಲ್ಲಿ ಪಾಲ್ಗೊಳ್ಳುತ್ತಾರೆ.

ಪ್ರತಿತಿಂಗಳು ಸಭೆ ಸೇರಿ ಮುಂದಿನ ಆಗು-ಹೋಗುಗಳ ಬಗ್ಗೆ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳುವ ಈ ಸಂಘವು ಪ್ರತಿದಿನ ಹಾಲು ಪೂರೈಸುವ ಗ್ರಾಹಕರಿಗೆ ಹದಿನೈದು ದಿನಗಳಿಗೊಮ್ಮೆ ಹಣ ಸಂದಾಯ ಮಾಡುತ್ತದೆ.

ಈ ಸಂಘವನ್ನು ಇನ್ನೂ ಉತ್ತಮಗೊಳಿಸಿ ಹೆಚ್ಚಿನ ಪ್ರಗತಿ ಸಾಧಿಸುವ ಗುರಿಯನ್ನು ಹಮ್ಮಿಕೊಂಡಿರುವ ಅಧ್ಯಕ್ಷರಾದ ಪಾರ್ವತಮ್ಮನವರಿಗೆ 'ಇದೊಂದು ಶ್ರಮದಾಯಕ ಕೆಲಸವಲ್ಲವೇ' ಎಂದು ಪ್ರಶ್ನಿಸಿದರೆ 'ಯಾವುದು ಶ್ರಮದಾಯಕ ಕೆಲಸವಲ್ಲ ಹೇಳಿ ಗ್ರಾಮೀಣ ಮಹಿಳೆಯರಿಗೆ, ಹಳ್ಳಿಯಲ್ಲಿ ಯಾವುದೇ ಹೆಣ್ಣುಮಕ್ಕಳು ಆರಾಮವಾಗಿ ಕುಳಿತಿರುತ್ತವೆಯೆ ಎಂದು ಮರು ಪ್ರಶ್ನಿಸುತ್ತಾರೆ.

ಎಸ್‌ಎಸ್‌ಎಲ್‌ಸಿ ವರೆಗೆ ವಿದ್ಯಾಭ್ಯಾಸ ಮಾಡಿರುವ ಈ ಸಂಘದ ಮಹಿಳೆಯರು "ನಾವೇನೂ ಹೆಚ್ಚಿಗೆ ಓದಿದವರಲ್ಲ. ಹೊರಗಡೆ ಹೇಗೆ ವ್ಯವಹರಿಸಬೇಕೆಂಬ ಜ್ಞಾನವು ನಮಗೆ ಸಾಲದು. ಆದರೂ ಈ ಸಂಘವನ್ನು ಹೆಚ್ಚಿಗೆ ಅಭಿವೃದ್ಧಿ ಪಡಿಸಿ ಗ್ರಾಮದ ಎಲ್ಲಾ ಮಹಿಳೆಯರನ್ನು ಸದಸ್ಯರನ್ನಾಗಿ ಮಾಡುವುದು ನಮ್ಮ ಮುಖ್ಯ ಧ್ಯೇಯ' ಎಂದು ಹೇಳುವಾಗ ಉತ್ಸಾಹ, ಛಲ, ಎರಡಿದ್ದರೇ ಏನನ್ನಾದರೂ ಸಾಧಿಸಬಹುದು ತೊಟ್ಟಿಲು ತೂಗುವ ಕೈ ಎಂದೆನಿಸುತ್ತದೆ.

★ ★ ★

ನೀವು ನನ್ನನ್ನು ಕ್ರಾಂತಿಕಾರಿಣಿ ಎಂದೋ, ಧರ್ಮ ವಿರೋಧಿ ಎಂದೋ ಕರೆಯಿರಿ. ಆದರೆ ಧರ್ಮದ ಹೆಸರಿನಲ್ಲಿ ಹೆಣ್ಣಿನ ಶೋಷಣೆ ಯಾಗುವುದು ಖಂಡಿತ ನಿಲ್ಲಬೇಕು. ಈ ಶೋಷಣೆ ಮತ್ತು ಅನ್ಯಾಯವನ್ನು ಬೊಟ್ಟುಮಾಡಿ ತೋರಿಸು ವುದೇ ನನ್ನ ಉದ್ದೇಶ. ಅದು ಹೆಣ್ಣಾದ ನನ್ನ ಕರ್ತವ್ಯ ಕೂಡಾ ಆಗಿದೆ.

-ಸಾರಾ ಅಬೂಬಕ್ಕರ್

ಪ್ರೀತಿಯ ಅಚಲಾ

'ಬಾಲ್ಯದಲ್ಲಿ ತಂದೆಯೂ ಯೌವನದಲ್ಲಿ ಗಂಡನೂ ಮುಪ್ಪಿನಲ್ಲಿ ಮಗನೂ ಸಾಕುವುದರಿಂದ ಹೆಣ್ಣಿಗೆ ಸ್ವಾತಂತ್ರ್ಯ ಬೇಡ' ಎಂದು ನಿರ್ಧರಿಸಿಬಿಟ್ಟರು ನಮ್ಮ ಪೂರ್ವಜರು. ಎಷ್ಟೆಷ್ಟೋ ಹೋರಾಟದ ನಂತರವೂ ಇದೇ ಭಾವದಲ್ಲೇ ನಮ್ಮ ಮಧ್ಯಮ ವರ್ಗದ ಪುರುಷ ಗಣ್ಯರು ಬದುಕುತ್ತಿದ್ದಾರೆ. ಇದಕ್ಕೆ ನಮ್ಮ ಪರಿಚಿತ ಕುಟುಂಬದಲ್ಲಿ ನಡೆದ ಸಣ್ಣ ಘಟನೆ ಹೇಳುತ್ತೇನೆ ಕೇಳು. ಒಂದು ಕುಟುಂಬ, ಎಂಬತ್ತು ವರ್ಷದ ಯಜಮಾನ. ಎಪ್ಪತ್ತೈದು ವರ್ಷದ ಹೆಂಡತಿ. ಐವತ್ತೈದು ವರ್ಷದ ಮಗ, ಸೊಸೆ. ಇಬ್ಬರು ಗಂಡು ಮೊಮ್ಮಕ್ಕಳು. ಈ ಕುಟುಂಬಕ್ಕೆ ಇದ್ದ ಒಂದೇ ಆಸ್ತಿಯೆಂದರೆ ಒಂದು ವಿಶಾಲವಾದ ಮನೆ. ಬದುಕು ಏನೋ ತಕ್ಕಮಟ್ಟಿಗೆ ನಡೆಯುತ್ತಿತ್ತು ಎಲ್ಲರ ಮನೆಯಂತೆ! ಆಗ ಒಂದಿಷ್ಟು ಕಲಹ ಈಗ ಒಂದಿಷ್ಟು ಪ್ರೀತಿ. ಈ ಹದದಲ್ಲಿ ಅತಿ ಧನಿಕರೂ ಅಲ್ಲದ ಅತಿ ಬಡವರೂ ಅಲ್ಲದ ಬದುಕು. ಹೀಗಿದ್ದಾಗ ಎಂಬತ್ತು ವರ್ಷದ ಮುದುಕರಿಗೆ ದಿಢೀರನೆ ಸಾವು ಬಂದರೆ ಅದೇನು ಅಂತಹ ಆಶ್ಚರ್ಯ ಸುದ್ದಿಯಾಗಲಿಲ್ಲ. ಆದರೆ ಸುದ್ದಿಯಾದದ್ದು ೭೫ ವರ್ಷದ ಮುದುಕಿಯನ್ನು ಮನೆಯಿಂದ ಮೊಮ್ಮಕ್ಕಳು ಹೊರಹಾಕಿದಾಗ.

ಮುದುಕರಿಗೆ ತಾವು ಕಟ್ಟಿದ ಮನೆಯನ್ನು ಹೆಂಡತಿಯ ಹೆಸರಿಗೆ ವಿಲ್ ಮಾಡಿಸುವ ಅಗತ್ಯ ಕಾಣಲಿಲ್ಲ. ಏಕೆಂದರೆ ಮಗ ಇದ್ದಾನೆ. ಮೊಮ್ಮಕ್ಕಳಿದ್ದಾರೆ. ಅವಳಿಗೆ ಈ ಮನೆಯಲ್ಲಿ ಒಂದು ತುತ್ತು ಅನ್ನ ಸಿಗಲಾರದೇ ಎನ್ನುವ ತರ್ಕ. ವೃದ್ಧರ ಮರಣದ ನಂತರ ತುತ್ತು ಅನ್ನವಿರಲಿ ತಲೆಯ ಮೇಲಿನ ಸೂರೂ ದಕ್ಕದಂತಾಯಿತು. ಮುದುಕಿ ಈಗ ನೆಂಟರ ಮನೆಯಲ್ಲಿ ಅವರು ನೀಡುವ ಕರುಣೆಯ ತುತ್ತಿನೊಂದಿಗೆ ಕಣ್ಣೀರನ್ನೂ ನುಂಗುತ್ತಿದ್ದಾರೆ.

ನಮ್ಮಲ್ಲಿ ಬಹಳ ಜನರಿಗೆ ಹೀಗೇ ತಮ್ಮ ನಂತರ ತಾವು ಮಾಡಿದ ಚಿಕ್ಕದೇ ಆಗಲಿ, ಒಂದಿಷ್ಟು ಆಸ್ತಿಯನ್ನು ತಮ್ಮ ಹೆಂಡತಿಗೆ ಮತ್ತು ನಂತರ ಮಕ್ಕಳು ಮೊಮ್ಮಕ್ಕಳಿಗೆ ಎಂದು ವಿಲ್ ಬರೆಯುವ ಅಗತ್ಯವೇ ಕಾಣುವುದಿಲ್ಲ. ಮೇಲೆ ಹೇಳಿದ ಈ ಮುದುಕಿಯ ಉದಾಹರಣೆಯನ್ನೇ ತೆಗೆದುಕೊಳ್ಳುವುದಾದರೆ ಆಕೆ ತನ್ನ ಹದಿನೈದನೇ ವಯಸ್ಸಿನಲ್ಲೇ ಮದುವೆಯಾಗಿ ಅಖಂಡ ಅರವತ್ತು ವರ್ಷಗಳು ಆತನೊಡನೆ ಸಹಬಾಳ್ವೆ ನಡೆಸಿದ್ದಾರೆ. ಕಷ್ಟ ಸುಖಗಳಿಗೆ ಭಾಗಿಯಾಗಿದ್ದಾರೆ. ಆದರೂ ಆತನಿಗೆ ತನ್ನ ನಂತರ ತನ್ನ ಹೆಂಡತಿಯ ಗತಿಯೇನು ಎನ್ನುವ ಪ್ರಶ್ನೆ ಎದುರಾಗಲಿಲ್ಲ. ಮಗನನ್ನೂ ಮೊಮ್ಮಗನನ್ನೂ ಪೂರ್ತಿಯಾಗಿ ನಂಬಿದರೋ ಅಥವಾ ತಮ್ಮ ನಂತರ ಏನಾದರೆ ತಮಗೇನು ಎನ್ನುವ ಭಾವವೋ ಇಲ್ಲಾ ವಿಲ್ ಬರೆದುಬಿಟ್ಟರೆ ಸತ್ತೇ ಹೋಗುತ್ತೇನೆ ಎನ್ನುವ ಭಯವೋ ಹಾಗೂ ಎಂಬತ್ತಾದರೂ ಗಟ್ಟಿಯಾಗಿದ್ದೇನೆ ಇನ್ನೂ ಹಲವು ವರ್ಷ ಬದುಕುತ್ತೇನೆ ಎನ್ನುವ ನಿರೀಕ್ಷೆಯೋ ಅಂತೂ ಆತ ವಿಲ್ ಬರೆಯಲಿಲ್ಲ. ವೃದ್ಧೆಯ ಬದುಕು ಅಲ್ಲೋಲ ಕಲ್ಲೋಲವಾಗುವುದು ತಪ್ಪಲಿಲ್ಲ.

ಎಲ್ಲ ಮಹಿಳೆಯರನ್ನೂ ವೃದ್ಧಾಪ್ಯದಲ್ಲಿ ಮನೆಯಿಂದ ಹೊರಗೆ ಅಟ್ಟಿಯೇ ಬಿಡುತ್ತಾರೆ ಎನ್ನುವುದು ನನ್ನ ನಿರೀಕ್ಷೆಯಲ್ಲ. ಆದರೆ ಮಹಿಳೆಗೆ ಆರ್ಥಿಕ ಬಲಮಾತ್ರ ಬಾಲ್ಯದಿಂದ ಮರಣದವರೆಗೆ ಅಗತ್ಯವಾಗಿ ಇರಬೇಕು. ಅದು ಆಕೆಗೆ ಮನೋಬಲವನ್ನು ತಂದು ಕೊಡುತ್ತದೆ ಮತ್ತು ಭದ್ರಭವಿಷ್ಯವನ್ನು ಒದಗಿಸುತ್ತದೆ. ಅನೇಕ ಗೃಹಿಣಿಯರು ಅಡುಗೆ ಮನೆಯ ಕೆಲಸ ಮತ್ತು ಮಕ್ಕಳ ಕೆಲಸವನ್ನು ತಮ್ಮ ಆದ್ಯಕರ್ತವ್ಯವೆನ್ನುವಂತೆ 'ವೇತನ ರಹಿತ ನೌಕರಿ'ಯನ್ನಾಗಿ ಸ್ವೀಕರಿಸುತ್ತಾರೆ. ಕಾಯಾ ವಾಚಾ ಮನಸಾ ಮನೆಗಾಗಿ ದುಡಿಯುತ್ತಾರೆ. ವೃದ್ಧಾಪ್ಯದಲ್ಲಿ ಮಹಿಳೆಯ ಈ ದುಡಿತವನ್ನು ಒಂದು 'ಶ್ರಮ'ವೆಂದು ಪರಿಗಣಿಸುವುದೇ ಇಲ್ಲ. 'ಯಾರ ಉಪಕಾರಕ್ಕಾಗಿ ದುಡಿದಳು, ತನ್ನ ಮನೆಗೆ ತಾನೆ ದುಡಿದದ್ದು' ಎನ್ನುವ ಭಾವ ಮಕ್ಕಳಲ್ಲೂ ಕಾಣಿಸಿಕೊಂಡರೆ ಅದಕ್ಕಿಂತಾ ದೊಡ್ಡ ದುರಂತ ಇನ್ನಿಲ್ಲ.

ನಮ್ಮ ಗೃಹಿಣಿಯರಿಗೆ ಗಂಡನ ನಂತರ ತಮ್ಮ ಬದುಕು ಹೇಗೆ ಎನ್ನುವ ಪ್ರಶ್ನೆ ಎಂದೂ ಎದಿರಾಗುವುದೇ ಇಲ್ಲ. ಏಕೆಂದರೆ ವಿಧವೆಯಾಗುತ್ತೇನೆ ಎಂದು ಒಂದು ಕ್ಷಣ ಭಾವಿಸುವುದೂ ಸಂಪ್ರದಾಯಸ್ಥರಿಗೆ ಅತ್ಯಂತ ಅಹಿತವಾದ ಸಂಗತಿಯೇ ಬದುಕಿದ್ದ ಗಂಡನನ್ನು 'ನೀವು ಸತ್ತಮೇಲೆ ನನ್ನ ಗತಿಯೇನು' ಎಂದು ಯಾವ ಮುತ್ತೈದೆಯೂ ಕೇಳಲಾರಳು. ಕೇಳಬಾರದು. ಬದಲಿಗೆ ಬೇಕಾದರೆ ಪ್ರತಿನಿತ್ಯ ದೇವರನ್ನು ''ಮುತ್ತೈದೆ ಸಾವು ಕೊಡು'' ಎಂದು ಬೇಡಬಹುದು. ಇದು ನಮ್ಮ ನಡುವೆ ಇಂದಿಗೂ ರೂಢಿಯಲ್ಲಿರುವ ಅಲಿಖಿತ ನಿಯಮ.

ಹೀಗಾಗಿಯೇ ಎಷ್ಟೋ ಜನ ವಿಧವೆಯರು ತಮ್ಮ ಮನೆಯಲ್ಲಿಯೇ ಪರಾಧೀನ ಬಾಳನ್ನು ನೂಕುತ್ತಿದ್ದಾರೆ. ಸೊಸೆ ಮೊಮ್ಮಕ್ಕಳ ಅವಜ್ಞೆಗೆ ಬಲಿಯಾಗುತ್ತಿದ್ದಾರೆ. ನನ್ನ ನಿನ್ನಂತಹವರಿಗಿರುವ ಹೊಣೆ ಎಂದರೆ ಗಂಡ ಬದುಕಿರುವಾಗಲೇ ಅವನ ನಂತರದ ಬದುಕಿನ ಭದ್ರತೆಗೆ ದಾರಿಮಾಡಿಕೊಳ್ಳಿ ಎನ್ನುವ ಮನೋವೇದಿಕೆಯನ್ನು ಗೃಹಿಣಿಯರಲ್ಲಿ ಉಂಟುಮಾಡುವುದು. ಗಂಡ ಸರ್ಕಾರಿ ವೃತ್ತಿಯಲ್ಲಿದ್ದವರಿಗಂತೂ ವಿಧವಾವೇತನ ಬರುತ್ತದೆ. ಉಳಿದವರ ಗತಿಯೇನು?

ಇತಿ

ನಿನ್ನ ಶತಬಿಷಾ

''ಸೌಂದರ್ಯ ಸ್ಪರ್ಧೆಗಳು ರಾಜಕೀಯ ಪ್ರೇರಿತವಾಗಿವೆ. ನಮ್ಮನ್ನು ಅವರು ಸ್ಪರ್ಧಿಗಳಾಗಿ ನೋಡುವುದಿಲ್ಲ. ನಮ್ಮ ದೇಶದ ಸ್ಥಾನ-ಮಾನದ ಹಿನ್ನೆಲೆಯಲ್ಲಿ ನಮ್ಮನ್ನು ಪರಿಗಣಿಸುತ್ತಾರೆ.'' -ಕರ್ಮಿಂದರ್ ಕೌರ್ (೧೯೬೩ರ 'ಭುವನ ಸುಂದರಿ'ತ್ವಕ್ಕೆ ಭಾರತದ ಸ್ಪರ್ಧಿ)

ಸೌಂದರ್ಯ ಸ್ಪರ್ಧೆಗೆ ವಿರೋಧ

ಎಂ.ಜಿ. ಜ್ಯೋತಿ, ("ಮಹಿಳಾ ಜಾಗೃತಿ")

ಕುಸಿಯುತ್ತಿರುವ ಸಾಮಾಜಿಕ ಮೌಲ್ಯ, ಸದಭಿರುಚಿಯನ್ನು ಬೆಳೆಸಲು ವಿಫಲವಾಗಿರುವ, ಮಾನವೀಯ ಮೌಲ್ಯಗಳನ್ನೇ ಅಣಕ ಮಾಡುವಂತಹ ವಾತಾವರಣ ಸೃಷ್ಟಿಸುತ್ತಿರುವ ಪ್ರಚೋದನಕಾರಿ ಅಶ್ಲೀಲ ಚಲನ ಚಿತ್ರಗಳು, ಯುವಜನತೆಯನ್ನು ತಪ್ಪು ದಾರಿಗೆಳೆಯುತ್ತಿರುವ ಕೀಳು ಅಭಿರುಚಿಯ ಕೆಳದರ್ಜೆಯ ಸಾಹಿತ್ಯ, ಪ್ರಮುಖ ಸ್ಥಳಗಳಲ್ಲೆಲ್ಲಾ ಕಣ್ಣಿಗೆ ರಾಚುವಂತೆ ಮಹಿಳೆಯರ ಸ್ವಾಭಿಮಾನಕ್ಕೆ ಧಕ್ಕೆ ತರುವಂತಹ, ಮುಜುಗರವನ್ನುಂಟು ಮಾಡುವ ಭಿತ್ತಿಚಿತ್ರಗಳು ಇಂದು ಸರ್ವೇ ಸಾಮಾನ್ಯವಾಗಿವೆ. ಇಷ್ಟೇ ಸಾಲದೆಂಬಂತೆ ಇದರ ಮಧ್ಯೆ ಹೆಣ್ಣನ್ನು ಕೇವಲ ಕೇವಲ ದೈಹಿಕಬೊಂಬೆ ಎಂದು ಅವಮಾನ ಮಾಡುವ, ಸೌಂದರ್ಯದ ಹೆಸರಿನಲ್ಲಿ ಅಶ್ಲೀಲತೆ ಹರಡುವ, ಇಡೀ ಸಮಾಜದ ಸಾಂಸ್ಕೃತಿಕ ಮೌಲ್ಯಗಳ ಅಧಃಪತನಕ್ಕೆ ಕಾರಣವಾಗುವ ವಿಶ್ವಸುಂದರಿ ಸ್ಪರ್ಧೆ.

ವಿಶ್ವಸುಂದರಿ ಸ್ಪರ್ಧೆ ಸೇರಿದಂತೆ ಹೆಚ್ಚುತ್ತಿರುವ ಅಶ್ಲೀಲತೆ, ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ವಿರೋಧಿಸಲು ಸೆಪ್ಟೆಂಬರ್ ೨೮ರಂದು ಶಿವಮೊಗ್ಗದಲ್ಲಿ 'ಮಹಿಳಾಜಾಗೃತಿ'ಯು ಅಶ್ಲೀಲತೆ ವಿರುದ್ಧ ರಾಜ್ಯಮಟ್ಟದ ಸಮಾವೇಶವನ್ನು ನಡೆಸಿತು.

ಶಿವಮೊಗ್ಗ ಸ್ಕೌಟ್ ಭವನದ 'ರಾಜಲಕ್ಷ್ಮಿ' ಸಭಾಂಗಣದಲ್ಲಿ ನಡೆದ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ್ತಿ ಹಾಗೂ ಬಳಕೆದಾರರ ವೇದಿಕೆಯ ಪ್ರಮುಖರಾದ ಪೊನ್ನಮ್ಮಾಳ್‌ರವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ ರಾಜ್ಯಕ್ಕೆ ಏನೂ ಉಪಯೋಗವಿಲ್ಲದ, ಅಶ್ಲೀಲತೆಗೆ ಪ್ರಚೋದನೆ ನೀಡುವ 'ವಿಶ್ವಸುಂದರಿ' ಸ್ಪರ್ಧೆಯನ್ನು ವಾಪಾಸ್‌ಪಡೆಯುವಂತೆ ಒತ್ತಾಯಿಸಿ ದರು. ತಂದೆ-ತಾಯಿಗಳಿಗೆ ಮಕ್ಕಳ ಬಗ್ಗೆ ಸ್ವಲ್ಪವಾದರೂ ಜವಾಬ್ದಾರಿ ಇರಬೇಕು. ಅವರನ್ನು ದಾರಿತಪ್ಪಿಸುವಂತಹ ಕೆಲಸ ಸಾಕಷ್ಟು ಪ್ರಮಾಣದಲ್ಲಿ ನಡೆಯುತ್ತಿದೆ ಎಂದು ಕರೆ ನೀಡಿದರು.

'ಪ್ರಜಾವಾಣಿ' ಪತ್ರಿಕೆಯ ಮಂಗಳೂರು ಬಾತ್ಮೀದಾರ ಹಾಗೂ ಲೇಖಕ ಜಿ.ಎನ್. ಮೋಹನ್‌ರವರು 'ಜಾಗತೀಕರಣ ಮತ್ತು ಪ್ರಸಾರ ಮಾಧ್ಯಮ ಹಾಗೂ ಮಹಿಳೆಯರ ಮೇಲದರ ಪರಿಣಾಮ'ದ ಕುರಿತು ಉಪನ್ಯಾಸ ನೀಡುತ್ತಾ ಇಂದು ಜಾಗೃತೀಕರಣವಾಗುತ್ತಿರುವ ಸಂದರ್ಭದಲ್ಲಿ ಹಿಂಸೆ ಮತ್ತು ಸೆಕ್ಸ್ ಎರಡನ್ನೇ ಆಧಾರ ವಾಗಿಟ್ಟುಕೊಂಡು ಪತ್ರಿಕೆಗಳನ್ನು ಮಾರಾಟದ ಸರಕನ್ನಾಗಿಸ ತೊಡಗಿದ್ದಾರೆ ಎಂದರು. ರೂಪರ್ಟ್ ಮೂರ್ಡಕ್ ಎಂಬ ಅಂತರಾಷ್ಟ್ರೀಯ ಮಾಧ್ಯಮದ ಒಡೆಯ ಭಾರತದ ಬಾಗಿಲನ್ನು ತಟ್ಟುತ್ತಿದ್ದಾನೆ. ಇದರಿಂದಾಗಿ ಭಾರತದ ನಾಲ್ಕನೇ ಅಂಗವಾದ ಪತ್ರಿಕೋದ್ಯಮ ನಾಲ್ಕನೇ ದರ್ಜೆಯ ವ್ಯಕ್ತಿಯೊಬ್ಬನ ಕೈಗೆ ಹೋಗುವ ಅಪಾಯವಿದೆ ಎಂದ ಅವರು ಡಿಸೆಂಬರ್ ೬ರ ನಂತರ ನಮ್ಮ ಮನೆಯ ಬಾಗಿಲಿಗೆ ಹೇಗೆ ಕೋಮುವಾದ ಪ್ರವೇಶಿಸಿತೋ ಅದೇ ರೀತಿಯಾಗಿ ಮೂರ್ಡಕ್‌ನಿಂದಾಗಿ ಮೂರನೇ ಪುಟದ ಪತ್ರಿಕೋದ್ಯಮ ನಮ್ಮ ಮನೆ ಬಾಗಿಲಿಗೆ ಬರುವ ಸಂದರ್ಭ ಒದಗಿದೆ. ಮೂರ್ಡೋಕ್‌ರಂತಹವರ ಆಕ್ರಮಣದಿಂದ ಸಂಸ್ಕೃತಿಯನ್ನೇ ನಲುಗಿಸುವ ಸನ್ನಿವೇಶದ ನಿರ್ಮಾಣವಾಗುತ್ತಿದೆ. ಯಾವ ಸೌಂದರ್ಯಗಳು ನಮ್ಮೆಲ್ಲರ ಹೆಮ್ಮೆಯ ಪವಿತ್ರತೆಯ ವಿಷಯ ಗಳಾಗಿದ್ದವೋ ಅವೆಲ್ಲವೂ ವಿದೇಶಿ ಬಹುರಾಷ್ಟ್ರೀಯ ಕಂಪೆನಿಗಳ ಜಾಹೀರಾತು ಬಾಲದಡಿ ಸಿಲುಕಿ ನಿರ್ನಾಮವಾಗುತ್ತಿವೆ. ಬಹುರಾಷ್ಟ್ರೀಯ ಸಂಸ್ಥೆಗಳ ಕೈಯಲ್ಲಿ ಜಾಹೀರಾತು ಮಾಧ್ಯಮ ಮತ್ತು ಕ್ರೀಡಾ ಚಟುವಟಿಕೆ ಸಿಲುಕಿ ಅನಗತ್ಯವಾಗಿ ಬೆತ್ತಲಾಗುವ ಸ್ಥಿತಿ ನಿರ್ಮಾಣವಾಗಿದೆ. ಕಂಪ್ಯೂಟರ್, ಟಿವಿ, ಪತ್ರಿಕೆ, ಜಾಹೀರಾತು ಸೇರಿದಂತೆ ಎಲ್ಲಾ ಮಾಧ್ಯಮಗಳಲ್ಲೂ ಇಂದು ಅಶ್ಲೀಲತೆ ಪ್ರದರ್ಶನಗೊಳ್ಳುತ್ತಿದೆ. ಮಹಿಳೆಯನ್ನು ಬೆತ್ತಲಾಗಿಸಿ ಮತ್ತಷ್ಟು ಕೆಳದರ್ಜೆಗೆ ತಳ್ಳುವ ಕೆಲಸವನ್ನು ವಿದೇಶಿ ಪ್ರಭಾವಿ ಮಾಧ್ಯಮಗಳು ಮಾಡುತ್ತಿವೆ. ಇದಕ್ಕೆ ದಿಢೀರ್ ಜಾಗತೀಕರಣ ಪ್ರಚೋದನೆ ನೀಡುತ್ತದೆ. ರೂಪಾಕನ್ವರ್‌ಳಂತಹ ಹೆಣ್ಣು ಮಕ್ಕಳ ಬಗ್ಗೆ ಬರೆಯ ಬೇಕಾದ ಸ್ಥಳದಲ್ಲಿ ವಿಶ್ವಸುಂದರಿ ಸುದ್ದಿಗಳು, ಶಾಬಾನು ಪ್ರಕರಣ ಬಂದ ಕಾಲಂನಲ್ಲಿ ಅಶ್ಲೀಲ ಬರವಣಿಗೆಗಳು ಬರುತ್ತಿವೆ ಎಂದು ವ್ಯಥೆಯಿಂದ ನುಡಿದ ಮೋಹನ್‌ರವರು ಇದಕ್ಕೆ ದಿಢೀರ್ ಜಾಗತೀಕರಣ ಪ್ರಚೋದನೆ ನೀಡುತ್ತದೆ, ಇಂತಹ ಸಂದರ್ಭದಲ್ಲಿ ಮಹಿಳಾ ಚಳುವಳಿ ಇನ್ನೂ ಸಂಘಟಿತವಾಗಿ ಬೆಳೆಯಬೇಕು ಎಂದು ಸೂಚಿಸಿದರು.

ಸಮಾವೇಶದಲ್ಲಿ 'ಸೌಂದರ್ಯ ಸ್ಪರ್ಧೆಗಳನ್ನು ನಾವೇಕೆ ವಿರೋಧಿಸಬೇಕು' ಎಂಬುದರ ಕುರಿತು ಸಾಹಿತಿ ಬಿದರಳ್ಳಿ ನರಸಿಂಹಮೂರ್ತಿ ಮಾತನಾಡಿ ದೇಹ ಪ್ರದರ್ಶನದಿಂದ ಸೌಂದರ್ಯ ಅಳೆಯುವುದು ಜನಸಾಮಾನ್ಯರ ಸಂಸ್ಕೃತಿ ಅಲ್ಲ, ಅದು ಸಾಮ್ರಾಜ್ಯ ಶಾಹಿಗಳ ಲೂಟಿಕೋರ ಸಂಸ್ಕೃತಿ. ಇಲ್ಲಿಯ ರಾಜಕಾರಣಿಗಳು ಅದಕ್ಕೆ ಕುಮ್ಮಕ್ಕು ನೀಡುತ್ತಿದ್ದಾರೆ. ಅವನತಿ ಕಂಡುಕೊಳ್ಳುತ್ತಿರುವ ಪುರುಷಪ್ರಧಾನ ಸಮಾಜ ವಿನಾಶಕಾಲೇ ವಿಪರೀತ ಬುದ್ಧಿ ಎಂಬ

ಮಾತಿನಂತೆ ವರ್ತಿಸುತ್ತಿದ್ದು ಸ್ತ್ರೀಯನ್ನು ಭೋಗವಸ್ತುವನ್ನಾಗಿ ಕಾಣುತ್ತಿದೆಯೆಂದು ವ್ಯಂಗ್ಯ ಮಾಡಿದರು.

ಸೌಂದರ್ಯ ಸ್ಪರ್ಧೆಯನ್ನು ತಾತ್ವಿಕವಾಗಿ, ಸಾಂಸ್ಕೃತಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ನಾಲ್ಕು ವಿಧಗಳಲ್ಲಿ ವಿರೋಧಿಸ ಬೇಕಾಗುತ್ತದೆ ಎಂದ ಬಿದರಳ್ಳಿಯವರು ವಿಶ್ವದ ಎಲ್ಲೆಡೆ ಸೌಂದರ್ಯ ವನ್ನು ಅಳೆಯುವ ಏಕಸಂಹಿತೆಯಿಲ್ಲ. ಸೌಂದರ್ಯ ಸ್ಪರ್ಧೆಯ ಪ್ರದರ್ಶನಕ್ಕೆ ನಮ್ಮ ಸಂಸ್ಕೃತಿಯಲ್ಲಿ ಅವಕಾಶವಿಲ್ಲ. ಸೌಂದರ್ಯ ಅನ್ನುವುದು ಮನಸ್ಸಿನ ಭಾವನೆ, ಭಾರತೀಯರಿಗೆ ಕಪ್ಪುಕೂದಲ ಕಪ್ಪುಕಣ್ಣಳ ಅಷ್ಟೇನೂ ಬಿಳಿಯೂ ಅಲ್ಲದ ಕಪ್ಪು ಅಲ್ಲದ ಕಂದುವರ್ಣದವಳು ಸುಂದರಿಯಾಗಿ ಕಂಡರೆ ಪಾಶ್ಚಿಮಾತ್ಯರಿಗೆ ಕೆಂಚುಕೂದಲ, ನೀಲಕಣ್ಣಳ, ಬಿಳಿ ಮೈನವಳೇ ಸುಂದರಿ. ಹೀಗಿರುವಾಗ ಸುಂದರಿಯನ್ನು ಆರಿಸಲು ಬಳಸುವ ಮಾನದಂಡವಾದರೂ ಏನು? ದೇಶದಿಂದ ದೇಶಕ್ಕೆ ಮಾನದಂಡಗಳು ಬದಲಾಗುತ್ತಿರುತ್ತದೆ. ಇಂತಹದರಲ್ಲಿ ಸೌಂದರ್ಯಸ್ಪರ್ಧೆ ಅರ್ಥಹೀನ ಎಂದರು. ಇಂತಹ ಸ್ಪರ್ಧೆಗಳ ಮೂಲಕ ಬಹುರಾಷ್ಟ್ರೀಯ ಕಂಪೆನಿಗಳಿಗೆ ನಮ್ಮನ್ನು ನಾವೇ ಮಾರಿಕೊಳ್ಳುತ್ತೇವೆ. ದೂರದರ್ಶನ, ಪತ್ರಿಕೆಗಳೂ ಸೇರಿದಂತೆ ಎಲ್ಲ ಮಾಧ್ಯಮಗಳು ಬಿತ್ತರಿಸುವ ಹೆಣ್ಣಿನ ನಗ್ನರೂಪದ ಜಾಹೀರಾತುಗಳು ಹಾಗೂ ಅಶ್ಲೀಲ ಚಿತ್ರಗಳು, ಸಮಾಜದ ನಿರ್ವೀರ್ಯತೆಯನ್ನು ಪ್ರತಿಬಿಂಬಿಸುತ್ತದೆಯೇ ಹೊರತು ಇದೊಂದು ಬೆಳವಣಿಗೆ ಎನಿಸಿಕೊಳ್ಳಲಾರದು. ಆದ್ದರಿಂದ ಸರ್ಕಾರ ಈ ಸ್ಪರ್ಧೆಯನ್ನು ನಿಲ್ಲಿಸಬೇಕು, ಇಲ್ಲದಿದ್ದಲ್ಲಿ ಉಗ್ರ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ತಿಳಿಸಿದರು.

ನ್ಯಾಯವಾದಿ ಶಶಿಕಲಾ ಉರುಣ್ಕರ್‌ರವರು 'ಸೆಕ್ಸ್ ಪ್ರವಾಸೋದ್ಯಮ, ಮಹಿಳೆಯರ ಮೇಲದರ ಪರಿಣಾಮ' ಕುರಿತು ಮಾತನಾಡಿದರು. ಮಹಿಳೆಯರ ಮೇಲೆ ಎಲ್ಲಾ ಕಡೆಗಳಿಂದಲೂ ಆಕ್ರಮಣಗಳು ನಡೆಯುತ್ತಿದೆ. ಹೆಣ್ಣು ತನ್ನ ತೃಪ್ತಿಗಾಗಿ ವೇಶ್ಯಾವೃತ್ತಿಗೆ ಇಳಿಯುವುದಿಲ್ಲ, ಇಂತಹ ಅಮಾನವೀಯ ಪ್ರಸಂಗಗಳು ದೇವರ ಹೆಸರಿನಲ್ಲೂ ನಡೆಯುತ್ತಿರುವುದು ನಮ್ಮ ದುರಂತ ಎಂದ ಅವರು ಹೆಣ್ಣಿಗೂ ಸಾಧನೆ, ಹಂಬಲದ ತುಡಿತಗಳಿರುತ್ತವೆ, ಸ್ತ್ರೀಕಾರಣ ಕ್ಕಾಗಿಯೇ ಆಕ್ರಮಣ ನಡೆಯುತ್ತದೆ. ದೇಶದಲ್ಲಿ ೩ ಲಕ್ಷಕ್ಕೂ ಹೆಚ್ಚು ಬಾಲವೇಶ್ಯೆಯರಿದ್ದಾರೆ. ಸೆಕ್ಸ್ ಪ್ರವಾಸೋದ್ಯಮದಲ್ಲಿ ಕೆಲಸಗಾರರಾಗಿ ಹೋಗುವವರು ಬಡಜನರೇ ಹೊರತು ಮೇಲ್ವರ್ಗದ ಜನರಲ್ಲ. ಮಹಿಳೆಯರ ಸ್ವಾಭಿಮಾನವನ್ನೇ ನಾಶ ಮಾಡುವ ಈ ಸೆಕ್ಸ್ ಟೂರಿಸಂನ ದುಷ್ಪರಿಣಾಮಗಳನ್ನು ನಾವೀಗಲೇ ಗೋವಾ-ಥೈಲ್ಯಾಂಡ್‌ಗಳಲ್ಲಿ ಕಾಣುತ್ತಿದ್ದೇವೆ ಎಂದರು.

'ಅಶ್ಲೀಲತೆಯ ಹಿಂದಿನ ರಾಜಕೀಯ ಮತ್ತು ಮಹಿಳಾ ಚಳುವಳಿಯ ದಿಕ್ಕ'ನ್ನು ಕುರಿತು 'ಮಹಿಳಾಜಾಗೃತಿ'ಯ ಪಾರ್ವತಿ ಮಾತನಾಡಿದರು. ವಿಶ್ವಸುಂದರಿ ವಿರೋಧಿ ಕ್ರಿಯಾಸಮಿತಿ ರಚಿಸಿ ಜಿಲ್ಲಾ ಮತ್ತು ರಾಜ್ಯಮಟ್ಟದಲ್ಲಿ ಪ್ರತಿಭಟನೆ ನಡೆಸಲಾಗುವುದೆಂದರು. ಸರಕಿನ ಮಾರಾಟಕ್ಕೆ ಹೆಣ್ಣಿನ ದೇಹವನ್ನು ಸಾಧನವಾಗಿ ಬಳಸುವ, ವಿದೇಶಿ ಬಂಡವಾಳವನ್ನು ಆಕರ್ಷಿಸಲು ಹೆಣ್ಣಿನ ಅಂಗಾಂಗಗಳ ಪ್ರದರ್ಶನ ನಡೆಸುವಂತಹ ಈ ವಿಶ್ವಸುಂದರಿ ಸ್ಪರ್ಧೆಯನ್ನು ಎಲ್ಲಾ ಪ್ರಜ್ಞಾವಂತರುಗಳು ತಡಗಟ್ಟಬೇಕೆಂದು ಕರೆ ನೀಡಿದರು.

ಈ ಸಮಾವೇಶದಲ್ಲಿ ೩೦೦ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದ ಮಹಿಳೆಯರೂ ಹಾಗೂ ನಾಗರೀಕರು ನಗರದ ಪ್ರಮುಖ ರಸ್ತೆಗಳಲ್ಲಿ ಪಂಜಿನ ಮೆರವಣಿಗೆಯನ್ನು ನಡೆಸಿ ಗೋಪಿವೃತ್ತದಲ್ಲಿ ಪಟೇಲರ ಪ್ರತಿಕೃತಿಯನ್ನು ದಹನ ಮಾಡಿದರು. ಮಹಿಳೆಯನ್ನು ಕೇವಲ ಲೈಂಗಿಕ ದೃಷ್ಟಿಕೋನದಲ್ಲಿ ಕಾಣುತ್ತಾ, ತಮ್ಮ ಮೋಜು ಹಾಗೂ ಸ್ವಾರ್ಥಕ್ಕಾಗಿ ರಾಜ್ಯಸರ್ಕಾರ ನಡೆಸಲು ನಿರ್ಧರಿಸಿರುವ ವಿಶ್ವಸುಂದರಿ ಸ್ಪರ್ಧೆಯ ವಿರುದ್ಧ ರಾಜ್ಯವ್ಯಾಪ್ತಿ ತೀವ್ರ ಪ್ರತಿಭಟನೆ ಮತ್ತು ಖಂಡನೆ ನಡೆಸಲು ನಿರ್ಧರಿಸಿ ಸಮಾವೇಶದಲ್ಲಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯ್ತು.

ಅಶ್ಲೀಲ ಸಿನಿಮಾ ಮತ್ತು ಬ್ಲೂಫಿಲಂ ಹಾವಳಿ ತಡೆಗಟ್ಟಬೇಕು. ಮಹಿಳೆಯನ್ನು ಕೇವಲ ಲೈಂಗಿನ ವಸ್ತುವನ್ನಾಗಿ ನೋಡುತ್ತಾ ತಮ್ಮ ಮೋಜಿಗೆ ಹಾಗೂ ಲಾಭಕ್ಕಾಗಿ ಅವಳನ್ನು ಬಳಸಿಕೊಂಡು ಮಹಿಳೆಯರನ್ನು ಮತ್ತಷ್ಟು ಅಧೋಗತಿಗೆ ತಳ್ಳುವಂತಹ ಸೌಂದರ್ಯಸ್ಪರ್ಧೆಯನ್ನು ಧಿಕ್ಕರಿಸಬೇಕು. ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳಿಗೆ ಕಾರಣವಾಗಿರುವ ಅಶ್ಲೀಲ ಭಿತ್ತಿಚಿತ್ರಗಳು, ಬ್ಯಾನರ್‌ಗಳು ಹಾಗೂ ಅಂತಹ ಜಾಹಿರಾತುಗಳನ್ನು ಖಂಡಿಸುವ ನಿರ್ಣಯ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸುವ ಹೆಸರಿನಲ್ಲಿ ಅಪ್ರಾಪ್ತ ವಯಸ್ಸಿನ ಹೆಣ್ಣುಮಕ್ಕಳನ್ನು ತಮ್ಮ ವಿಕೃತಿ ಕಾಮಚೇಷ್ಟೆಗೆ ಬಳಸುತ್ತಾ ಅವರನ್ನು ಬಲವಂತವಾಗಿ ಬಾಲವೇಶ್ಯೆ ಯರನ್ನಾಗಿ ಮಾರ್ಪಡಿಸುತ್ತಿರುವ ಪ್ರವೃತ್ತಿ ಖಂಡನಾರ್ಹ ಎಂದೂ ಸಾವಿರಾರು ಮಹಿಳೆಯರ ಬದುಕನ್ನು ಹಾಳುಗೆಡವುತ್ತಿರುವ ಮದ್ಯಪಾನವನ್ನು ಸಂಪೂರ್ಣವಾಗಿ ನಿಷೇಧಿಸುವಂತೆ ಸಮಾವೇಶ ಕರೆ ನೀಡಿದೆ. ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಹಾಗೂ ರಾಜಕೀಯವಾಗಿ ನಮ್ಮ ಜೀವನದ ಎಲ್ಲ ಹಂತಗಳಲ್ಲಿ ದಬ್ಬಾಳಿಕೆ ನಡೆಸುತ್ತಿರುವ ಸಾಮ್ರಾಜ್ಯಶಾಹಿ ವಿರುದ್ಧ ಹೋರಾಟವನ್ನು ತೀವ್ರಗೊಳಿಸಲು ಸಮಾನ ದೃಷ್ಟಿಕೋನ ಹೊಂದಿದ ಸಂಘಟನೆಗಳ ಹಾಗೂ ವ್ಯಕ್ತಿಗಳ ಐಕ್ಯತೆಗೆ ಸಮಾವೇಶ ಕರೆ ನೀಡಿದೆ.

ವಿಶ್ವಸುಂದರಿ ಸ್ಪರ್ಧೆಗೆ ಪ್ರತಿಭಟನೆ

-ಕೆ. ಎಸ್. ವಿಮಲ

ಜನವಾದಿ ಮಹಿಳಾ ಸಂಘಟನೆ ಕಾರ್ಯಕರ್ತರು ಎಸ್.ಎಫ್.ಐ. ಮತ್ತು ಡಿ.ವೈ.ಎಫ್.ಗಳೊಂದಿಗೆ ದಿನಾಂಕ ೬-೯-೯೬ರಂದು ನಡೆಸಿದ ವಿಶ್ವಸುಂದರಿ ಸ್ಪರ್ಧೆ ವಿರೋಧಿ ಪ್ರತಿಭಟನೆ ಚಟುವಟಿಕೆಗಳ ಪಕ್ಷಿನೋಟ.

ಸೌಂದರ್ಯ ಸ್ಪರ್ಧೆ ವಿರೋಧ

೧. ಎ.ಬಿ.ಸಿ.ಎಲ್. ಕಂಪನಿ ಪ್ರಾಯೋಜಿಸಲು ಉದ್ದೇಶಿಸಿರುವ ಸೌಂದರ್ಯ ಸ್ಪರ್ಧೆಗೆ ವ್ಯಾಪಕ ವಿರೋಧ ವ್ಯಕ್ತ ಪಟ್ಟಿದೆ.

೨. ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ವಿವಿಧ ರೀತಿಯ ಪ್ರತಿಭಟನೆ, ಪ್ರತಿರೋಧಗಳನ್ನು ನಡೆಸಲಾಗಿದೆ.

೩. ದಿನಾಂಕ ೩-೮-೯೬ರಂದು ಜನವಾದಿ ಮಹಿಳಾ ಸಂಘಟನೆ SFI - DYFI ಜೊತೆ ಜಂಟಿ ಪತ್ರಿಕಾಗೋಷ್ಠಿ ನಡೆಸಿ ಸೌಂದರ್ಯ ಸ್ಪರ್ಧೆವಿರೋಧಿ ಕಾರ್ಯಕ್ರಮದ ಅಡಿಪಾಯದ ಸೂಚನೆ ನೀಡಿತು.

೪. ೫-೯-೯೬ರಂದು ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಪ್ರತಿಭಟನೆ.

ಬಿಜಾಪುರ ರಸ್ತೆ ತಡೆ ಚಳುವಳಿ

ಗುಲ್ಬರ್ಗ -ಬೀದರ್ - ಸಾರ್ವಜನಿಕ ಸಭೆಗಳು

ತುಮಕೂರಿನಲ್ಲಿ ಸಮತಾ SFI ಜಂಟಿ ಪ್ರತಿಭಟನಾ ಸಭೆ.

೬-೯-೯೬ರಂದು ಬೆಂಗಳೂರಿನಲ್ಲಿ ಜನವಾದಿ SFI, DYFI ಗಳಿಂದ ಜಂಟಿ ಪ್ರತಿಭಟನಾ ಕಾರ್ಯಕ್ರಮ ಮೈಸೂರು ಬ್ಯಾಂಕ್ ವೃತ್ತದಲ್ಲಿ ಉಳಿದ ಜಿಲ್ಲೆಗಳಿಂದ ಮುಖ್ಯಮಂತ್ರಿಗಳಿಗೆ ಟೆಲಿಗ್ರಾಂ ಕಳಿಸಲಾಗಿದೆ.

೫-೯-೯೬ರಂದು ಜನವಾದಿ ಮಹಿಳಾ ಸಂಘಟನೆಯ ಮುತುವರ್ಜಿಯಿಂದ ಸಮಾನ ಮನಸ್ಕ ವ್ಯಕ್ತಿಗಳ, ಸಂಘಟನೆಗಳ ಜಂಟಿ ಸಭೆ. ಸಂಘಟನೆಯ ದ.ಕನ್ನಡ ಜಿಲ್ಲೆ ಹೊರತಂದ ಎಸ್. ಸತ್ಯಾ ರವರ "ಸೌಂದರ್ಯ ಸ್ಪರ್ಧೆ ಅಗತ್ಯವೇ" ಪುಸ್ತಕ ಬಿಡುಗಡೆ.

ಸೌಂದರ್ಯ ಸ್ಪರ್ಧೆ ವಿರೋಧಿ ಕ್ರಿಯಾ ಸಮಿತಿ ರಚನೆ. ಎಚ್.ಎನ್. ನಾಗಮೋಹನ ದಾಸ್ - ಸಂಚಾಲಕರು. ಶ್ರೀಮತಿ ಹೇಮಲತ ಮಹಿಷಿ, ವಿಮಲ ಕೆ.ಎಸ್, ಸಹಸಂಚಾಲಕರು, ಶ್ರೀ ಜಿ.ಕೆ. ಗೋವಿಂದರಾವ್, ಡಾ॥ ವಿಜಯ, ಚಿ.ನ. ಮಂಗಳ, ಕೆ.ವಿ. ಶ್ರೀನಿವಾಸನ್, ಡಾ॥ ಜಿ. ರಾಮಕೃಷ್ಣ, ಎಸ್.ಜಿ. ಸುಶೀಲಮ್ಮ, ಕೆ. ಪ್ರಕಾಶ, ಆರ್. ಶ್ರೀನಿವಾಸ್ - ಸಲಹಾಸದಸ್ಯರು ಮತ್ತು ಹಾಜರಿದ್ದ ಎಲ್ಲ ಸಂಘಟನೆಗಳ ಸದಸ್ಯರನ್ನೊಳಗೊಂಡ ಸಮಿತಿಯ ರಚನೆ.

ಕ್ರಿಯಾ ಸಮಿತಿ ಸಭೆಯ ತೀರ್ಮಾನದಂತೆ ೧೪-೯-೯೬ರಂದು ಮುಖ್ಯಮಂತ್ರಿಗಳ ಬೇಜವಾಬ್ದಾರಿ ಹೇಳಿಕೆಯನ್ನು ಪ್ರತಿಭಟಿಸಿ ಗೃಹಕಛೇರಿ ಕೃಷ್ಣಾ ಮುಂದೆ ಪ್ರತಿಭಟನೆ. ೧೦೦೦ಕ್ಕೂ ಹೆಚ್ಚು ಮಂದಿ ಭಾಗವಹಿಸಿದ ಸಭೆ ಅರ್ಥ ಪೂರ್ಣ.

೭. ೨೦ ಸಾವಿರ ಅಂಚೆ ಪತ್ರ ಚಳುವಳಿ ಪ್ರಾರಂಭ ೧೬-೯-೯೬ರಿಂದ

೮. ೩೦-೯-೯೬ ಮಹಿಳಾ ಸಂಘರ್ಷ ಒಕ್ಕೂಟದ ಪ್ರತಿಭಟನಾ ರ್‍ಯಾಲಿ. ಕ್ರಿಯಾ ಸಮಿತಿಯಿಂದ ಬೆಂಬಲ.

೯. ೨-೧೦-೯೬ ಕ್ರಿಯಾ ಸಮಿತಿಯ ವಿಸ್ತೃತ ಸಭೆ. ಕ್ರಿಯಾ ಸಮಿತಿಗೆ ಇನ್ನೂ ಹಲವು ಸಂಘಟನೆಗಳ ಸೇರ್ಪಡೆ. ಇನ್ನೊಬ್ಬ ಸಂಚಾಲಕಿಯಾಗಿ ಡಾ॥ ವಿಜಯಾ ಆಯ್ಕೆ. ೯-೧೦-೯೬ರಂದು ಸಮಾವೇಶಕ್ಕೆ ತೀರ್ಮಾನ.

೧೦. ಎನ್.ಜಿ.ಓ ಸಭಾಂಗಣದಲ್ಲಿ ಸಮಾವೇಶ.

ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೈಸ್ವಾಮಿ - ಉದ್ಘಾಟನೆ

ಖ್ಯಾತ ಅಂಕಣಗಾರ್ತಿ - ಶ್ರೀಮತಿ ಶಕುಂತಲಾ ನರಸಿಂಹನ್

ಮೈಸೂರು ವಿಶ್ವವಿದ್ಯಾಲದ ಪ್ರಾಧ್ಯಾಪಕ ಶ್ರೀ ಕೆ. ರಾಮದಾಸ್

ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಶ್ರೀಮತಿ ವನಮಾಲ ವಿಶ್ವನಾಥ್

-ಮುಖ್ಯ ಭಾಷಣಕಾರರು-

ಸೌಂದರ್ಯ ಸ್ಪರ್ಧೆಯ ಹಲವು ಆಯಾಮಗಳ ಕುರಿತು ಚರ್ಚೆ, ೨೫೦ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದ ಸಮಾವೇಶದಲ್ಲಿ ೩೧-೧೦-೯೬ರಂದು ರಾಜ್ಯಮಟ್ಟದ ರ್‍ಯಾಲಿಗೆ ಕರೆ.

ರಾಷ್ಟ್ರಮಟ್ಟದಲ್ಲಿ - ಎ.ಐ.ಡಿ.ಡಬ್ಲ್ಯೂ.ಎ ನೇತೃತ್ವದಲ್ಲಿ ಜಂಟಿ ನಿಯೋಗ, ಪ್ರಧಾನಿ ಜೊತೆ ಭೇಟಿ ಮನವಿ ಸಲ್ಲಿಕೆ

ಪ.ಬಂಗಾಳ-ಕಲ್ಕತ್ತದಲ್ಲಿ ಮಹಿಳಾ ಸಂಘಟನೆಗಳನ್ನು ಒಟ್ಟುಸೇರಿಸಿ ಪ್ರತಿಭಟನಾ ಪ್ರದರ್ಶನ.

ಪಾಟ್ನಾ-ಒರಿಸ್ಸಾಗಳಲ್ಲಿ ಬೃಹತ್ ಪ್ರತಿಭಟನಾ ಪ್ರದರ್ಶನ. ಎಲ್ಲ ರಾಜ್ಯ ಘಟಕಗಳಿಂದ ಮುಖ್ಯಮಂತ್ರಿಗಳಿಗೆ (ಕರ್ನಾಟಕದ) ಟೆಲಿಗ್ರಾಂ.

ಕರ್ನಾಟಕದಲ್ಲಿ ಇತರ ಸಂಘಟನೆಗಳಿಂದ ಹಲವು ಕಾರ್ಯಕ್ರಮಗಳು ನಡೆದಿವೆ. ಕರ್ನಾಟಕ ರಾಜ್ಯರೈತಸಂಘ, ಮಹಿಳಾ ಜಾಗರಣ, ಬಿಜೆಪಿ ಮಹಿಳಾ ಮೋರ್ಚಾ, ಕನ್ನಡ ಸಂಘಗಳು ಇತ್ಯಾದಿ. ★

ಅರಣ್ಯೀಕರಣ–ಕರ್ನಾಟಕದ ಸಾಧನೆ

ಶ್ರೀಮಂತ, ಜೀವ ವೈವಿಧ್ಯ ಹಾಗೂ ಅಮೂಲ್ಯ ಸಸ್ಯರಾಶಿ ಹೊಂದಿರುವ ಅರಣ್ಯ ಕರ್ನಾಟಕ ರಾಜ್ಯಕ್ಕೆ ನಿಸರ್ಗದತ್ತ ಕೊಡುಗೆ. ಭವ್ಯ ಸಸ್ಯಗಳು ಹಾಗೂ ಜೀವರಾಶಿಗಳ ಸಂಯೋಗದೊಂದಿಗೆ ತುಂಬಿ ತುಳುಕುತ್ತಿರುವ ಅರಣ್ಯಗಳು ಜನರ ಜೀವನಾಡಿಯಂತಿವೆ. ಜನರ ಅಳಿವು, ಸಂಪದ್ಭರಿತ ಅರಣ್ಯದ ಮೇಲೆ ಅವಲಂಬಿಸಿದೆ. ಹೀಗಿದ್ದರೂ ಅತಿಕ್ರಮಣ ಪ್ರವೇಶದಿಂದಾಗಿ ನಶಿಸುತ್ತಿರುವ ಅರಣ್ಯ ಪ್ರದೇಶಕ್ಕೆ ನವತಾರುಣ್ಯವನ್ನು ನೀಡುವುದು ಮಾತ್ರವಲ್ಲದೆ, ನಮ್ಮೆಲ್ಲರ ಉಳಿವಿವಾಗಿ ಹೊಸ ಪ್ರದೇಶದಲ್ಲಿ ಅರಣ್ಯವನ್ನು ಬೆಳೆಸಿ ಹಾಳಾಗುತ್ತಿರುವ ಅರಣ್ಯ ಸಂಪತ್ತನ್ನು ರಕ್ಷಿಸಬೇಕಾಗಿದೆ.

ಸರ್ಕಾರದ ದಿಟ್ಟ ಹೆಜ್ಜೆ

೧೯೯೫-೯೬ರ ಸಾಲಿನಲ್ಲಿ ೬೪,೩೫೦ ಹೆಕ್ಟೇರ್ ಭೂಮಿಯ ಅರಣ್ಯೀಕರಣ ಈ ದಿಶೆಯಲ್ಲಿ ಕ್ಷೀಣಿಸುತ್ತಿರುವ ಅರಣ್ಯ ಪ್ರದೇಶವನ್ನು ಊರ್ಜಿತಗೊಳಿಸಲು ಮತ್ತು ಆಸಕ್ತಿಯಿಂದ ಜನರು ಭಾಗವಹಿಸಲು "ಜಂಟಿ ಅರಣ್ಯ ಯೋಜನೆ ಮತ್ತು ಸಂರಕ್ಷಣೆ" ಎಂಬ ನೂತನ ಯೋಜನೆ ಪ್ರಾರಂಭ. ಜೈವಿಕ ವೈವಿಧ್ಯತೆಯನ್ನು ಕಾಪಾಡಲು ನೆರವಾಗಲು ೨೦೦ ಗ್ರಾಮ ಸಮಿತಿಗಳ ರಚನೆ.

ಅತಿಕ್ರಮಣ ಅರಣ್ಯ ಪ್ರದೇಶಗಳ ಸಕ್ರಮ

ಪರಿಶಿಷ್ಟ ಜಾತಿ ಪಂಗಡ ಗಿರಿಜನರು, ಬಡಜನರು ೨೭-೪-೧೯೭೮ಕ್ಕೆ ಮೊದಲು ಅತಿಕ್ರಮಣ ಮಾಡಿದ ೧೭,೦೦೭ ಹೆಕ್ಟೇರ್ ಅರಣ್ಯ ಪ್ರದೇಶವನ್ನು ಸಕ್ರಮಗೊಳಿಸಲು ಕೇಂದ್ರ ಸರ್ಕಾರದ ಅನುಮತಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸುವುದರೊಂದಿಗೆ ೨೧,೫೪೯ ಕುಟುಂಬಗಳಿಗೆ ವರದಾನ.

ರಾಜ್ಯದಲ್ಲಿ ದೊರೆಯುವ ಬೀಳುಭೂಮಿಯಲ್ಲಿ ಅರಣ್ಯ ಬೆಳೆಸಲು ಯೋಜನೆ. ಈ ದಿಶೆಯಲ್ಲಿ ಮುಂದಿನ ಮೂರು ವರ್ಷಗಳಲ್ಲಿ ಲಭ್ಯವಿರುವ ೨೨,೬೦೦ ಎಕರೆ ಬೀಳು ಭೂಮಿಯಲ್ಲಿ ಹುಣಸೆ, ಸಾಗುವನಿ, ಬೊಂಬು, ಕತ್ತಾಳೆ, ಪಲ್ಪ್‌ವುಡ್ ಮರಗಳನ್ನು ಬೆಳೆಸುವ ಯೋಜನೆಯ ಅನುಷ್ಠಾನ.

★ ಕರ್ನಾಟಕ ವಾರ್ತೆ

ಕಂಬನಿ

ಸುಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರ್ತಿ, ಕಮ್ಯುನಿಸ್ಟ್ ಪಕ್ಷದ ಹಿರಿಯ ನಾಯಕಿ, ಶ್ರೀಮತಿ ಗೋದಾವರಿ ಪರುಳೇಕರ್ ದಿನಾಂಕ 9-10-96ರಂದು ತಮ್ಮ 90ನೆಯ ವಯಸ್ಸಿನಲ್ಲಿ ನಿಧನರಾದರು. ಹುಟ್ಟಿದ್ದು ಪುಣೆಯಲ್ಲಿ. ಆದರೆ ಮುಂಬಯಿ ಅವರ ಹೋರಾಟದ ಕಾರ್ಯ ಚಟುವಟಿಕೆಗಳ ಕೇಂದ್ರ. ಕಾಣಾದ ವರ್ಲಿಗಳೆಂಬ ಆದಿವಾಸಿಗಳನ್ನು ಸಂಘಟಿಸಿ, ಜಮೀನ್ದಾರಿಕೆಯ ಉಪಟಳಗಳ ವಿರುದ್ಧ ಏಕಾಕಿಯಾಗಿ ಸೆಣಸಿದ ಗೋದಾವರಿ ಅವರದು ಚರಿತ್ರೆ ನಿರ್ಮಿಸಿದಂಥ ಅನನ್ಯ ರೀತಿಯ ಹೋರಾಟವಾಗಿತ್ತು. 1930ರಲ್ಲಿ ಗಿರಣಿ ಕಾರ್ಮಿಕರ ಮುಷ್ಕರದಲ್ಲಿ ಸಕ್ರಿಯ ಪಾತ್ರ ನಿರ್ವಹಿಸಿದ ಅವರು ಇತ್ತೀಚಿನ ಸಾಕ್ಷರತಾ ಚಳುವಳಿಯಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದರು. ಹೋರಾಟದ ಸಂದರ್ಭದಲ್ಲಿ ಎದುರಾದ ಎಲ್ಲ ಕಷ್ಟ, ಆತಂಕ, ಅಹಿತಕರ ಸನ್ನಿವೇಶಗಳನ್ನು ಏಕಾಕಿಯಾಗಿ ಎದುರಿಸಬಲ್ಲ ಧೈರ್ಯ ಸ್ಥೈರ್ಯಗಳ ಪ್ರತೀಕವಾಗಿದ್ದ ಗೋದಾವರಿ ತಾಯಿ, ಆದಿವಾಸಿಗಳೊಂದಿಗೆ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು, ಭೂ ಮಾಲಿಕರಿಗೆ ಭೂತ ಬಿಡಿಸುವವರೆಗೆ ಹಿಂದೆಗೆಯದೆ ಹೋರಾಡಿದ ತೇಜಸ್ವಿನಿ.

ಸಾಮುದಾಯಿಕ ಹೋರಾಟದಲ್ಲಿ ಎಚ್ಚೆತ್ತ ಮಹಿಳೆಯರೂ, ಕೆಳಸ್ತರದ ಜನರೂ ಒಂದಾದರೆ, ಆ ಚಳುವಳಿ ಹೇಗೆ ಫಲಿಸಬಲ್ಲದೆಂಬುದಕ್ಕೆ 'ಮಾನವ ಎಚ್ಚೆತ್ತಾಗ' ಎಂಬ ಗೋದಾವರಿಯವರ ಆತ್ಮಚರಿತ್ರೆ ಸಾಕ್ಷಿಯಾಗಿದೆ. ಈ ಧೀರ ವೀರ ಮಹಿಳೆಯ ಮರಣಕ್ಕಾಗಿ 'ಅಚಲ' ಕಂಬನಿ ತುಂಬಿದ ನಮನಗಳನ್ನು ಅರ್ಪಿಸುತ್ತದೆ.

Reg. No. MAG (5) PRC, DEGL 036/89/87
BOOK POST/Periodicals

To,

If Undelivered please return to :
Jagruthi Mahila Adhyayana Kendra
401, Vijay Tower, 2nd Main, RPC Layout
Vijayanagar, II Stage, Bangalore-560 040.

ACHALA - Edited by N. Gayathri, Published by Dr. G. Ramakrishna on behalf of Jagruthi Mahila Adhyayana Kendra, 26, 1st Main Road, Vyalikaval, Bangalore-03. Typeset & Printing by **AKSHARA PRINTERS**, B'lore-4. Ph.: 624082